

# ಅಖಿಲ ಭಾರತ ಪತ್ರಿಕೆ

## ಮಾರ್ಚ್ 2025

# ಭೌತಿಕದ ದೇಹ ಸರ್ವಸ್ವವಲ್ಲ

ಬೆಲೆ : 15/-



ಫೋಟೊ: ಇಮೇಜಿಂಗ್ ಸಾವಿತ್ರಿ

ಭೌತಿಕದ ದೇಹದವತಾರ ಕ್ಷಣಿಕ

**ಅಖಿಲ ಭಾರತ ಪತ್ರಿಕೆ**

**ಮಾರ್ಚ್ 2025**

ಸಂಪುಟ: 35 ಸಂಚಿಕೆ: 03



**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ



**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


## ಪರಿವಿಡಿ

### ಭೌತಿಕದ ದೇಹ ಸರ್ವಸ್ವವಲ್ಲ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಭೌತಿಕದ ದೇಹದವತಾರ ಕ್ಷಣಿಕ** 2
ಅನು: ಶ್ರೀ ಪುಟ್ಟು ಕುಲಕರ್ಣಿ

**ಬಾಹ್ಯ ರೂಪಗಳು ಹೀಗಿವೆ:** 3
**ನಾವು 'ನನ್ನ ತನ'ವೆಂದು ಕರೆಯುವಂತಹುದು** 3
**ನೈಜ ಮಹಿಮೆ** 5
**ನಮ್ಮ ಸತ್ತೆಯ ಮೌನವಾದ ಆಳಗಳಲ್ಲಿ** 5
**ಜೀವ ಮತ್ತು ಚೈತ್ಯ ಸತ್ತೆ** 6
**ಕಪಟದ ಜೀವ ಮತ್ತು ನೈಜ ಜೀವ** 7
**ಜೀವದ ಧ್ವನಿಯನ್ನು ನಾವು ಕೇಳದಿರುವಂತೆ ತಡೆಯುವದಾದರೂ ಏನು** 8
ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್

**ಆತ್ಮವನ್ನು ಅರಸುವುದು ಹೇಗೆ?** 9
**ವೈಯಕ್ತಿಕ ಪ್ರಗತಿಗೆ ದಿವ್ಯತ್ವದೊಡನೆ ಸಂಪರ್ಕ** 11
**ಚೈತ್ಯ ಪುರುಷನ ಒಂದು ಸುಂದರ ರೂಪ** 13
**ಚೈತ್ಯ ಪುರುಷನನ್ನು ಪ್ರಗತಿಗೊಳಿಸುವದು** 15
ಅನು: ನಾಗಜ್ಯೋತಿ ಮಾನ್ವಿ

**ನಮ್ಮ ನಿರ್ಣಯಗಳನ್ನು ದೃಢಮಾಡಿಕೊಳ್ಳುವುದು ಹೇಗೆ** 16
**ಬಡೋದೆಯ ಮಹಾರಾಣಿಗೆ ಶ್ರೀ ಅರವಿಂದರ ಮಾರ್ಗದರ್ಶನ** 20
**ಅಮೇರಿಕೆಯ ಮಿಸ್ ಮಾರ್ಗರೇಟ್‌ರಿಗೆ ಮಾರ್ಗದರ್ಶನ** 23
ಅನು: ಡಾ॥ ಮಹಾದೇವ ಸಕ್ರಿ

**'ವಿಶ್ವಾತ್ಮದೊಡನೆ ಮಿಲನ' – ಶ್ರೀಮಾತೆಯ ಭರವಸೆ** 33
**ಸಾಕ್ಷಾತ್ಕಾರ ಮತ್ತು ಐಕ್ಯತೆ** 34
ಅನು: ಶ್ರೀ ಕಿಶೋರಕುಮಾರ ಕಾಸಾರ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 38
ಅನು: ಜಾನ್ವಿ

**ಶಿಕ್ಷಣ ಮತ್ತು ನೀತಿ** 46
– ಶ್ರೀ ಅರವಿಂದರು ಮತ್ತು ಶ್ರೀಮಾತೆ

**ವಾರ್ತಾಪತ್ರ** 58

## ಭೌತಿಕದ ದೇಹದವತಾರ ಕ್ಷಣಿಕ

ಭೌತಿಕದ ದೇಹದವತಾರವಿಲ್ಲಿ ವಿಭ್ರಮೆಗೆ ಇಳಿದ ರೂಪ
ಬರಿ ಕವಚ ದೇಹ, ಆ ದಿವ್ಯ ಶಕ್ತಿ ಆಳದಲಿ ಅಡಗಿ ವಾಸ
ಪರಮಾತಿ ಪರಮ ಸಹನೆಯಾ ಸ್ಥಿತಿಯ ಹುಸಿಗುರುತನಿರಿಸಿಕೊಂಡು
ಯುಗಗಳುದಧಿಯಾ ಮೂಲಕವೆ, ಅವನ ನಾಜೂಕು–ನೌಕೆ ಮುಂದು

ನಿತ್ಯ ಸ್ಥಾಯಿಯಿಹ ದೇವಜ್ಯೋತಿಯೊಲು ಚೈತನ್ಯವಿತ್ತು ಆಗ
ಪರಮ ಆಶ್ಚರ್ಯ ರೂಪದಲಿ ತಾನು ಪ್ರಜ್ವಲಿತ ಭಾಗವಾಗ,
ತನ್ನ ಸೌಂದರ್ಯ ತನ್ನ ಪ್ರಭೆಯನ್ನು ತನ್ನಲ್ಲೆ ಕಂಡುಕೊಂಡು
ಆ ಕಲಾಕಾರ, ನಮ್ಮ ನಶ್ವರದಬಡ ಬದುಕಿನಮರವಿಂದು

ಅದಿತಿ ರೂಪಗಳ ಆದ್ಯತೆಯ ತೆರದಿ ಸ್ಥಾಪಿಸಿದ ಸ್ಥಪತಿಯಿವನು,
ಅಪರಿಚಿತವಾದ ಆ ಮೂಲವಾಸಿ, ದರ್ಶಿಸಲು ಬಂದು ತಾನು
ತನ್ನ ಸ್ವಂತಿಕೆಯ ಮಾಯೆಗಳಿಗೆಲ್ಲ, ಗಮನವಿರಿಸೆ ದೀಕ್ಷಿತನು
ವಿಶ್ವ ಚಿಂತನವ ದೇವಕಣದಲ್ಲಿ ಹುದುಗಿಸುತ ಆಗಲವನು

**– ಪುಟ್ಟು ಕುಲಕರ್ಣಿ**

**– ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 3 ಪುಟ 33**

## ಅವನ ಹೃತ್ಕಮಲವನ್ನೀಗ ಅಪರಿಮೇಯದಭೀಪ್ಸೆಯದುವು

ಅವನ ಹೃತ್ಕಮಲವನ್ನೀಗ ಅಪರಿಮೇಯದಭೀಪ್ಸೆಯದುವು;
ಕೃತುವಾಗಿ ನಿತ್ಯ, ವಶವರ್ತಿಗೊಳಿಸಿಕೊಂಡೀಗ ಅರಿತ ತಾವು,
ಆ ಭೂಮ–ಭವ್ಯ ಅತಿಮಾನುಷೀಯ ಆಕಾರವನ್ನು ಈಗ
ಸೂಕ್ಷ್ಮಾತಿಸೂಕ್ಷ್ಮ ಗ್ರಹಣದಲಿ ಮತ್ತೆ ಮನನವಾಗುತಲಿ ಬೇಗ

ಅವನ ದಿಟ್ಟಿಯದು ಊರ್ಧ್ವದೆಡೆಯತ್ತ ದರ್ಶಿಸೆನೆ ಖೇಖಮಧ್ಯ
ಅದೃಶ್ಯವಾಗಿ ಸ್ಥಿತವಿರುವ ದಿವ್ಯದೌನತ್ಯ ಸ್ಪರ್ಶ ಸಾಧ್ಯ,
ವ್ಯಾವೃತ್ತಿಯಲ್ಲಿ ಅಧಿರೂಢವಾಗಿ ಅತಿಸತ್ತೆ ಇಹುದು ಸತತ
ಆ ಭೂಮ–ಭವ್ಯ ಲೋಕವನ್ನೀಗ ಅಧಿರೋಹಗೊಳಿಸೆ ತುಡಿತ.

**– ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 5 ಪುಟ 76**

ಚಿಂದಿ–ಚಿಂದಿಯಲು ಅನುಗಾಲ ನಾನು ದೇವ–ಕಣ ರೂಪವಿಹೆನು;
ಪತನಗೊಂಡರೂ, ಪರಮ ಪಾವನದ ದಿವ್ಯತ್ವವಾಗಿ ನಾನು;
ತಳಕೆ ಅದುಮಿದರೂ, ಔನ್ನತ್ಯಕ್ಕೇರೆ ಪುಟಿದೇಳುತಿರುವ ನಾನು,
ಕತ್ತರಿಸುತಿದ್ದರೂ, ಕತ್ತೆತ್ತಿ ಚಿರದ–ಜೀವನವ ಗಳಿಸುತಿಹೆನು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/541 – ಶ್ರೀ ಅರವಿಂದರು**

## ಬಾಹ್ಯ ರೂಪಗಳು ಹೀಗಿವೆ:

**– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

...ನಿನ್ನ ಜೀವನದ ಉದ್ದೇಶ ಮತ್ತು ಗುರಿಯನ್ನು ಎಂದೂ ಮರೆಯಬೇಡ. ಶ್ರೇಷ್ಠ ಅನ್ವೇಷಣೆಯ ಸಂಕಲ್ಪವು ಯಾವಾಗಲೂ ನಿನ್ನ ಮೇಲೆ ಇರಬೇಕು; ನೀನು ಏನು ಮಾಡುವೆಯೋ ಅದು ಮತ್ತು ನೀನು ಏನಾಗಿರುವೆಯೋ ಅದರ ಮೇಲೆ ಇರಬೇಕು, ನಿನ್ನ ಸತ್ತೆಯ ಎಲ್ಲಾ ಚಲನೆಗಳ ಆಡಳಿತವನ್ನು ಮಾಡುವ ಒಂದು ದೊಡ್ಡ ಬೆಳಕಿನ ಪಕ್ಷಿಯ ರೀತಿಯಲ್ಲಿ.

ನಿನ್ನ ಪ್ರಯತ್ನದ ಆಯಾಸರಹಿತ ನಿರಂತರತೆಯಲ್ಲಿ, ಒಂದು ಆಂತರಿಕ ಬಾಗಿಲು ಇದ್ದಕ್ಕಿದ್ದಂತೆ ತೆರೆದುಕೊಳ್ಳುವದು ಮತ್ತು ನೀನು ಒಂದು ಕಾಂತಿಭರಿತ ವೈವಿಧ್ಯತೆಯನ್ನು ಪ್ರವೇಶಿಸುವೆ. ಅದು ನಿನಗೆ ಅಮರ್ತ್ಯತೆಯ ಒಂದು ದೃಢ ನಂಬಿಕೆಯನ್ನು ತರುವದು. ನೀನು ಯಾವಾಗಲೂ ನಿನ್ನ ಉಳಿವಿಗಾಗಿ ಯಾವಾಗಲೂ ಅವಲಂಬಿಸಿದ್ದ ಮತ್ತು ಮುಂದೆಯೂ ಅವಲಂಬಿಸಿರುವ ಒಂದು ದೃಢವಾದ ಅನುಭವವೇ ಅದಾಗಿದೆ. ಅದೇನೆಂದರೆ, ಈ ಬಾಹ್ಯ ರೂಪಗಳು ಮಾತ್ರ ನಾಶವಾಗುವವು. ನಿನ್ನ ನೈಜರೂಪಕ್ಕೆ ಸಂಬಂಧಿಸಿದಂತೆ ಅವು ನಿಜವಾಗಲೂ ಹಳೆಯದಾದ ಮೇಲೆ ಎಸೆಯುವ ಉಡುಪುಗಳಂತೆ ಇವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/35 – ಶ್ರೀಮಾತೆ**

## ನಾವು 'ನನ್ನ ತನ'ವೆಂದು ಕರೆಯುವಂತಹುದು

...ಯಾರಾದರೂ 'ನನ್ನ ತನ'ದ ಬಗ್ಗೆ ಚಿಂತಿಸಿದಾಗ ಅವರು ದೇಹದ ಬಗ್ಗೆ ಚಿಂತಿಸುವರು. ಅದು ಸಾಮಾನ್ಯ ವಿಷಯ. ವ್ಯಕ್ತಿಗತ ನೈಜತೆಯೇ ದೇಹದ ನೈಜತೆ

– ಆಂತರಿಕ ಅಭಿವೃದ್ಧಿಗಾಗಿ ಯಾರಾದರೂ ಶ್ರಮವಹಿಸಿದ್ದರೆ ಮತ್ತು ತನ್ನ ಸತ್ತೆಯಲ್ಲಿ ಸ್ವಲ್ಪ ಹೆಚ್ಚು ಸ್ಥಿರವಾಗಿರುವದನ್ನು ಕಾಣಲು ಪ್ರಯತ್ನಿಸಿದ್ದರೆ, ಆತನಿಗೆ ಈ 'ಏನೋ ಒಂದು' 'ತನ್ನ ತನ'ವೆಂಬುದರ ಅರಿವಾಗುವದು. ಈ 'ಏನೊ ಒಂದು' ಎಲ್ಲಾ ಕಾಲದಲ್ಲೂ ಮತ್ತು ಎಲ್ಲಾ ಬದಲಾವಣೆಗಳಲ್ಲೂ ಶಾಶ್ವತವಾಗಿ ಜಾಗೃತವಾಗೇ ಮುಂದುವರಿಯುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/310 – ಶ್ರೀಮಾತೆ**

'ಸ್ವತಃ ನಾವೇ' ಆಗಬೇಕಾಗಿರುವದು ನಾವು ಮಾಡಲೇಬೇಕಾದ ಒಂದು ವಿಷಯ; ಆದರೆ ನಮ್ಮ ಆಂತರ್ಯದೊಳಗೆ ಇರುವದೇ ನಮ್ಮ ನೈಜ 'ಸ್ವರೂಪ'. ನಮ್ಮ ಸತ್ಯ ಮತ್ತು ದಿವ್ಯ ಸತ್ತೆಯಾಗಿರುವ ಈ ಅತ್ಯುನ್ನತ ಸತ್ತೆಯು ಸ್ವ–ಪ್ರಕಟಿತ ಮತ್ತು ಕ್ರಿಯಾಶೀಲವಾಗಲು ನಾವು ಪಾಲಿಸಬೇಕಾದ ನಿಯಮವೇನೆಂದರೆ ನಾವು ನಮ್ಮ ಬಾಹ್ಯ ಸತ್ತೆಯಾದ ದೇಹ, ಪ್ರಾಣ ಮತ್ತು ಮನಸ್ಸನ್ನು ದಾಟಿ ಮುಂದೆ ಸಾಗಿರಬೇಕು. ಆಂತರಿಕವಾಗಿ ವೃದ್ಧಿಸಿ, ಆಂತರಿಕವಾಗಿ ಜೀವಿಸುವದರಿಂದ ಮಾತ್ರ ನಾವು ಇದನ್ನು ಅನ್ವೇಷಿಸಬಹುದು. ಅದನ್ನು ಒಮ್ಮೆ ಸಾಧಿಸಿದೆವೆಂದರೆ, ಅಲ್ಲಿಂದ ಆಧ್ಯಾತ್ಮಿಕ ಅಥವಾ ದಿವ್ಯ ಮನಸ್ಸು, ಪ್ರಾಣ, ಶರೀರವನ್ನು ಸೃಷ್ಟಿಸಬೇಕು. ಮತ್ತು ಈ ಉಪಕರಣಗಳ ಮೂಲಕ ಒಂದು ಪ್ರಪಂಚದ ಸೃಷ್ಟಿಯನ್ನು ತಲುಪಬೇಕು. ಅದು ದಿವ್ಯ ಜೀವನದ ನೈಜ ಪರಿಸರವಾಗಿರುವದು. ಪ್ರಕೃತಿಯ ಶಕ್ತಿಯು ನಮ್ಮ ಮುಂದೆ ಹೂಡಿರುವ ಅಂತಿಮ ಧ್ಯೇಯವು ಇದೇ ಆಗಿದೆ. ಹಾಗಾದರೆ ಇದೇ ಮೊದಲು ಅವಶ್ಯಕತೆ, ಅಂದರೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಚೇತನವನ್ನು, ತನ್ನೊಳಗಿರುವ ದಿವ್ಯ ನೈಜತೆಯನ್ನು ಅನ್ವೇಷಿಸಬೇಕು ಮತ್ತು ಅದನ್ನು ತನ್ನ ಎಲ್ಲಾ ಸತ್ತೆಯಲ್ಲಿ ಮತ್ತು ಜೀವನದಲ್ಲಿ ವ್ಯಕ್ತಪಡಿಸಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 21/1059 – ಶ್ರೀ ಅರವಿಂದರು**

... ಈಗ ಗೋಚರಿಸುತ್ತಿರುವ ನಮ್ಮ ಅಹಂಕಾರಭರಿತ ಮನಸ್ಸು ಮತ್ತು ಪ್ರಾಣವು ನಮ್ಮ ಆಂತರ್ಯದಲ್ಲಿರುವ ಗೂಢ ದಿವ್ಯತ್ವದ ಶಕ್ತಿಗೆ ಪರಿವರ್ತನೆಗಾಗಿ ಮೊಟ್ಟ ಮೊದಲಿಗೆ ಶರಣಾಗಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/309–10 – ಶ್ರೀ ಅರವಿಂದರು**

# ನೈಜ ಮಹಿಮೆ

ನಿಜಕ್ಕೂ, ಒಂದೇ ಒಂದು ಸತ್ಯವಾದ ದುರಂತದ ವಿಷಯವೆಂದರೆ, ತನ್ನ ಜೀವ, ಚೈತ್ಯ ಸತ್ತೆಯ ಬಗ್ಗೆ ಜಾಗೃತವಾಗದಿರುವದು ಮತ್ತು ತನ್ನ ಜೀವನದಲ್ಲಿ ಅದರಿಂದ ಸಂಪೂರ್ಣವಾಗಿ ಮಾರ್ಗದರ್ಶನವನ್ನು ಪಡೆಯದಿರುವದು.

ತನ್ನ ಜೀವವನ್ನು ಕಂಡುಕೊಳ್ಳದೆ ಮತ್ತು ಅದರ ನಿಯಮಗಳಿಗೆ ಅನುಗುಣವಾಗಿ ಜೀವಿಸದೆ ಸಾಯುವದೇ ನಿಜವಾದ ಅಪಜಯ.

ಮತ್ತು ತನ್ನಲ್ಲಿಯ ದಿವ್ಯತೆಯನ್ನು ಗ್ರಹಿಸಿ ಆತನ ನಿಯಮಗಳಿಗೆ ಅನುಗುಣವಾಗಿ ಜೀವಿಸುವದೇ ನಿಜವಾದ ಮಹಾಕಾವ್ಯ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/277 – ಶ್ರೀಮಾತೆ**

## ನಮ್ಮ ಸತ್ತೆಯ ಮೌನವಾದ ಆಳಗಳಲ್ಲಿ

... ನಮ್ಮ ಸತ್ತೆಯ ಮೌನಯುಕ್ತ ಮತ್ತು ಪ್ರಶಾಂತ ಆಳಗಳಲ್ಲಿ ಒಂದು ದೀಪವು ನಿರಂತರವಾಗಿ ಬೆಳಗುತ್ತಿದೆ. ಅದೇ ಚೈತ್ಯ ಚೇತನದ ಬೆಳಕು. ಆ ಬೆಳಕಿಗಾಗಿ ಹುಡುಕು, ಶೋಧನೆ ಮಾಡು. ಅದರ ಮೇಲೆ ಗಮನವನ್ನು ಕೇಂದ್ರೀಕರಿಸು; ಅದು ನಿನ್ನ ಆಂತರ್ಯದಲ್ಲಿ ಇದೆ. ದೃಢ ಸಂಕಲ್ಪದೊಂದಿಗೆ ಮುಂದುವರೆಯುವದರಿಂದ ನೀನು ನಿಶ್ಚಿತವಾಗಿ ಅದನ್ನು ಕಂಡುಹಿಡಿಯುವೆ. ಮತ್ತು ನೀನು ಅದನ್ನು ಪ್ರವೇಶಿಸುತ್ತಿದ್ದಂತೆ, ಅಮೃತತ್ವದ ಭಾವದಲ್ಲಿ ಜಾಗೃತನಾಗುವೆ, ಅದು ನೀನು ಯಾವಾಗಲೂ ಜೀವಿಸಿದ್ದೆ, ನೀನು ಯಾವಾಗಲೂ ಜೀವಿಸುವೆ ಎಂಬ ಭಾವ; ನೀನು ನಿನ್ನ ದೇಹದಿಂದ ಸಂಪೂರ್ಣವಾಗಿ ಸ್ವತಂತ್ರನಾಗುವೆ; ನಿನ್ನ ಜಾಗೃತ ಅಸ್ತಿತ್ವವು ಅದನ್ನು ಅವಲಂಬಿಸಿರುವದಿಲ್ಲ; ಆಗ ನೀನು ಪ್ರಕಟವಾಗಿರುವ ನಶ್ವರ ರೂಪಗಳಲ್ಲಿ ಈ ದೇಹವು ಸಹ ಒಂದಾಗಿರುವದು ಅಷ್ಟೇ. ಸಾವು ನಂತರದಲ್ಲಿ ಇಲ್ಲವಾಗುವದಲ್ಲ, ಅದೊಂದು ಬದಲಾವಣೆ ಮಾತ್ರ. ಎಲ್ಲಾ ಭಯವೂ ತತ್‌ಕ್ಷಣದಲ್ಲಿ ಅಗೋಚರವಾಗುವದು ಮತ್ತು ನೀನು ಸ್ವತಂತ್ರ ಮಾನವನ ಶಾಂತ ದೃಢ ನಂಬಿಕೆಯೊಂದಿಗೆ ಜೀವನದ ಪಯಣವನ್ನು ಮುಂದುವರೆಸುವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/83–84 – ಶ್ರೀಮಾತೆ**

# ಜೀವ ಮತ್ತು ಚೈತ್ಯ ಸತ್ತೆ

ಜೀವವು ದಿವ್ಯಕ್ಕೆ ಸೇರಿದುದಾಗಿದೆ. ವಿಕಸನದೊಳಗಿನ ದಿವ್ಯ ತತ್ತ್ವವಾಗಿ ಅದರೊಳಗಡೆಗೆ ಜೀವವು ಅವರೋಹಣ ಮಾಡುವದು. ಅಜ್ಞಾನದಿಂದ ಬೆಳಕಿನ ಕಡೆಗೆ ವ್ಯಕ್ತಿಯು ವಿಕಸನವಾಗಲು ಅದು ನೆರವಾಗುವದು.

ವಿಕಸನದ ಹಾದಿಯಲ್ಲಿ ಅದು ಒಂದು ಚೈತ್ಯ ವ್ಯಕ್ತಿ ಅಥವಾ 'ಜೀವದ ವೈಯಕ್ತಿಕತೆ'ಯ ಅಭಿವೃದ್ಧಿ ಪಡಿಸುವದು. ವಿಕಸನವಾಗುತ್ತಿರುವ ಮನಸ್ಸು, ಪ್ರಾಣ ಮತ್ತು ದೇಹಗಳನ್ನು ಉಪಕರಣಗಳಾಗಿ ಉಪಯೋಗಿಸಿ ಜೀವನದಿಂದ ಜೀವನಕ್ಕೆ ಆ ಚೈತ್ಯ ವ್ಯಕ್ತಿಯು ವೃದ್ಧಿಸುವರು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/118 – ಶ್ರೀ ಅರವಿಂದರು**

ಅನೇಕ ಸಲ ಚೈತ್ಯ ಸತ್ತೆಯ ಅಭಿವ್ಯಕ್ತತೆಯಾಗಿದೆ ಅಭೀಪ್ಸೆ. – ದಿವ್ಯತೆಯ ಕೇಂದ್ರದ ಸುತ್ತಲೂ ವ್ಯವಸ್ಥಿತವಾಗಿರುವ ನಮ್ಮ ಭಾಗ; ಮಾನವ ಸತ್ತೆಗಳ ಅಂತರಾಳದಲ್ಲಿರುವ ಸಣ್ಣ ದಿವ್ಯ ಜ್ವಾಲೆ. ನೀನು ನೋಡು, ಪ್ರತಿಯೊಬ್ಬ ಮಾನವನ ಆಂತರ್ಯದಲ್ಲಿ ಈ ದಿವ್ಯ ಜ್ವಾಲೆಯು ಅಸ್ತಿತ್ವದಲ್ಲಿ ಇದೆ; ಸ್ವಲ್ಪ ಸ್ವಲ್ಪವಾಗಿ, ಎಲ್ಲಾ ಅವತಾರಗಳು ಮತ್ತು ಕರ್ಮ ಮತ್ತಿತರ ಮೂಲಕ, ಅದರ ಸುತ್ತಲೂ ಒಂದು ಸತ್ತೆಯು ರೂಪುಗೊಳ್ಳುವದು, ಅದನ್ನು ಥಿಯಾನ್ "ಚೈತ್ಯ ಸತ್ತೆ" ಎಂದು ಕರೆದರು. ಚೈತ್ಯ ಸತ್ತೆಯು ಸಂಪೂರ್ಣವಾಗಿ ಅಭಿವೃದ್ಧಿಯಾದಾಗ, ಅದು ಒಂದು ವಿಧವಾದ ದೇಹದ ಅಥವಾ ಜೀವದ ವ್ಯಕ್ತಿಗತ ಉಡವಾಗುವದು. ಪರಮೋನ್ನತನ ಒಂದು ಭಾಗವಾಗಿದೆ ಜೀವ. ವ್ಯಕ್ತಿಗತ ರೂಪದಲ್ಲಿ ಜೀವವು ಪರಮೋತ್ತಮವಾಗಿದೆ; ಮತ್ತು ಒಂದೇ ಒಂದು ಪರಮೋತ್ತಮನು ಇರುವದರಿಂದ, ಒಂದೇ ಒಂದು ಜೀವವು ಮಾತ್ರ ಇರುವದು. ಆದರೆ ಲಕ್ಷಾಂತರ ವ್ಯಕ್ತಿಗತ ರೂಪಗಳನ್ನು ಹೊಂದಿದೆ. ಈ ಜೀವವು ಒಂದು ದಿವ್ಯ ತೇಜೋ ಬಿಂದುವಾಗಿ ಪ್ರಾರಂಭವಾಗುವದು – ನಿರ್ವಿಕಾರಿ, ನಿರಂತರ ಮತ್ತು ಅನಂತವಾದುದು ಸಹ (ಆಯಾಮಕ್ಕಿಂತಲೂ ಸಾಧ್ಯತೆಯಲ್ಲಿ ಅನಂತವಾದುದು). ಮತ್ತು ಎಲ್ಲಾ ಅವತಾರಗಳ ಮೂಲಕ ದಿವ್ಯದ ಪ್ರಭಾವವನ್ನು ಪಡೆದಿರುವದು ಮತ್ತು ಅದಕ್ಕೆ ಪ್ರತಿಕ್ರಿಯಿಸಿರುವದೆಲ್ಲಾ ಹಂತ ಹಂತವಾಗಿ ಜೀವದ ಸುತ್ತಲೂ ನಿರ್ದಿಷ್ಟ ಆಕಾರವನ್ನು ಹೊಂದುವದು, ಅದು ಹೆಚ್ಚು ಹೆಚ್ಚು ಜಾಗೃತವಾಗುವದಲ್ಲದೆ ವ್ಯವಸ್ಥಿತವೂ ಆಗುವದು. ಅಂತಿಮವಾಗಿ ಅದು ತನಗೆ ತಾನೇ ಒಡೆಯನಾದ ಸಂಪೂರ್ಣ ಜಾಗೃತ ವ್ಯಕ್ತಿಗತ ಸತ್ತೆಯಾಗುವದು, ಮತ್ತು ದೈವೀ ಸಂಕಲ್ಪದಿಂದ

ಮಾತ್ರ ಚಲಿಸುವದು. ಅಂದರೆ, ಪರಮೋತ್ತಮನ “ವ್ಯಕ್ತಿಗತ ಪ್ರಕಟಣೆ” ಇದನ್ನೇ ನಾವು “ಚೈತ್ಯ ಸತ್ತೆ” ಎಂದು ಕರೆಯುವದು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, 25 ಜುಲೈ, 1962**

## ಕಪಟದ ಜೀವ ಮತ್ತು ನೈಜ ಜೀವ

ಹೆಚ್ಚು ವಿಭಿನ್ನವಾಗಿ ಅಭಿವೃದ್ಧಿಯಾಗಿದ್ದರೆ ... ಪ್ರಾಣಿಯನ್ನು ಹೋಲುವ ಬಹು ಮುಖ್ಯವಾದ ಉದ್ರೇಕದ ಹೃದಯವು ಮಾನವನ ಮುಂಭಾಗದಲ್ಲಿ ಇದೆ. ಅದರ ಭಾವನೆಗಳು ಅಹಂಕಾರದ ಉದ್ವೇಗದಿಂದ ಕೂಡಿರುವದು; ಬುದ್ಧಿಪೂರ್ವಕವಲ್ಲದ ಕುರುಡು ಮರ್ಮತೆಯನ್ನು ಹೊಂದಿರುವದು ಮತ್ತು ತಮ್ಮ ಕುಂದುಕೊರತೆಗಳು, ವಿಕಾರಗಳು ಮತ್ತು ಸಾಮಾನ್ಯವಾಗಿ ಜಿಪುಣತನದ ಅವನತಿಗಳೊಂದಿಗಿನ ಪ್ರಾಣಿಕ ಪ್ರೇರಣೆಗಳ ಆಟವಾಗಿರುವದು. – ಇಂದ್ರಿಯ ಲಾಲಸೆ, ಆಸೆ ಮತ್ತು ಕೋಪಗಳಿಂದ ಹೃದಯವು ಆಕ್ರಮಿತವಾಗಿರುವದು. ತೀವ್ರವಾದ ಅಥವಾ ಭಯಂಕರವಾದ ಬೇಡಿಕೆ ಅಥವಾ ಕ್ಷುದ್ರ ಲೋಭಗಳನ್ನು ಹೊಂದಿರುವದು. ಅಸ್ಪಷ್ಟ ಮತ್ತು ಕೆಳಗೆಬಿದ್ದ ಪ್ರಾಣ ಶಕ್ತಿಯ ಕ್ಷುಲ್ಲಕತೆ ಮತ್ತು ಪ್ರತಿಯೊಂದು ಪ್ರೇರಣೆಗೆ ಗುಲಾಮನಾಗಿ ಕೀಳು ಮಟ್ಟಕ್ಕೆ ಇಳಿಯುವದು. ಉದ್ವೇಗದ ಹೃದಯ ಮತ್ತು ಇಂದ್ರಿಯ ಸಂವೇದನಾಭರಿತ ಪ್ರಾಣಗಳ ಮಿಶ್ರಣವು ಆಸೆಗಳ ಒಂದು ದೋಷಪೂರಿತ ಜೀವವನ್ನು ಮಾನವನಲ್ಲಿ ಸೃಷ್ಟಿಸುವವು; ಇದೇ ಒರಟು ಮತ್ತು ಅಪಾಯಕಾರಿಯಾದ ಅಂಶ. ಇದನ್ನು ತರ್ಕವು ನಂಬದೆ ಇರುವದು ಸರಿಯಾಗಿಯೇ ಇದೆ ಮತ್ತು ಅದನ್ನು ನಿಯಂತ್ರಣದಲ್ಲಿ ಇಡುವದು ಅವಶ್ಯಕವೆಂದೂ ಸಹ ಅದು ಹೇಳುವದು. ನಮ್ಮ ಕಚ್ಚಾ ಮತ್ತು ಒತ್ತಾಯಿಸುವ ಪ್ರಾಣಿಕ ಸ್ವಭಾವದ ಮೇಲೆ ಅದು ಎಷ್ಟು ನಿಯಂತ್ರಣ ಮತ್ತು ನಿರ್ಬಂಧವನ್ನು ದೃಢಪಡಿಸುವದು ಎಂಬ ವಿಷಯವು ಯಾವಾಗಲೂ ಅನಿಶ್ಚಿತ ಮತ್ತು ನಂಬಲು ಅಸಾಧ್ಯವಾದುದು.

ಆದರೆ ಮಾನವನ ನೈಜ ಜೀವವು ಇರುವದಿಲ್ಲ. ಅದು ಸ್ವಭಾವದ ಯಾವುದೋ ಪ್ರಕಾಶಮಾನವಾದ ಗವಿಯಲ್ಲಿರುವ ಅಗೋಚರವಾದ ನೈಜ ಹೃದಯದಲ್ಲಿ ಅಡಗಿದೆ; ಅಲ್ಲಿ ದಿವ್ಯ ಬೆಳಕಿನ ಅಲ್ಪ ಸ್ವಲ್ಪ ಒಳ ವ್ಯಾಪಿಸುವಿಕೆಯ ಕೆಳಗಡೆ ನಮ್ಮ ಜೀವವು ಇದೆ. ಅದು ಒಂದು ಮೌನವಾದ ಅತ್ಯಂತ ಆಂತರಿಕ ಸತ್ತೆ. ಅದರ ಬಗ್ಗೆ ಕೆಲವರು ಮಾತ್ರ ಅರಿತಿರಬಹುದು. ಎಲ್ಲರಿಗೂ ಜೀವವಿದ್ದರೂ, ಕೆಲವರು ಮಾತ್ರ ತಮ್ಮ ನೈಜ ಜೀವದ ಬಗ್ಗೆ ಜಾಗೃತರಾಗಿರುವರು ಅಥವಾ ಅವರು ಮಾತ್ರ ಅದರ

ನೇರ ಪ್ರೇರಣೆಯನ್ನು ಅನುಭವಿಸುವರು. ದಿವ್ಯದ ಸಣ್ಣ ಕಿರಣವು ಅಲ್ಲಿ ನೆಲೆಸಿದೆ ಅದು ನಮ್ಮ ಸ್ವಭಾವದ ಅಸ್ಪಷ್ಟ ಹೊರೆಯನ್ನು ಆಧರಿಸಿದೆ ಮತ್ತು ಅದರ ಸುತ್ತಲೂ ಚೈತ್ಯ ಸತ್ತೆಯು ವೃದ್ಧಿಸುವದು. ಅಂದರೆ ರೂಪಿತವಾದ ಜೀವ ಅಥವಾ ನಮ್ಮೊಳಗಿನ ನೈಜ ಮಾನವನು ವೃದ್ಧಿಸುವನು. ಆತನೊಳಗಿನ ಈ ಚೈತ್ಯ ಸತ್ತೆಯು ವೃದ್ಧಿಸುತ್ತಿದ್ದಂತೆ ಮತ್ತು ಅದರ ದಿವ್ಯತೆ ಮತ್ತು ಪ್ರೇರಣೆಗಳನ್ನು ಹೃದಯದ ಚಲನೆಗಳು ಪ್ರತಿಬಿಂಬಿಸಲು ತೊಡಗಿದಾಗ ಮಾನವನು ತನ್ನ ಜೀವದ ಬಗ್ಗೆ ಹೆಚ್ಚು ಹೆಚ್ಚಾಗಿ ಜಾಗೃತನಾಗುವನು. ಆಗ ಆತನು ಉನ್ನತ ಪ್ರಾಣಿಯಾಗುವದನ್ನು ನಿಲ್ಲಿಸಿ ಆತನಲ್ಲಿಯ ಪರಮೋತ್ತಮ ದೈವದ ಮಿನುಗು ನೋಟಗಳಿಗೆ ಜಾಗೃತನಾಗಿ ಅದರ ಆಳವಾದ ಜೀವನ ಮತ್ತು ಚೇತನದ ಸೂಚನೆಗಳಿಗೆ ಹೆಚ್ಚು ಹೆಚ್ಚು ಅವಕಾಶವನ್ನು ನೀಡುವನು ಮತ್ತು ದಿವ್ಯತೆಯ ಪ್ರೇರಣೆಗೂ ಅನುವು ಮಾಡಿಕೊಡುವನು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/150 – ಶ್ರೀ ಅರವಿಂದರು**

## ಜೀವದ ಧ್ವನಿಯನ್ನು ನಾವು ಕೇಳದಿರುವಂತೆ ತಡೆಯುವದಾದರೂ ಏನು

ಬಾಹ್ಯ ಸತ್ತೆ, ಅದು ಸ್ವತಃ ಹೆಚ್ಚು ಜವಾಬ್ದಾರಿಯುತವಾದುದಲ್ಲ. ಅದು ಸಾಮಾನ್ಯವಾಗಿ ಪ್ರಕೃತಿಯ ಶಕ್ತಿಗಳ ಅಟಿಗೆಯಾಗಿರುವದು. ಆದರೆ ಆಳವಾದ ಚೇತನ ಅಥವಾ ಆಂತರಿಕ ಉನ್ನತ ಸತ್ತೆಯು ನಮ್ಮ ಒಡೆಯ ಮತ್ತು ನಮ್ಮ ಅದೃಷ್ಟದ ನಿರ್ಮಾಪಕನಾಗಿರುವದು. ಆದುದರಿಂದಲೇ ಪ್ರಕೃತಿಯ ಎಲ್ಲಾ ವೇದನೆಗಳು ಮತ್ತು ಜೀವನದ ಎಲ್ಲಾ ಅಸಂಬದ್ಧತೆಗಳನ್ನು ಕೊನೆಗಾಣಿಸಲು ಈ ಪರಮಾಧಿಕಾರವನ್ನು ಹೊಂದಿರುವ ಚೇತನವನ್ನು ಅನ್ವೇಷಿಸಿ ಅದರೊಂದಿಗೆ ಒಂದಾಗುವದು ಬಹಳ ಮುಖ್ಯ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/357**

ಮನಸ್ಸಿನಿಂದ ಬರುವದೆಲ್ಲವೂ ಸಂಪೂರ್ಣವಾಗಿ ತುಲನಾತ್ಮಕ. ಮನಸ್ಸನ್ನು ಹೆಚ್ಚು ಹೆಚ್ಚಾಗಿ ಶಿಕ್ಷಣಕ್ಕೆ ಒಳಪಡಿಸಬೇಕು. ಅದು ತನ್ನನ್ನು ತಾನು ವಿವಿಧ ಆಯಾಮಗಳಿಗೆ ಅನ್ವಯಿಸಿಕೊಳ್ಳಬೇಕು. ಆಗ ಅದು ಮುಂದಿಡುವ ವಿಷಯಗಳು ಅಥವಾ ಅದು ಹೇಳುವ ವಿಷಯಗಳು ಸತ್ಯವೆಂದು ಹೇಳುವ ಸಾಧ್ಯತೆಗಳು ಅಧಿಕವಾಗುವದು.

ತರ್ಕದ ಮೂಲಕ ಯಾವುದರ ಸತ್ಯವನ್ನಾದರೂ ಸಮರ್ಥಿಸಬಹುದು; ಆದರೆ ಅದು ನೈಜವಾಗುವದಿಲ್ಲ. ಅದು ಒಂದು ಅಭಿಪ್ರಾಯವಾಗಿ ಮಾತ್ರ ಉಳಿಯುವದು. ಅಥವಾ ಅದು ಪೂರ್ವಗ್ರಹವಾಗಿರುವದು ಸ್ವತಃ ಅವಿಶ್ವಸನೀಯವಾದ ತೋರ್ಕೆಗಳ ಜ್ಞಾನವನ್ನು ಆಧರಿಸಿರಬಹುದು.

ಆದುದರಿಂದ ಇದರ ಹೊರಗೆ ಬರಲು ಇರುವದು ಒಂದೇ ಒಂದು ಹಾದಿ. ಅದೇನೆಂದರೆ ತನ್ನ ಜೀವವನ್ನು ಕಂಡುಕೊಳ್ಳಲು ಶೋಧನೆ ಮಾಡುವದು. ಅದು ಇರುವದು. ತನ್ನನ್ನು ತಾನು ಕಾಣದಂತೆ ಮಾಡಿಕೊಳ್ಳಲು ಅದು ಪ್ರಯತ್ನಿಸುವದಿಲ್ಲ. ಕಷ್ಟವನ್ನು ಕೊಡಬೇಕೆಂದು ಅದು ನಿನ್ನೊಂದಿಗೆ ಆಟವಾಡುವದಿಲ್ಲ. ಅದಕ್ಕೆ ಬದಲಾಗಿ, ಅದನ್ನು ಕಂಡುಕೊಳ್ಳಲು ಮತ್ತು ಅದರ ಧ್ವನಿಯನ್ನು ಆಲಿಸಲು ನಿನಗೆ ಬಹಳ ನೆರವಾಗುವದು. ನಿನ್ನ ಜೀವ ಮತ್ತು ನಿನ್ನ ಕ್ರಿಯಾಶೀಲ ಚೇತನದ ನಡುವೆ ನಿನಗೆ ತೊಂದರೆ ನೀಡಲು ಎರಡು ವೈಲಕ್ಷಣ್ಯಗಳು ಮಾತ್ರ ಇವೆ. ಅವು ಯಾವುವೆಂದರೆ ಮನಸ್ಸು ಮತ್ತು ಪ್ರಾಣ. ಅವುಗಳು ಹೆಚ್ಚು ಶಬ್ದ ಮತ್ತು ಗಲಾಟೆಯನ್ನು ಮಾಡುವವು. ಜೀವವು ಶಬ್ದ ಮಾಡುವದಿಲ್ಲ ಅಥವಾ ಆದಷ್ಟೂ ಕಡಿಮೆ ಶಬ್ದವನ್ನು ಮಾಡುವದು. ಹೀಗಾಗಿ ಅವುಗಳ ಶಬ್ದವು ನಿನ್ನ ಜೀವದ ಧ್ವನಿಯನ್ನು ಕೇಳಿಸದಂತೆ ಮಾಡುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/23–24 – ಶ್ರೀಮಾತೆ**

## ಆತ್ಮವನ್ನು ಅರಸುವುದು ಹೇಗೆ?

**– ಅನು: ನಾಗಜ್ಯೋತಿ ಮಾನ್ವಿ**

ಅವಶ್ಯಕವಾಗಿರುವ ಮೊದಲನೆಯ ಅಂಶವೆಂದರೆ, ಪರಮಾತ್ಮನಿಗಾಗಿ ಅಭೀಪ್ಸೆ ಪಡುವದಾಗಿದೆ.

ನೀವು ಮಾಡಬೇಕಾಗಿರುವ ನಂತರದ ವಿಷಯವೆಂದರೆ, ಅದನ್ನು ಅಂದರೆ ನಿಮ್ಮ ಅಭೀಪ್ಸೆಯನ್ನು ಜೋಪಾನ ಮಾಡಿಕೊಳ್ಳುವದಾಗಿದೆ. ಅದನ್ನು ಯಾವಾಗಲೂ ಜಾಗರೂಕತೆಯಿಂದ ಮತ್ತು ಎಚ್ಚರದಿಂದ ಜೀವಂತವಾಗಿಡಬೇಕು. ಇದಕ್ಕಾಗಿ ಬೇಕಾಗಿರುವದೇನೆಂದರೆ, ಏಕಾಗ್ರತೆ. ಪರಮಾತ್ಮನ ಸಂಕಲ್ಪ ಮತ್ತು ಉದ್ದೇಶಕ್ಕೆ ಸಮಗ್ರವಾದ ಹಾಗೂ ಪರಿಪೂರ್ಣವಾದ ಅರ್ಪಣೆಯೊಂದಿಗೆ, ಆತನ ಮೇಲೆ ಏಕಾಗ್ರತೆಯನ್ನು ಇಡಬೇಕಾಗುತ್ತದೆ.

ಹೃದಯದಲ್ಲಿ ಕೇಂದ್ರೀಕರಿಸಿ, ಅದರ ಒಳಗೆ ಪ್ರವೇಶಿಸಿ, ಆಳವಾಗಿ ಮತ್ತು ಆಳವಾಗಿ ಅಂತರಂಗದಲ್ಲಿ ಪ್ರವೇಶಿಸಿ ದೂರ ಸಾಗಿ. ನಿಮಗೆ ಎಷ್ಟು ದೂರ ಸಾಧ್ಯವೋ ಅಷ್ಟು ದೂರ ಸಾಗಿರಿ. ಚೆದುರಿರುವ ನಿಮ್ಮ ಪ್ರಜ್ಞೆಯ ಎಲ್ಲಾ ಎಳೆಗಳನ್ನು ಒಗ್ಗೂಡಿಸಿ, ಅವುಗಳನ್ನು ಕಟ್ಟಿ, ಮತ್ತೂ ಆಳಕ್ಕೆ ಧುಮುಕಿ.

ನಿಮ್ಮ ಹೃದಯದ ಪ್ರಶಾಂತತೆಯಲ್ಲಿ ಒಂದು ಆಳವಾದ ಜ್ವಾಲೆಯು ಉರಿಯುತ್ತಾ ಇದೆ. ಅದು ನಿಮ್ಮೊಳಗಿರುವ ದೈವತ್ವ– ನಿಮ್ಮ ನಿಜವಾದ ಸತ್ತೆಯಾಗಿದೆ. ಅದರ ಧ್ವನಿಯನ್ನು ಆಲಿಸಿರಿ. ಅದರ ನಿರ್ದೇಶನವನ್ನು ಪಾಲಿಸಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/1**

ಆತ್ಮವನ್ನು ಅರಸಲು ನೀವು ಈ ದಾರಿಯಲ್ಲಿ ಹೋಗಬೇಕು (ಅಂತರಂಗದಲ್ಲಿ ಆಳವಾಗಿ ಹೋಗುವ ವಿಧಾನವನ್ನು ಸನ್ನೆಯ ಮೂಲಕ ತೋರಿಸುತ್ತಾರೆ). ಈ ರೀತಿಯಾಗಿ, ಮೇಲ್ಮೈಯಿಂದ ಮುಕ್ತವಾಗಿ, ಅಂತರಂಗದ ಆಳದಲ್ಲಿ ಚಲಿಸಿರಿ, ಅದರೆಡೆಗೆ ಪುನಃ ಪುನಃ ಪ್ರವೇಶಿಸಿ, ಇದೇ ರೀತಿ ಆಳಕ್ಕೆ ಮತ್ತೂ ಆಳಕ್ಕೆ ಹೋಗಿ, ಅಲ್ಲಿರುವ ಅಂದರೆ ಬಹಳ ಆಳದಲ್ಲಿರುವ ರಂಧ್ರದಲ್ಲಿ ಪ್ರವೇಶ ಪಡೆಯಿರಿ. ಅಲ್ಲಿ ನಿಶ್ಚಲತೆ, ನೀರವತೆ, ಇದೆ. ಅಚಲವಾಗಿದೆ. ಅಲ್ಲಿ ಒಂದು ರೀತಿಯ ಬೆಚ್ಚನೆಯ, ಶಾಂತಿಪೂರ್ಣ, ಮಾರ್ದವತೆಯಲ್ಲಿ ಶ್ರೀಮಂತವಾದ ಮತ್ತು ಅಚಲವಾದ, ಪೂರ್ತಿಯಾಗಿ ಭರಣಗೊಂಡಿರುವ ಮಧುರವಾದಂತೆ ಇರುವದೇ ಆತ್ಮವಾಗಿದೆ. ನೀವು ದೃಢ ಸಂಕಲ್ಪರಾಗಿ ಮತ್ತು ಪ್ರಜ್ಞಾಯುತರಾಗಿದ್ದಲ್ಲಿ, ಅಲ್ಲಿ ಒಂದು ರೀತಿಯ ಸಮೃದ್ಧತೆ ತುಂಬುತ್ತದೆ. ಅದಕ್ಕೆ ಪರಿಪೂರ್ಣತೆಯ ಭಾವವಿರುತ್ತದೆ. ಅದು ಅರಿಯಲಾಗದ ಆಳವನ್ನು ಹೊಂದಿದ್ದು, ಇದರಲ್ಲಿ ನೀವು ಪ್ರವೇಶಿಸಬೇಕು. ಆಗ ನಿಮಗೆ ಬಹಳಷ್ಟು ರಹಸ್ಯಗಳು ಬಯಲಾಗಿ ಗೋಚರವಾಗುತ್ತವೆ. ಬಹಳೇ ಶಾಂತಿಯುತವಾದ ನೀರಿನ ಮೇಲೆ ಕಾಣುವ ಪ್ರತಿಫಲನದಂತಿರುತ್ತದೆ. ಆಗ ನೀವು ಕಾಲದ ಸೀಮಿತತೆಯಲ್ಲಿ ಇದ್ದಂತೆ ಎನಿಸುವದಿಲ್ಲ.

ನಿಮಗೆ, ನೀವು ಯಾವಾಗಲೂ ಇದ್ದಂತೆ ಮತ್ತು ಶಾಶ್ವತತೆಯಲ್ಲಿ ಇರುವಂತೆ ಅನಿಸುತ್ತದೆ.

ಆಗ ನೀವು ಆತ್ಮದ ಮೂಲ ಸ್ಪರ್ಶವನ್ನು ಪಡೆಯುತ್ತೀರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/310** **– ಶ್ರೀಮಾತೆ**



ಅಹಂಕಾರದಿಂದ ಮುಕ್ತನಾಗುವದು ಆಧ್ಯಾತ್ಮಿಕವಾಗಿ ಮೌಲ್ಯಯುತವಾಗಿದೆ. ಏಕೆಂದರೆ ಆಗ ನಾವು ದೈವದಲ್ಲಿ ಕೇಂದ್ರಿತರಾಗಿರುತ್ತೇವೆಯೋ ಹೊರತು ನಮ್ಮ ವೈಯಕ್ತಿಕ ವ್ಯಕ್ತಿಗತ ಅಲ್ಲ. ಭಕ್ತಿಗೆ ಬೇಕಾಗಿರುವ ಸ್ಥಿತಿಯೂ ಇದೇ ಆಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/95 – ಶ್ರೀ ಅರವಿಂದರು**

## ವೈಯಕ್ತಿಕ ಪ್ರಗತಿಗೆ ದಿವ್ಯತ್ವದೊಡನೆ ಸಂಪರ್ಕ

ಚೈತ್ಯ ಪುರುಷನ ಸಾಕ್ಷಾತ್ಕಾರ, ಅದರ ಜಾಗ್ರತವಾಗುವಿಕೆ ಮತ್ತು ಅದನ್ನು ಮುಂದುವರೆಸುವದು ಅಂದರೆ ಇದು ದೈವದೊಂದಿಗೆ ಎಷ್ಟರ ಮಟ್ಟಿಗೆ ನಿಮ್ಮ ವೈಯಕ್ತಿಕತೆಯ ಸಂಬಂಧದಲ್ಲಿ ಬೆಳವಣಿಗೆಯಾಗಿದೆ ಎನ್ನುವದರ ಮೇಲೆ ಅವಲಂಬಿತವಾಗಿದೆ. ಆ ಸಂಬಂಧವು ಭಕ್ತಿ, ಪ್ರೀತಿ, ಅವಲಂಬನೆ, ಸ್ವಯಂ–ಸಮರ್ಪಣೆಯಿಂದ ಕೂಡಿದ್ದು, ಬೇಧ ಭಾವ ಮತ್ತು ಸ್ವಯಂ ಪ್ರತಿಪಾದಿಸುವ ಮನ, ಪ್ರಾಣ, ದೇಹದ ಅಹಂಕಾರದ ಒತ್ತಾಯಗಳನ್ನು ತಿರಸ್ಕರಿಸಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/360**

... “ದೇವರ ಬಗೆಗೆ” ಮತ್ತು “ಗುರುವಿನ ಬಗೆಗೆ” ಇರುವ ನಿಜವಾದ ಭಕ್ತಿಯು ಮಾನಸಿಕ ಮತ್ತು ಪ್ರಾಣದ ಭಕ್ತಿಗಿಂತ ಭಿನ್ನವಾಗಿದೆ.

ಇವೆರಡು (ಮನ ಮತ್ತು ಪ್ರಾಣ) ತಮ್ಮ ಸಮರ್ಪಣೆಯಲ್ಲಿ ಮಾನಸಿಕ ಸಂಕೋಚವನ್ನು ಹೊಂದಿವೆ.

‘ಚೈತ್ಯ ಪುರುಷನ’ ಕುರಿತ ಭಕ್ತಿಯು ಹಾಗಿರುವದಿಲ್ಲ. ಏಕೆಂದರೆ ಅದು ಹಿಂದೆ ಇರುವ ದೈವತ್ವದೊಡನೆ ಸಂವಹನ ಹೊಂದಿದೆ. ಅದು ನಿಜವಾದ ಭಕ್ತಿಗೆ ಅರ್ಹವಾಗಿದೆ. ಚೈತ್ಯ ಪುರುಷನ ಭಕ್ತಿಯು ಯಾವುದೇ ಬೇಡಿಕೆಯಾಗಲೀ ಅಥವಾ ಯಾವುದೇ ಪರಿಗ್ರಹಣಗಳನ್ನು ಹೊಂದಿರುವದಿಲ್ಲ. ಇದು ಸಂತೃಪ್ತವಾಗಿರುತ್ತದೆ. ಚೈತ್ಯ ಪುರುಷನಿಗೆ ಸತ್ಯವನ್ನು ಸೂಕ್ತವಾದ ರೀತಿಯಲ್ಲಿ ಪಾಲಿಸಬೇಕೆಂಬುದು ತಿಳಿದಿರುತ್ತದೆ. ಇದು ದೇವರಿಗೆ ಅಥವಾ ಗುರುವಿಗೆ ನೇರವಾಗಿ ಅರ್ಪಿಸಿಕೊಳ್ಳುತ್ತ ಇರುವದರಿಂದ, ಅದು ನಿಜವಾಗಿಯೂ ಸ್ವೀಕರಿಸಲ್ಪಡುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/380–81**

ಆಸೆಯು ತಿರಸ್ಕರಿಸಲ್ಪಟ್ಟಾಗ ಮತ್ತು ಅದು ಯೋಚನೆ, ಭಾವನೆ ಅಥವಾ ಕ್ರಿಯೆಯನ್ನು ಪ್ರಭಾವಿಸದಿದ್ದಾಗ ಮತ್ತು ಅಲ್ಲಿ ಸಂಪೂರ್ಣ ಪ್ರಾಮಾಣಿಕ ಸ್ವ–ಅರ್ಪಣೆ ಇರುತ್ತದೆ. ಸಾಮಾನ್ಯವಾಗಿ ತದನಂತರ ಚೈತ್ಯ ಪುರುಷ ತನ್ನನ್ನು ತಾನು ತೆರೆದಿಟ್ಟುಕೊಳ್ಳುತ್ತಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/349**

ಭಕ್ತಿಯು ಒಂದು ಅನುಭಾವವಲ್ಲ. ಇದು ಹೃದಯದ ಮತ್ತು ಆತ್ಮದ ಒಂದು ಸ್ಥಿತಿ. ಚೈತ್ಯ ಪುರುಷ ಜಾಗ್ರತನಾದಾಗ ಮತ್ತು ಪ್ರಮುಖನಾದಾಗ, ಈ ಸ್ಥಿತಿಯು ಬರುತ್ತದೆ. ಈ ಕಾರಣದಿಂದಾಗಿ, ಚೈತ್ಯ ಪುರುಷನ ಮಾರ್ಗವನ್ನು ಪಾಲಿಸಲು ಹೇಳಿದ್ದೇನೆ ಮತ್ತು ಈ ಮೂಲಕ ಪ್ರಾಣದ ಆಸೆಯ ಕಡೆಗೆ ಮರಳಬೇಡಿರಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/95 – ಶ್ರೀ ಅರವಿಂದರು**



## ಚೈತ್ಯ ಪುರುಷನ ಒಂದು ಸುಂದರ ರೂಪ

ನಿಸ್ವಾರ್ಥ ಚಲನೆ ಲೆಕ್ಕ ಹಾಕದಿರುವಿಕೆ, ಇದು ಜಗತ್ತಿನಲ್ಲಿಯೇ ಅತೀ ಸುಂದರವಾದ ಚೈತ್ಯ ಪ್ರಜ್ಞೆಯ ರೂಪವಾಗಿದೆ. ಆದರೆ, ನೀವು ಮಾನಸಿಕ ಚಟುವಟಿಕೆಗಳ ಹಂತದಲ್ಲಿ ಉನ್ನತವಾಗಿ ಪ್ರಗತಿಯಾದಾಗ, ಇದು ಮತ್ತೂ ವಿರಳವಾಗುತ್ತದೆ. ಬುದ್ಧಿಯ ಜೊತೆಗೆ ಎಲ್ಲಾ ಕೌಶಲ್ಯ ಮತ್ತು ಜಾಣ್ತನಗಳೂ ಬರುತ್ತವೆ. ಜೊತೆಗೆ ಭ್ರಷ್ಟಾಚಾರ, ಲೆಕ್ಕಾಚಾರವೂ ಸಹಿತ. ಉದಾಹರಣೇಗೆ, ಗುಲಾಬಿ ಅರಳಿದಾಗ – ಅದು ಸಹಜವಾಗಿಯೇ ಅರಳುತ್ತದೆ – ಸುಂದರವಾಗಿರುವದರಲ್ಲಿ ಆನಂದಕ್ಕಾಗಿ, ಮಧುರವಾದ ಪರಿಮಳ, ಬದುಕುವದರಲ್ಲಿ ತನ್ನೆಲ್ಲಾ ಆನಂದ ವ್ಯಕ್ತಪಡಿಸುತ್ತಾ ಮತ್ತು ಅದು ತೀರ ಲೆಕ್ಕಾಚಾರ ಮಾಡುವದಿಲ್ಲ. ಅದು ಏನನ್ನೂ ಪಡೆದುಕೊಳ್ಳುವದೂ ಇಲ್ಲ; ಅದು ಸಹಜವಾಗಿ, ತನ್ನಪಾಡಿಗೆ ತಾನು ಇರುವದರಿಂದ, ಬದುಕಿರುವದರ ಆನಂದಕ್ಕಾಗಿ ಈ ರೀತಿಯಲ್ಲಿ ಇರುತ್ತದೆ. ಉದಾಹರಣೇಗೆ ಒಬ್ಬ ಮಾನವನನ್ನೇ ತೆಗೆದುಕೊಳ್ಳಿ, ಕೆಲವೇ ಜರನ್ನು ಹೊರತುಪಡಿಸಿ, ಆತನ ಮನ ಕ್ರಿಯಾಶೀಲವಾದ ತಕ್ಷಣ ತನ್ನ ಸೌಂದರ್ಯ ಮತ್ತು ಜಾಣ್ತನದಿಂದ ಏನೋ ಅನುಕೂಲವನ್ನು ಪಡೆಯಲು ಯತ್ನಿಸುತ್ತಾನೆ; ಅದರಿಂದ ಏನೋ ಪಡೆದುಕೊಳ್ಳಬೇಕೆಂದು ಆತ ಬಯಸುತ್ತಾನೆ. ಅದು ಜನರ ಪ್ರಶಂಸೆಯಾಗಿರಬಹುದು ಅಥವಾ ಕುಲ್ಲಕ ಲಾಭವಾಗಿರಬಹುದು. ತತ್ಪರಿಣಾಮವಾಗಿ ಚೈತ್ಯ ಪುರುಷನ ದೃಷ್ಟಿಕೋನದಿಂದ ಮಾನವನಿಗಿಂತಲೂ ಗುಲಾಬಿಯೇ ಉತ್ತಮವಾಗಿದೆ.

ಕೇವಲ ಒಂದು ವೇಳೆ ನೀವು ಉನ್ನತ ಸ್ಥರಕ್ಕೆ ಏರಿದಾಗ ಮತ್ತು ಗುಲಾಬಿಯೂ ಏನ್ನನ್ನು ಅಪ್ರಜ್ಞಾಪೂರ್ವಕವಾಗಿಯೇ ಮಾಡುತ್ತದೆಯೋ, ಅದನ್ನು ನೀನು ಪ್ರಜ್ಞಾಪೂರ್ವಕವಾಗಿ ಮಾಡಲು ಬಂದಾಗ ಅದು ಇನ್ನೂ ಹೆಚ್ಚು ಸುಂದರಮಯವಾಗಿರುತ್ತದೆ. ಆದರೆ ಅದು ಅದೇ ರೀತಿಯಲ್ಲಿಯೇ ಇರಬೇಕು; ಸೌಂದರ್ಯದ ಸಹಜ ಅರಳುವಿಕೆ, ಯಾವುದೇ ಲೆಕ್ಕಾಚಾರವಿಲ್ಲದೇ ಕೇವಲ ಆನಂದದಲ್ಲಿರುವದಕ್ಕಾಗಿ ಇರುತ್ತದೆ. ಕೆಲ ಕಾಲ ಚಿಕ್ಕ ಮಕ್ಕಳು ಈ ರೀತಿಯ ಸ್ಥಿತಿಯಲ್ಲಿ ಇರುತ್ತಾರೆ. (ಕೆಲ ಕಾಲ ಮಾತ್ರ. ಯಾವಾಗಲೂ ಅಲ್ಲ.) ದುರಾದೃಷ್ಟವೆಂದರೆ, ಪೋಷಕರ ಮತ್ತು ಪರಿಸರದ ಪ್ರಭಾವದಿಂದಾಗಿ, ಅವರು ಚಿಕ್ಕ ವಯಸ್ಸಿನಲ್ಲಿಯೇ ಲೆಕ್ಕಾಚಾರ ಹಾಕುವದನ್ನು ಕಲಿಯುತ್ತಾರೆ.

ಆದರೆ, ನನ್ನಲ್ಲಿ ಏನಿದೆ ಅಥವಾ ಏನು ಮಾಡುವದರಿಂದ ನನಗೇನು ದೊರೆಯುತ್ತದೆ ಎನ್ನುವ ಬಯಕೆಯೇ, ನಿಜವಾಗಿಯೂ ಜಗತ್ತಿನಲ್ಲಿಯೇ ಅತೀ ಕುರೂಪ ವಸ್ತುಗಳಲ್ಲಿ ಒಂದಾಗಿದೆ. ಮತ್ತು ಇದು ಅತ್ಯಂತ ವ್ಯಾಪಕವೂ ಆಗಿದೆ ಎಂದರೆ, ಇದು ಮನುಷ್ಯನಲ್ಲಿ 'ಸಹಜ'ವಾಗಿದೆ. ಈ ಲೆಕ್ಕಾಚಾರ ಮತ್ತು ಲಾಭದ ಬಯಕೆಯು, ಇದು ದೈವೀ ಪ್ರೀತಿಯಿಂದ ವಿಮುಖವಾಗುವಂತೆ ಮಾಡುವ ಏಕೈಕ ವಿಷಯವಾಗಿದೆ.

***ಪ್ರಶ್ನೆ: ಹೂವುಗಳು ಪ್ರೀತಿಸುತ್ತವೆಯೋ?***

ಅವುಗಳ ಅರಳುವಿಕೆಯೇ ಪ್ರೀತಿಯ ಒಂದು ರೂಪವಾಗಿದೆ. ಖಂಡಿತವಾಗಿಯೂ ಗುಲಾಬಿ ಹೂವು ಸೂರ್ಯನಿಗೆ ತೆರೆದಿಟ್ಟುಕೊಳ್ಳುವದನ್ನು ನೋಡಿದಾಗ, ಅದು ತನ್ನ ಸೌಂದರ್ಯವನ್ನು ಕೊಡುವದು ಅವಶ್ಯಕವೆನಿಸುತ್ತದೆ. ಇದು ನಮಗೆ ವಿಚಾರಹೀನವೆನಿಸಬಹುದು. ಏಕೆಂದರೆ ಅವು ಏನು ಮಾಡುತ್ತವೆ ಎನ್ನುವದರ ಕುರಿತು ನಾವು ವಿಚಾರ ಮಾಡುವದಿಲ್ಲ. ಒಬ್ಬ ಮನುಷ್ಯನು ತಾನು ಏನೆಲ್ಲಾ ಮಾಡುತ್ತಾನೆಯೋ, ಅದನ್ನು ತಾನೇ ಮಾಡುತ್ತಿದ್ದೇನೆ ಎಂದು ಯಾವಾಗಲೂ ಭಾವಿಸುತ್ತಿರುವ ಸಾಮರ್ಥ್ಯವನ್ನೇ ಹೊಂದಿರುತ್ತಾನೆ. ಅಂದರೆ ತನ್ನ ಬಗೆಗೇ ವಿಚಾರ ಮಾಡುತ್ತಿರುತ್ತಾನೆ. ತಾನು ಏನು ಮಾಡುತ್ತಿದ್ದೇನೆ ಎನ್ನುವದು ಮಾನವನಿಗೆ ಗೊತ್ತಿದೆ. ಆದರೆ ಪ್ರಾಣಿಗಳು ವಿಚಾರ ಮಾಡುವದಿಲ್ಲ. ಇದು ಒಂದೇ ರೀತಿಯ ಪ್ರೀತಿಯಲ್ಲ. ಅದರಲ್ಲೂ ಹೂವುಗಳು ಪ್ರಜ್ಞಾಯುತವಾಗಿರುವದಿಲ್ಲ; ಏಕೆಂದರೆ ಇದೊಂದು ಸಹಜ ಚಲನೆಯಾಗಿದೆ. ನಾವು ಪ್ರಜ್ಞಾಯುತರಾಗಿದ್ದೇವೆ

ಎನ್ನುವದರ ಬಗೆಗೆ ಪ್ರಜ್ಞಾವಂತರಾಗಿರುವದಿಲ್ಲ. ಆದರೆ, ಇದೆಲ್ಲದರ ಮೂಲಕ ಒಂದು ಶ್ರೇಷ್ಠ "ಶಕ್ತಿ"ಯು ಕಾರ್ಯಗೈಯುತ್ತಿರುತ್ತದೆ. ಒಂದು ಶ್ರೇಷ್ಠ 'ಪ್ರಜ್ಞೆ' ಮತ್ತು ವಿಶ್ವಾತ್ಮಕ ಪ್ರೀತಿಯ ಶ್ರೇಷ್ಠ 'ಶಕ್ತಿ'ಯು ಎಲ್ಲಾ ವಸ್ತುಗಳಲ್ಲಿಯೂ ಸೌಂದರ್ಯವು ಅರಳುವಂತೆ ಮಾಡುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/240–41 – ಶ್ರೀಮಾತೆ**

## ಚೈತ್ಯ ಪುರುಷನನ್ನು ಪ್ರಗತಿಗೊಳಿಸುವದು

ಸತತ ಮತ್ತು ಪ್ರಾಮಾಣಿಕ ಅಭೀಪ್ಸೆ ಮತ್ತು ದೈವತ್ವದ ಕಡೆಗೆ ಮಾತ್ರ ಚಲಿಸುವ ಸಂಕಲ್ಪ – ಇವು ಚೈತ್ಯನನ್ನು ಪ್ರಗತಿಗೊಳಿಸುವ ಅತ್ಯುತ್ತಮ ಮಾಧ್ಯಮವಾಗಿವೆ.

ನೀವು ಸ್ವತಂತ್ರವಾಗಿರುವ ಮತ್ತು ವಿಚಲಿತಗೊಳ್ಳದಿರುವ ಸಮಯವನ್ನು ಹೊಂದಿಸಿಕೊಳ್ಳಿ; ಆರಾಮದಾಯಕವಾಗಿ ಕುಳಿತುಕೊಳ್ಳಿ. ಚೈತ್ಯ ಪುರುಷನೊಂದಿಗೆ ಸಂಪರ್ಕ ಹೊಂದುವ ಅಭೀಪ್ಸೆಯೊಂದಿಗೆ ಅದರ ಬಗೆಗೆ ಯೋಚನೆ ಪ್ರಾರಂಭಿಸಿ. ತಕ್ಷಣವೇ ನೀವು ಯಶಸ್ವಿಯಾಗದಿದ್ದಲ್ಲಿ, ನಿರುತ್ಸಾಹ ಹೊಂದಬೇಡಿ; ಒಂದು ದಿನ ನೀವು ಖಚಿತವಾಗಿಯೂ ಯಶಸ್ಸು ಪಡೆಯುವಿರಿ. ಯಾವ ಸಮಯವನ್ನು ಆಯ್ಕೆ ಮಾಡಿಕೊಂಡಿದ್ದೀರಿ ಎನ್ನುವದನ್ನು ನನಗೆ ತಿಳಿಸಿರಿ, ಇದರಿಂದ ನಾನು ಹೆಚ್ಚು ಪ್ರಜ್ಞಾಪೂರ್ವಕವಾಗಿ ನಿಮಗೆ ಸಹಾಯ ಮಾಡಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 17/363**

ಒಂದು ಶ್ರೇಷ್ಠ ಅಭೀಪ್ಸೆಯಲ್ಲಿ ಬದುಕುವದು, ಅಂತರಂಗದಲ್ಲಿ ನಿಶ್ಚಲತೆಯನ್ನು ನೆಲೆಸುವಂತ ಕಾಳಜಿ ವಹಿಸುವದು ಮತ್ತು ಈ ರೀತಿ ಇರಲು ಎಷ್ಟು ಸಾಧ್ಯವೋ ಅಷ್ಟು, ನಿಮ್ಮ ಸತ್ತೆಯ ಎಲ್ಲಾ ಚಟುವಟಿಕೆಗಳನ್ನು ಪರಿಪೂರ್ಣವಾದ ಪ್ರಾಮಾಣಿಕತೆಯೊಂದಿಗೆ ಪ್ರಗತಿಗೊಳಿಸಿಕೊಳ್ಳುವದು – ಇವು ಚೈತ್ಯ ಪುರುಷನ ಬೆಳವಣಿಗೆಗೆ ಬೇಕಾದ ಸ್ಥಿತಿಯಾಗಿವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/222 – ಶ್ರೀಮಾತೆ**

ಬಾಹ್ಯ ಪ್ರಕೃತಿಯಲ್ಲಿ ಯಾವುದು ಉನ್ನತ 'ನಿಜ ಅಸ್ತಿತ್ವ'ದ ಅಂಶಗಳಿಗೆ ನಮ್ಮಲ್ಲಿರುವ ಚೈತ್ಯದ ಅಂಶವು ಆಕರ್ಷಿಸಲ್ಪಡುತ್ತದೆ. ಮತ್ತು ಇದೇ ಅದರ ಲಕ್ಷಣ ಹಾಗು

ನಡತೆಯೂ ಆಗಿದೆ. ಏಕೆಂದರೆ ಇದು ಅಲ್ಲಿಂದಲೇ ಬರುತ್ತದೆ. ಮೊದಲಿಗೆ ಈ 'ನೈಜ ಸತ್ತೆ'ಯನ್ನು ಒಳ್ಳೆಯ, ಸತ್ಯ, ಸೌಂದರ್ಯದ ಮೂಲಕ ಎಲ್ಲಾ ಪರಿಶುದ್ಧ ಮತ್ತು ಅಂದವಾದ ಹಾಗು ಉನ್ನತವಾಗಿರುವ ಜತೆಗೆ ಶ್ರೇಷ್ಠವಾಗಿರುವದರ ಮೂಲಕವೇ ಅರಸುತ್ತದೆ. ಆದಾಗ್ಯೂ ಬಾಹ್ಯ ಲಕ್ಷಣಗಳ ಮೂಲಕ, ಈ ಸ್ಪರ್ಶ ಮತ್ತು ನಡತೆಗಳನ್ನು ಬದಲಾಯಿಸಬಹುದು, ಜೊತೆಗೆ ಪ್ರಕೃತಿಯನ್ನು ಸೂಕ್ತಗೊಳಿಸಬಹುದು. ಇದು ಇಡಿಯಾಗಿ ಅಥವಾ ಅತೀ ಆಳವಾಗಿ ಮತ್ತು ಅಗಾಧವಾದ ಬದಲಾವಣೆಯನ್ನೇನೂ ಮಾಡಲಾರದು. ಇಂತಹ ಅತ್ಯಂತ ಆಳವಾದ ಬದಲಾವಣೆಗೆ 'ನಿಜ ಅಸ್ತಿತ್ವ'ದೊಂದಿಗೆ ಚಿರವಾದ ಸಂಪರ್ಕವು ಅತ್ಯಾವಶ್ಯಕವಾಗಿದೆ. ಏಕೆಂದರೆ ನಮ್ಮ ಸತ್ತೆಯ ಮೂಲಭೂತ ಅಸ್ತಿತ್ವವನ್ನು ಆಳವಾಗಿ ಬದಲಾವಣೆ ಅಥವಾ ರೂಪಾಂತರ ಮಾಡುವ ಸಾಮರ್ಥ್ಯವು ಈ ನೈಜ ಅಸ್ತಿತ್ವದಲ್ಲಿದೆ. ಬೇರಾವುದರಲ್ಲಿಯೂ ಅಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 22/934 – ಶ್ರೀ ಅರವಿಂದರು**

## ನಮ್ಮ ನಿರ್ಣಯಗಳನ್ನು ದೃಢಮಾಡಿಕೊಳ್ಳುವುದು ಹೇಗೆ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

*ಪ್ರ: ಪ್ರೀತಿಯ ಮಾತೆಯವರೆ, ನಮ್ಮ ನಿರ್ಣಯವನ್ನು ಅತಿ ಗಟ್ಟಿಮಾಡಿಕೊಳ್ಳುವುದು ಹೇಗೆ?*

ಅದು ಅತಿಯಾಗಿ ಗಟ್ಟಿಯಾಗಲೆಂದು ಬಯಸುವುದರಿಂದ (ನಗು)

ಇಲ್ಲ, ಇದೊಂದು ಕುಚೋದ್ಯವೆಂಬಂತೆ ತೋರುತ್ತದೆ... ಆದರೆ ಇದು ಸಂಪೂರ್ಣ ಸತ್ಯ. ನಾವು ಅದನ್ನು ನಿಜವಾಗಿಯೂ ಬಯಸುವುದಿಲ್ಲ. ನೀವು ನಿಜವಾಗಿಯೂ ಅದನ್ನು ಬಯಸಿದರೆ, ಆ ಸಾಧ್ಯತೆಯು ಯಾವಾಗಲೂ ಇರುತ್ತದೆ. ನಮ್ಮಲ್ಲಿ ಪ್ರಾಮಾಣಿಕತೆಯ ಕೊರತೆ ಇರುವುದರಿಂದ ಹಾಗೆ ಆಗುವುದಿಲ್ಲ. ಪ್ರಾಮಾಣಿಕವಾಗಿ ನೀವದನ್ನು ಗಮನಿಸಿದರೆ, ಅದು ಈ ರೀತಿಯಾಗಿ ಇರುತ್ತದೆ ಎಂದು ನೀವು ನಿರ್ಣಯಿಸಿದ್ದನ್ನು ಕಾಣುವಿರಿ, ನಂತರ, ಅದರಡಿಯಲ್ಲಿ ಏನೋ ಒಂದು ನಿರ್ಧರಿಸದ ಮತ್ತು ಮುಂದೆ ಧಾವಿಸಲು ಹಿಂಜರಿಕೆಯ ಕ್ಷಣಕ್ಕಾಗಿ ಕಾಯುತ್ತಿರುತ್ತದೆ. ನೀವು ಪ್ರಾಮಾಣಿಕರಾಗಿದ್ದರೆ, ಮತ್ತು ಮರೆಮಾಚುತ್ತಿರುವ,

ನಿರೀಕ್ಷಿಸುತ್ತಿರುವ, ತನ್ನನ್ನು ತಾನು ತೋರಿಸಿಕೊಳ್ಳದಂಥ, ಅದು ಹೊರಬಂದಾಗ ಮತ್ತು ನೀವು ಮಾಡಬಾರದೆಂದು ನಿರ್ಣಯಿಸಿದ ಸಂಗತಿಯನ್ನು ಮಾಡುವಂತೆ ಮಾಡಿದಾಗ ಒಂದು ಸಂದಿಗ್ಧತೆಯ ಕ್ಷಣ ಬರುವುದೆಂದು ಗೊತ್ತಿರುವಂಥ ಭಾಗವನ್ನು ಹಿಡಿದಿಟ್ಟುಕೊಂಡಿದ್ದರೆ...

ಆದರೆ ನೀವು ನಿಜವಾಗಿಯೂ ಅದನ್ನು ಬಯಸಿದರೆ, ಜಗತ್ತಿನಲ್ಲಿ ಯಾವುದೂ ನೀವು ಮಾಡಬೇಕೆಂದಿರುವುದನ್ನು ತಡೆಯುವುದಿಲ್ಲ. ಅದು ಯಾಕೆಂದರೆ, ಹೇಗೆ ಬಯಸಬೇಕೆಂದು ತಿಳಿದಿಲ್ಲ. ಅದು ಯಾಕೆಂದರೆ, ನಮ್ಮ ಬಯಕೆಯ ಬಗ್ಗೆ ಸ್ಪಷ್ಟತೆ ಇಲ್ಲ. ನಿಮ್ಮ ಬಯಕೆಯ ಬಗ್ಗೆ ನಿಮಗೆ ಸ್ಪಷ್ಟತೆ ಇದ್ದರೆ, ಜಗತ್ತಿನಲ್ಲಿ ಯಾವುದೂ, ಯಾರೂ ನಿಮ್ಮ ಬಯಕೆಯನ್ನು ಬದಲಾಯಿಸುವಂತೆ ಮಾಡಲು ಸಾಧ್ಯವಿಲ್ಲ.

ಆದರೆ ಅದನ್ನು ಹೇಗೆ ಬಯಸಬೇಕೆಂದು ನಮಗೆ ತಿಳಿದಿಲ್ಲ. ವಾಸ್ತವವಾಗಿ ನಾವು ಅದನ್ನು ಬಯಸುವುದೂ ಇಲ್ಲ. ಇವೆಲ್ಲ ದುರ್ಬಲ ಪ್ರವೃತ್ತಿಗಳು: "ಸರಿ, ಇದು ಹೀಗಿದೆ .... ಅದು ಹಾಗಿದ್ದರೆ ಒಳ್ಳೆಯದಿರುತ್ತಿತ್ತು ... ಹೌದು, ಅದು ಹಾಗಿದ್ದರೆ ಉತ್ತಮವಿರುತ್ತಿತ್ತು ... ಹೌದು, ಅದು ಹಾಗೆ ಇದ್ದರೆ ಯೋಗ್ಯವಾಗಿರುತ್ತಿತ್ತು." ಆದರೆ ಇಚ್ಛಿಸುವುದು ಇದಲ್ಲ. ಮತ್ತು ಯಾವಾಗಲೂ, ಹಿಂಭಾಗದಲ್ಲಿ, ಮೆದುಳಿನ ಎಲ್ಲೋ ಒಂದು ಮೂಲೆಯಲ್ಲಿ ಅಡಗಿದ, ನೋಡುತ್ತಿರುವಂಥ ಮತ್ತು, "ಓಹ್, ನಾನು ಅದನ್ನು ಏಕೆ ಬಯಸಬೇಕು? ಎಂದು ಹೇಳುತ್ತಿರುವಂಥ ಯಾವುದೋ ಒಂದು ಸಂಗತಿಯು ಅಲ್ಲಿರುತ್ತದೆ. ಇದಕ್ಕೆ ವಿರುದ್ಧವಾಗಿರುವುದನ್ನೂ ಸಹ ಬಯಸಬಹುದು." ಆದರೆ ಯಾವಾಗಲೂ ವಿರುದ್ಧವಾಗಿ ಮಾಡಲು ಸಾವಿರ ಸಮರ್ಥನೆಗಳನ್ನು ನಾವು ಕಾಣಬಹುದು. ಕೇವಲ ಒಂದು ಸಣ್ಣ ಚಂಚಲತೆ ಸಾಕು ...ಫ್ ... ಎಲ್ಲ ಸಂಗತಿಯು ತಲೆಕೆಳಗಾಗುತ್ತದೆ, ಮತ್ತು ನೀವದನ್ನು ಕಾಣಬಹದು (ವಿರುದ್ಧವಾದುದನ್ನು). ಆದರೆ ನಾವು ಬಯಸಿದರೆ, ಸಂಗತಿಯು ಇದಾಗಿದೆ ಎಂದು ನಮಗೆ ನಿಜವಾಗಿಯೂ ತಿಳಿದಿದ್ದರೆ, ನಿಜವಾಗಿಯೂ ಇದನ್ನು ಬಯಸಿದರೆ, ಮತ್ತು ನಾವು ಸಂಪೂರ್ಣವಾಗಿ ಬಯಕೆಯಲ್ಲಿ ಕೇಂದ್ರೀಕರಿಸಿದರೆ, ಜಗತ್ತಿನಲ್ಲಿ ನಮ್ಮನ್ನು ಅದನ್ನು ಮಾಡುವುದನ್ನು ತಡೆಯುವಂತಹದ್ದು ಅಥವಾ ಅದನ್ನು ಮಾಡೆಂದು ಒತ್ತಾಯ ಪಡಿಸುವಂಥದ್ದು ಯಾವುದೂ ಇಲ್ಲವೆಂದು ನಾನು ಹೇಳುತ್ತೇನೆ. ಅದೇನೆಂಬುದರ (ನಾವು ಬಯಸುವ ಸಂಗತಿ) ಮೇಲೆ ಅದು ಅವಲಂಬಿತವಾಗಿರುತ್ತದೆ.

ನಾವು ಬಯಸುತ್ತೇವೆ. ಹೌದು, ನಾವು ಬಯಸುತ್ತೇವೆ, ಈ ರೀತಿಯಾಗಿ (ಸನ್ನೆಗಳು). ನಾವು ಬಯಸುತ್ತೇವೆ: "ಹೌದು, ಹೌದು, ಅದು ಹಾಗಿದ್ದರೆ ಉತ್ತಮ. ಹೌದು, ಅದು ಅತ್ಯುತ್ತಮವಾಗಿರುತ್ತದೆ, ಹೆಚ್ಚು ಸೊಗಸಾಗಿರುತ್ತದೆ." ...ಆದರೆ, ಅಷ್ಟಕ್ಕೂ ನಾವೊಂದು ದುರ್ಬಲ ಜೀವಿ, ಅಲ್ಲವೇ? ನಂತರ ನಾವು ಯಾವಾಗಲೂ ಬೇರೆ ಯಾವುದಾದರ ಮೇಲೆ ಆಪಾದನೆಯನ್ನು ಹಾಕಬಹುದು: "ಇದು ಬಾಹ್ಯದಿಂದ ಬರುವ ಪ್ರಭಾವವಾಗಿದೆ, ಎಲ್ಲಾ ರೀತಿಯ ಸಂದರ್ಭಗಳಿಂದ/ ಸನ್ನಿವೇಶಗಳಿಂದ."

ನೋಡಿ, ಒಂದು ಉಸಿರು ಪೂರ್ಣವಾಗಿದೆ. ಏನೋ ಒಂದು ... ಸುಪ್ತಾವಸ್ಥೆಯ ಒಂದು ಕ್ಷಣ, ನಿಮಗೆ ಗೊತ್ತಿಲ್ಲ... "ಓಹ್, ನನಗೆ ಅರಿವಿರಲಿಲ್ಲ." ನೀವು ಜಾಗೃತರಾಗಿಲ್ಲ, ಏಕೆಂದರೆ ನೀವು ಸ್ವೀಕರಿಸುವುದಿಲ್ಲ ...ಮತ್ತು ಇದಕ್ಕೆಲ್ಲ ಕಾರಣ, ನೀವು ಹೇಗೆ ಬಯಸಬೇಕೆಂದು ನಿಮಗೆ ಗೊತ್ತಿಲ್ಲ.

ಹೇಗೆ ಬಯಸಬೇಕೆನ್ನುವುದು, ಕಲಿಯಬೇಕಾದ ಒಂದು ಬಹಳ ಮುಖ್ಯವಾದ ವಿಷಯವಾಗಿದೆ. ಮತ್ತು ನಿಜವಾಗಿಯೂ ಬಯಸಬೇಕೆಂದರೆ, ನೀವು ನಿಮ್ಮ ಇರುವಿಕೆಯನ್ನು ಏಕೀಕರಿಸಬೇಕು. ವಾಸ್ತವವಾಗಿ, ಒಂದು ಜೀವಿ ಅಥವಾ ಪುರುಷ–ನಾಗಿರಬೇಕಾದರೆ, ನಾವು ಮೊದಲು ನಮ್ಮನ್ನು ನಾವು ಏಕೀಕರಿಸಿಕೊಳ್ಳಬೇಕು. ನಾವು ಸಂಪೂರ್ಣವಾಗಿ ವಿರುದ್ಧವಾದ ಪ್ರವೃತ್ತಿಗಳಿಂದ ಎಳೆಯಲ್ಪಡುತ್ತಿದ್ದರೆ, ನಾವು ನಮ್ಮ ಜೀವನದ ಪ್ರತಿ ಶತ ಎಪ್ಪತ್ತೈದು ಅವಧಿಯಷ್ಟು ನಮ್ಮ ಬಗ್ಗೆ ನಮಗೇ ಅರಿವಿರದೆ ಕಳೆದಿದ್ದರೆ ಮತ್ತು ನಾವು ಸಂಗತಿಗಳನ್ನು ಏಕೆ ಮಾಡುತ್ತೇವೆ ಎನ್ನುವುದರ ಕಾರಣಗಳ ಬಗ್ಗೆ ಅರಿವಿರದಿದ್ದರೆ, ಆಗ ನಾವೊಬ್ಬ ನಿಜವಾದ ಅಸ್ತಿತ್ವವೇ/ಪುರುಷನೆ? ನಾವು ಅಸ್ತಿತ್ವದಲ್ಲಿರುವುದಿಲ್ಲ. ನಾವು, ಪ್ರಭಾವಗಳ, ಚಲನೆಗಳ, ಶಕ್ತಿಗಳ, ಕ್ರಿಯೆಗಳ, ಪ್ರತಿಕ್ರಿಯೆಗಳ ಒಂದು ದ್ರವ್ಯರಾಶಿ, ಆದರೆ ನಾವೊಂದು ಅಸ್ತಿತ್ವವಲ್ಲ. ನಾವೊಂದು ಇಚ್ಛಾಶಕ್ತಿಯನ್ನು ಹೊಂದಲು ಪ್ರಾರಂಭಿಸಿದಾಗ ನಾವೊಂದು ಅಸ್ತಿತ್ವವಾಗಲು ಪ್ರಾರಂಭಿಸುತ್ತೇವೆ. ಮತ್ತು ನಾವು ಏಕೀಕೃತಗೊಳ್ಳದ ಹೊರತು ಇಚ್ಛಾಶಕ್ತಿಯನ್ನು ಹೊಂದಲು ಸಾಧ್ಯವಿಲ್ಲ.

ನೀವು ಒಂದು ಇಚ್ಛಾಶಕ್ತಿಯನ್ನು ಹೊಂದಿದಾಗ, "ನಿಮಗೆ ಬೇಕಾದುದನ್ನು ನಾನು ಬಯಸುತ್ತೇನೆ," ಎಂದು ನೀವು ದೈವಕ್ಕೆ ಹೇಳಲು ಸಾಧ್ಯವಾಗುತ್ತದೆ. ಆದರೆ ಅದಕ್ಕೂ ಮೊದಲು ಅಲ್ಲ. ಏಕೆಂದರೆ ದೈವವು ಏನು ಬಯಸುತ್ತದೆ ಎನ್ನುವುದನ್ನು

ಅರಿತು ಅದನ್ನು ನೀವು ಬಯಸಲು, ನೀವೊಂದು ಇಚ್ಛಾಶಕ್ತಿಯನ್ನು ಹೊಂದಿರಬೇಕು, ಇಲ್ಲದಿದ್ದರೆ ನೀವು ಏನನ್ನೂ ಇಚ್ಛಿಸಲು ಅಥವಾ ಬಯಸಲು ಸಾಧ್ಯವಾಗದು. ನೀವು ಅದನ್ನು ತುಂಬಾ ಬಯಸುತ್ತೀರಿ. ದೇವನು ಏನು ಮಾಡಲು ಬಯಸುತ್ತಾನೆ ಎನ್ನುವುದನ್ನು ನೀವು ಬಯಸುತ್ತೀರಿ. ನೀವು ಅದನ್ನು ಬಹಳೇ ಇಷ್ಟಪಡುವಿರಿ. ದೈವವು ಏನನ್ನು ಮಾಡಲು ಬಯಸುತ್ತದೆಯೋ ಅದನ್ನು ನೀವು ಬಯಸಲು ಬಹಳೇ ಇಷ್ಟಪಡುವಿರಿ. ಭಗವಂತನಿಗೆ ನೀಡಲು, ಆತನ ಸೇವೆಗೆ ಸಮರ್ಪಿಸಿಕೊಳ್ಳಲು ನೀವು ಒಂದು ಬಯಕೆಯನ್ನು ಹೊಂದಿರುವುದಿಲ್ಲ. ಲೋಳೆಯಂತಹ, ಜಲ್ಲಿ ಮೀನಿನಂತೆ, ಅದರಂತಹ ಏನೋ ಒಂದು... ಒಳ್ಳೆಯ ಬಯಕೆಗಳ ಒಂದು ದ್ರವ್ಯರಾಶಿ – ನಾನು ಸಂಗತಿಗಳ ಉತ್ತಮವಾದ ಭಾಗವನ್ನು ಪರಿಗಣಿಸುತ್ತಿದ್ದೇನೆ ಮತ್ತು ಕೆಟ್ಟ ಬಯಕೆಗಳನ್ನು ಮರೆತು ಬಿಡುತ್ತಿದ್ದೇನೆ – ಒಂದು ಉತ್ತಮ ಬಯಕೆಗಳ ಒಂದು ದ್ರವ್ಯರಾಶಿ, ಅರೆ–ಪ್ರಜ್ಞೆಯುಳ್ಳ ಹಾಗೂ ಹೊಯ್ದಾಡುವ.

ನನ್ನ ಮಕ್ಕಳೇ, ನಾನು ಹೇಳಬೇಕಾಗಿದ್ದನ್ನು ಹೇಳಿದ್ದೇನೆ. ಇವತ್ತಿಗಿಷ್ಟು ಸಾಕು.

ಇದನ್ನು ಮಾತ್ರ ಆಚರಣೆಗೆ ತನ್ನಿ; ನಾನು ಹೇಳಿದ್ದರಲ್ಲಿ ಎಲ್ಲವೂ ಅಲ್ಲ, ಸ್ವಲ್ಪವೇ ಸ್ವಲ್ಪ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 346–47**

**ಬಯಕೆಯು ತಲೆಯಲ್ಲಿಲ್ಲ**

... ಈ ರೀತಿಯಾಗಿ ಸಂಗತಿಗಳು ತಲೆಯಲ್ಲಿ ನಡೆಯುವವರೆಗೂ (ಶ್ರೀಮಾತೆಯವರು ಹಣೆಯ ಬಳಿ ತಮ್ಮ ಬೆರಳನ್ನು ತಿರುಗಿಸುತ್ತಾರೆ), ಅದಕ್ಕೆ ಯಾವುದೇ ಪ್ರಭಾವ ಇರುವುದಿಲ್ಲ. ಇದು ಬಹಳ ಕಡಿಮೆಯಾದ, ಅತ್ಯಂತ ಸೀಮಿತವಾದಂಥ ಶಕ್ತಿಯನ್ನು ಹೊಂದಿರುತ್ತದೆ ಮತ್ತು ಯಾವಾಗಲೂ ತನ್ನಷ್ಟಕ್ಕೆ ತಾನು ತಪ್ಪಾಗಿ ತೋರಿಸಿಕೊಳ್ಳುತ್ತಿರುತ್ತದೆ.

ನಾವು ಬಹಳ ಕಷ್ಟದಿಂದ ನಮ್ಮ (ಸಾಕಷ್ಟು ಕೃತಕವಾದ) ಇಚ್ಛೆಯನ್ನು ಸಂಗ್ರಹಿಸಿದ್ದೇವೆಂದು ಅಂದುಕೊಳ್ಳುತ್ತೇವೆ, ಜೊತೆಗೆ, ನಾವು ಏನನ್ನಾದರೂ ಹಿಡಿಯಲು ಪ್ರಯತ್ನಿಸುತ್ತೇವೆ, ಮತ್ತು ಮುಂದಿನ ನಿಮಿಷದಲ್ಲಿ ಅದೆಲ್ಲವೂ

ಕಣ್ಮರೆಯಾಗಿಹೋಗುತ್ತದೆ. ಮತ್ತು ನಾವದನ್ನು ಅರಿತುಕೊಳ್ಳುವುದಿಲ್ಲ ಸಹ; "ಅದು ಹೇಗೆ ಸಂಭವಿಸಿತು?" ಎಂದು ನಮ್ಮಷ್ಟಕ್ಕೆ ನಾವು ಕೇಳಿಕೊಳ್ಳುತ್ತೇವೆ.

ನನಗೆ ಗೊತ್ತಿಲ್ಲ, ತಲೆಯಿಂದ ಯೋಗ ಮಾಡುವುದು ನನಗೆ ತುಂಬಾ ಕಷ್ಟವೆಂದು ತೋರುತ್ತದೆ – ಒಬ್ಬರು ಹಿಡಿಯದ ಹೊರತು.

ಬಯಕೆಯು ತಲೆಯಲ್ಲಿ ಇಲ್ಲ.

ಇಚ್ಛೆ/ಬಯಕೆ – ನಾನು ಯಾವುದನ್ನು ಬಯಕೆ ಎಂದು ಕರೆಯುತ್ತೇನೆಯೋ – ಅಂತಹದೊಂದು ಸಂಗತಿ ಇಲ್ಲಿದೆ (ತಾಯಿಯವರು ಎದೆಯ ಮಧ್ಯ ಭಾಗವನ್ನು ತೋರಿಸುತ್ತಾರೆ), ಅದು ಕ್ರಿಯಾ ಶಕ್ತಿಯನ್ನು, ಸಾಕ್ಷಾತ್ಕಾರದ ಶಕ್ತಿಯನ್ನು ಹೊಂದಿರುವಂಥದ್ದು.

ನಾವು ಕೇವಲ ತಲೆಯಲ್ಲಿ ಏನೆಲ್ಲವನ್ನು ಮಾಡುತ್ತೇವೆಯೋ, ಅದು ಅಸಂಖ್ಯಾತ ಪರಿಮಿತಗಳಿಗೆ ಒಳಪಟ್ಟಿರುತ್ತದೆ....

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/139 – ಶ್ರೀಮಾತೆ**

## ಬರೋಡಾದ ಮಹಾರಾಣಿಗೆ ಶ್ರೀ ಅರವಿಂದರ ಮಾರ್ಗದರ್ಶನ

(ಮಾಹಾರಾಣಿಯವರ ಪ್ರಶ್ನೆಗೆ ಶ್ರೀ ಅರವಿಂದರ ಉತ್ತರ)

ನಾನು, ಯೋಗ ಸಾಧನೆಯಿಂದ ಉನ್ನತ ಆಧ್ಯಾತ್ಮಿಕ ಪ್ರಜ್ಞೆಯನ್ನು ಪಡೆದು–ಕೊಂಡಿರುವುದು ಸತ್ಯ, ಮತ್ತು ಇದು ತನ್ನಲ್ಲಿ ಒಂದು ನಿಶ್ಚಿತವಾದ ಶಕ್ತಿಯನ್ನು ಹೊಂದಿರುತ್ತದೆ. ವಿಶೇಷವಾಗಿ, ಆಧ್ಯಾತ್ಮಿಕ ಹಂತದ ಕಡೆಗೆ ಹೋಗಲು ಸಿದ್ಧರಿದ್ದವರ ಜೊತೆಗೆ ಸಂವಹನ ಮಾಡುವಂಥ ಅಥವಾ ಅವರಿಗೆ ಸಹಾಯವನ್ನು ಮಾಡುವಂಥ ಶಕ್ತಿಯು ಇದರಲ್ಲಿದೆ. ಅದರ ಪರಿಪೂರ್ಣತೆಯಲ್ಲಿ ಮಾರ್ಪಡಿಸಲಾಗದಂಥ ಆಂತರಿಕ ಸ್ಥಿರತೆ, ಬಲ ಮತ್ತು ಸೌಖ್ಯದ ಸ್ಥಿತಿ ಇದೆ. ಆದರೆ ಈ ಆಧ್ಯಾತ್ಮಿಕ ಶಾಂತಿ ಹಾಗೂ ಆನಂದವು ಮಾನಸಿಕ ಶಾಂತಿ ಹಾಗೂ ಸಂತೋಷಕ್ಕಿಂತ ಸಾಕಷ್ಟು ವಿಭಿನ್ನವಾಗಿದೆ.

ತಮಗೆ ಇದನ್ನು ಸರಿಯಾಗಿ ವಿವರಿಸಲಾಗಿದೆಯೋ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ಪ್ರಜ್ಞೆಯ ಎರಡು ಸ್ಥಿತಿಗಳಿವೆ, ಅವುಗಳಲ್ಲಿ ಯಾವುದಾದರು ಒಂದು ಸ್ಥಿತಿಯಲ್ಲಿ ನಾವಿರಬಹುದೆಂದು ನಾನು ಸಂಕ್ಷಿಪ್ತವಾಗಿ ಹೇಳಬಲ್ಲೆ. ಒಂದು, ಜೀವನಾಟದ ಮೇಲಿರುವ ಮತ್ತು ಅದನ್ನು ನಿಯಂತ್ರಿಸುವ ಉನ್ನತ ಪ್ರಜ್ಞೆಯಾಗಿದೆ;

ಇದನ್ನು ವಿಧ ವಿಧವಾಗಿ ಆತ್ಮ, ಚೇತನ ಅಥವಾ ದೈವಿಕವೆಂದು ಕರೆಯಲಾಗುತ್ತದೆ. ಇನ್ನೊಂದು, ಸಾಮಾನ್ಯ ಪ್ರಜ್ಞೆ, ಇದರಲ್ಲಿ ಮನುಷ್ಯರು ಇರುವಂಥ ಪ್ರಜ್ಞೆ ಇದಾಗಿದೆ; ಇದು ಬಹಳೇ ಮೇಲ್ಮೈ ವಿಚಾರದ ಸಂಗತಿಯಾಗಿದೆ, ಮತ್ತು ಜೀವನದಾಟಕ್ಕಾಗಿ ಆತ್ಮನ ಒಂದು ಸಾಧನವಾಗಿದೆ. ಸಾಮಾನ್ಯ ಪ್ರಜ್ಞೆಯಲ್ಲಿ ಇರುವವರು ಸಂಪೂರ್ಣವಾಗಿ ಮನಸ್ಸಿನ ಸಾಮಾನ್ಯ ಚಲನೆಗಳಿಂದ ನಿಯಂತ್ರಿಸಲ್ಪಡುತ್ತಾರೆ ಮತ್ತು ಇವರು ಸಹಜವಾಗಿಯೇ ದುಃಖ, ಆನಂದ, ಉದ್ವೇಗ, ಮತ್ತು ಆಸೆಗೆ ಅಥವಾ ಜೀವನದ ಸಾಮಾನ್ಯ ಸಂಗತಿಗಳನ್ನು ಇಡೇರಿಸುವಂಥ ಉಳಿದೆಲ್ಲ ಸಂಗತಿಗಳಿಗೆ ಒಳಗಾಗುತ್ತಾರೆ. ಮಾನಸಿಕ ಶಾಂತಿ ಹಾಗೂ ಸಂತೋಷವನ್ನು ಅವರು ಪಡೆದು ಕೊಳ್ಳಬಹುದು, ಆದರೆ ಅದು ಎಂದಿಗೂ ಶಾಶ್ವತವಾಗಿರುವುದಿಲ್ಲ ಮತ್ತು ಸುನಿಶ್ಚಿತವಾಗಿರುವುದಿಲ್ಲ. ಆದರೆ ಆಧ್ಯಾತ್ಮಿಕ ಪ್ರಜ್ಞೆಯು ಬೆಳಕಾಗಿದೆ, ಶಾಂತಿಯಾಗಿದೆ, ಶಕ್ತಿಯಾಗಿದೆ ಮತ್ತು ಅತ್ಯಾನಂದವಾಗಿದೆ. ನಾವು ಸಂಪೂರ್ಣವಾಗಿ ಅದರಲ್ಲೇ ಇರುವುದಾದರೆ, ಅಲ್ಲಿ ಯಾವುದೇ ಪ್ರಶ್ನೆ ಇಲ್ಲ; ಈ ಸಂಗತಿಗಳು ಸಹಜವಾಗಿ ಮತ್ತು ಭದ್ರವಾಗಿ ಆತನದಾಗಿ ಬಿಡುತ್ತವೆ. ಆದರೆ ಭಾಗಶಃವಾಗಿಯೂ ಸಹ ಆತ ಅದರಲ್ಲಿ ಇರಬಹುದಾದರೆ ಅಥವಾ ತನ್ನನ್ನು ತಾನು ನಿರಂತರವಾಗಿ ಅದಕ್ಕೆ ತೆರೆದು ಕೊಂಡಿರಬಹುದಾದರೆ, ಆತ ಸಾಕಷ್ಟು ಆಧ್ಯಾತ್ಮಿಕ ಬೆಳಕನ್ನು, ಶಾಂತಿಯನ್ನು, ಶಕ್ತಿಯನ್ನು ಮತ್ತು ಆನಂದವನ್ನು ಪಡೆದು ಕೊಳ್ಳುತ್ತಾನೆ. ಇದೆಲ್ಲವೂ ಆತನನ್ನು ಜೀವನದ ಹೊಡೆತಗಳಿಂದ ಸುರಕ್ಷಿತವಾಗಿ ಪಾರು ಮಾಡುತ್ತದೆ. ಈ ಆಧ್ಯಾತ್ಮಿಕ ಪ್ರಜ್ಞೆಗೆ ತೆರೆದು ಕೊಳ್ಳುವುದರಿಂದ ನಾವು ಏನನ್ನು ಪಡೆದು ಕೊಳ್ಳುತ್ತೇವೆಯೋ, ಅದು ನಾವು ಅದರಿಂದ ಏನನ್ನು ಬಯಸುತ್ತೇವೆಯೋ ಅದರ ಮೇಲೆ ಅವಲಂಬಿತವಾಗಿದೆ; ಅದು ಶಾಂತಿಯಾಗಿದ್ದರೆ, ಶಾಂತಿಯನ್ನು ಪಡೆದು ಕೊಳ್ಳುತ್ತೇವೆ; ಅದು ಬೆಳಕು ಅಥವಾ ಜ್ಞಾನವಾಗಿದ್ದರೆ, ನಾವು ಅಗಾಧವಾದ ಬೆಳಕಿನಲ್ಲಿರುತ್ತೇವೆ ಮತ್ತು ಮನುಷ್ಯನ ಸಾಮಾನ್ಯ ಮನಸ್ಸು ಪಡೆದು ಕೊಳ್ಳುವುದಕ್ಕಿಂತ ಆಳವಾದ ಹಾಗೂ ನಿಜವಾದ ಜ್ಞಾನವನ್ನು ಪಡೆದುಕೊಳ್ಳುತ್ತೇವೆ; ಅದು ಬಲ ಅಥವಾ ಶಕ್ತಿಯಾಗಿದ್ದರೆ, ಆಂತರಿಕ ಜೀವನಕ್ಕಾಗಿ ನಾವು ಆಧ್ಯಾತ್ಮ ಬಲವನ್ನು ಪಡೆದುಕೊಳ್ಳುತ್ತೇವೆ ಅಥವಾ ಬಾಹ್ಯ ಕಾರ್ಯ ಮತ್ತು ಕ್ರಮವನ್ನು ನಿಯಂತ್ರಿಸುವಂಥ ಯೋಗ ಶಕ್ತಿಯನ್ನು ಪಡೆದುಕೊಳ್ಳುತ್ತೇವೆ; ಅದು ಸಂತೋಷವಾಗಿದ್ದರೆ, ಸಾಮಾನ್ಯ ಮನುಷ್ಯ ಜೀವನವು ಕೊಡುವಂಥ ಆನಂದ ಅಥವಾ ಸಂತೋಷಕ್ಕಿಂತ ಹೆಚ್ಚು ಅಗಾಧವಾದ ಪರಮಾನಂದದಲ್ಲಿ ನಾವು ಪ್ರವೇಶಿಸುತ್ತೇವೆ.

ಈ ದೈವೀ ಪ್ರಜ್ಞೆಗೆ ತೆರೆದು ಕೊಳ್ಳುವಂಥ ಅಥವಾ ಅದರಲ್ಲಿ ಪ್ರವೇಶಿಸುವಂಥ ಅನೇಕ ಮಾರ್ಗಗಳಿವೆ. ಬೇರೆಯವರಿಗೆ ತೋರಿಸುವ ಅಥವಾ ಹೇಳಿಕೊಡುವ ನನ್ನ ಮಾರ್ಗ ಹೀಗಿದೆ: ತನ್ನೊಳಗಡೆ ಹೋಗುವ ನಿರಂತರ ಅಭ್ಯಾಸದಿಂದ, ಅಭೀಪ್ಸೆಯಿಂದ ದೈವಕ್ಕೆ ತೆರೆದು ಕೊಳ್ಳುವುದರಿಂದ ದೈವೀ ಪ್ರಜ್ಞೆಗೆ ತೆರೆದು ಕೊಳ್ಳುವ ಮಾರ್ಗ. ಈ ಸ್ವ–ಸಮರ್ಪಣೆ ಎಂದರೆ, ದೈವೀ ಪ್ರಜ್ಞೆಯೊಂದಿಗೆ ನಿರಂತರ ಸಂಪರ್ಕ ಅಥವಾ ಒಂದಾಗುವಿಕೆ, ಅದರ ಶಾಂತಿಗಾಗಿ, ಶಕ್ತಿಗಾಗಿ, ಬೆಳಕಿಗಾಗಿ ಮತ್ತು ಸೌಖ್ಯಕ್ಕಾಗಿ ಆಶಿಸುವುದೇ, ಹೊರತು ಬೇರೆ ಏನನ್ನೂ ಕೇಳದಿರುವುದು ಮತ್ತು ಜಗತ್ತಿನಲ್ಲಿ ಅದು ಕೊಡುವ ಕಾರ್ಯವನ್ನು ನಾವು ಮಾಡಲು ಜೀವನದಲ್ಲಿ ಹಾಗೂ ಕ್ರಿಯೆಯಲ್ಲಿ ಅದರ ಸಾಧನವಾಗಿರುವುದು. ನಾವು ಒಮ್ಮೆ ಮುಕ್ತವಾಗಿ ದೈವೀ ಬಲವನ್ನು, ಮನಸ್ಸು ಮತ್ತು ಹೃದಯ ಮತ್ತು ದೇಹದಲ್ಲಿ ಕೆಲಸ ಮಾಡುವ ಚೈತನ್ಯದ ಶಕ್ತಿಯನ್ನು ಅನುಭವಿಸಲು ಸಾಧ್ಯವಾಗಬಹುದಾದರೆ, ಉಳಿದದ್ದು ಅದಕ್ಕೆ ನಿಷ್ಠರಾಗಿ ಉಳಿಯುವ, ಅದನ್ನು ಯಾವಾಗಲೂ ಕರೆಯುವ, ಅದು ಬಂದಾಗ ತನ್ನ ಕೆಲಸವನ್ನು ಮಾಡಲು ಅನುವು ಮಾಡಿಕೊಡುವ, ಮತ್ತು ಕೆಳ ಪ್ರಜ್ಞೆ ಮತ್ತು ನಿಮ್ನ ಸ್ವರೂಪಕ್ಕೆ ಸೇರಿದ ಎಲ್ಲವನ್ನು ಮತ್ತು ಕೆಳಮಟ್ಟದ ಬಲವನ್ನು ತಿರಸ್ಕರಿಸುವ ಸಂಗತಿಯಾಗಿದೆ.

ನನ್ನ ಸ್ಥಾನವನ್ನು ಮತ್ತು ನನ್ನ ಯೋಗ ಶಕ್ತಿಯ ಸ್ವರೂಪವನ್ನು ವಿವರಿಸುವ ವಿಷಯದ ಮೇಲೆ ನಾನು ತುಂಬಾ ಬರೆದಿದ್ದೇನೆ. ಸಾಮಾನ್ಯವಾಗಿ, ಈ ಯೋಗವನ್ನು ಅಭ್ಯಾಸ ಮಾಡಲು ನಾನು ಯಾರನ್ನೂ ಕೇಳುವುದಿಲ್ಲ, ಏಕೆಂದರೆ ಇದು ಮೊದಲಿನಿಂದಲೂ ಅಥವಾ ಅದಕ್ಕೆ ಬಲವಾದ ಕರೆಯನ್ನು ಅಭಿವೃದ್ಧಿಪಡಿಸುವವರಿಗೆ ಮಾತ್ರ ಸಾಧ್ಯ; ಏಕೆಂದರೆ ಇದು ಮೊದಲಿನಿಂದಲೂ ಅಥವಾ ಅದಕ್ಕೆ ಬಲವಾದ ಕರೆಯನ್ನು ಬೆಳೆಸಿಕೊಳ್ಳುವವರಿಗೆ ಮಾತ್ರ ಸಾಧ್ಯ; ಇತರರು ಅದರ ಮೂಲಕ ಕೊನೆಯವರೆಗೂ ಹೋಗಲು ಸಾಧ್ಯವಿಲ್ಲ. ಅನೇಕ ಯೋಗಿಗಳು ಮಾಡುವಂತೆ, ಕೇವಲ ಬಾಹ್ಯ ಸ್ವಭಾವದ ಒಂದು ರೀತಿಯ ಸ್ತಬ್ಧತೆಯ ಅಗತ್ಯವಿರುವವರಿಗೆ ಸಹಾಯ ಮಾಡಲು ನಾನು ಆಗಾಗ್ಗೆ ನನ್ನ ಪಥವನ್ನು ಬಿಟ್ಟು ಹೊರಹೋಗುವುದಿಲ್ಲ – ಆದರೂ ಕೆಲವು ಸಂದರ್ಭಗಳಲ್ಲಿ ನಾನು ಅದನ್ನು ಮಾಡಲು ನಿರಾಕರಿಸುವುದಿಲ್ಲ. ಉನ್ನತ ಪ್ರಜ್ಞೆಯನ್ನು ಕೆಳ ತರುವ ಮತ್ತು ಅದನ್ನು ಕೇವಲ “ಮೋಕ್ಷ”ಕ್ಕಾಗಿ ಒಂದು ಶಕ್ತಿಯನ್ನಾಗಿ ಮಾಡುವುದು ಮಾತ್ರವಲ್ಲದೆ, ಭೂಮಿಯ ಮೇಲಿನ ದೈವೀ ಜೀವನಕ್ಕಾಗಿ ಅದನ್ನು ಶಕ್ತಿಯನ್ನಾಗಿ ಮಾಡುವುದಾಗಿದೆ. ಈ ಉದ್ದೇಶದೊಂದಿಗೆ

ನಾನು ಸಾರ್ವಜನಿಕ ಜೀವನದಿಂದ ಹಿಂದೆ ಸರಿದಿದ್ದೇನೆ ಮತ್ತು ಈ ಆಶ್ರಮವನ್ನು ಪಾಂಡಿಚೆರಿಯಲ್ಲಿ ಸ್ಥಾಪಿಸಿದ್ದೇನೆ (ಒಂದು ಉತ್ತಮ ಜಗತ್ತಿಗಾಗಿ, ಈ ಆಶ್ರಮವು ಸನ್ಯಾಸಿಗಳಿಗಾಗಿ ಅಲ್ಲ, ಅದು ಇರುವುದು ಎಲ್ಲವನ್ನು ತೊರೆದು ಈ ಕಾರ್ಯಕ್ಕಾಗಿ ಸಿದ್ಧರಾಗಿರುವವರಿಗಾಗಿ). ಆದರೆ ಅದೇ ಸಮಯದಲ್ಲಿ, ತಮ್ಮ ಕುಟುಂಬಗಳಲ್ಲಿ ವಾಸಿಸುತ್ತಿರುವ ಮತ್ತು ನನ್ನಿಂದ ಆಧ್ಯಾತ್ಮಿಕ ಸಹಾಯವನ್ನು ಪಡೆಯುವ ಕಡಿಮೆ ಸಂಖ್ಯೆಯ ಶಿಷ್ಯರನ್ನು ಭಾರತದಾದ್ಯಂತ ಹೊಂದಿದ್ದೇನೆ.

ಮಹಾರಾಣಿಯವರೆ, ಸದ್ಯಕ್ಕೆ ಇಷ್ಟನ್ನು ತಮಗೆ ಉತ್ತರಿಸಬಲ್ಲೆ. ಈ ಪತ್ರದಲ್ಲಿ ನಾನು ವಿವರಿಸಿದ್ದಕ್ಕೂ ನೀವು ಅನ್ವೇಶಿಸುತ್ತಿರುವುದಕ್ಕೂ ಏನಾದರೂ ಸಂಬಂಧವಿದೆಯೇ ಎನ್ನುವುದನ್ನು ತಾವು ನಿರ್ಧರಿಸಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 36/440–442 – ಶ್ರೀ ಅರವಿಂದರು**

ಸಿದ್ಧತೆಯ ಅರ್ಥ ಸಾಮರ್ಥ್ಯವಲ್ಲ, ಅದರ ಅರ್ಥ ಇಚ್ಛೆ/ಒಪ್ಪಿಗೆ. ಎಲ್ಲಾ ತೊಂದರೆಗಳನ್ನು ಎದುರಿಸಲು ಮತ್ತು ಅವುಗಳಿಂದ ಪಾರಾಗಲು ಇಚ್ಛಾಶಕ್ತಿ ಇದ್ದರೆ (ಅದೆಷ್ಟೇ ಸಮಯ ತೆಗೆದುಕೊಳ್ಳಲಿ) ಆಗ ಆ ಪಥವನ್ನು ಆರಿಸಿಕೊಳ್ಳಬಹುದು.

*

ಸಾಮಾನ್ಯ ಜೀವನದ ಬಗ್ಗೆ ಕೇವಲ ಪ್ರಕ್ಷುಬ್ಧ ಅಸಮಾಧಾನವು ಈ ಯೋಗಕ್ಕೆ ಸಾಕಷ್ಟು ಸಿದ್ಧತೆಯಲ್ಲ. ಆಧ್ಯಾತ್ಮಿಕ ಜೀವನದಲ್ಲಿ ಯಶಸ್ಸಿಗೆ ಸಕಾರಾತ್ಮಕವಾದ ಆಂತರಿಕ ಕರೆ, ಬಲವಾದ ಇಚ್ಛಾಶಕ್ತಿ ಮತ್ತು ಅಗಾಧವಾದ ಸ್ಥಿರತೆಯು ಅಗತ್ಯವಾದ ಸಂಗತಿಗಳಾಗಿವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/27–28 – ಶ್ರೀ ಅರವಿಂದರು**

## ಅಮೇರಿಕೆಯ ಮಿಸ್ ಮಾರ್ಗರೇಟ್‌ರಿಗೆ ಮಾರ್ಗದರ್ಶನ

ಕುಮಾರಿ ಮಾರ್ಗರೆಟ್ ವುಡ್ರೊವಿಲ್ಸನ್ (Miss Margaret Woodrow Wilson) ಇವಳು ಯುದ್ಧ ಸಮಯದ ಅಮೆರಿಕೆಯ ಅಧ್ಯಕ್ಷರ ಮಗಳು. ಅವಳು 1932 ರಲ್ಲಿ ಅಮೇರಿಕೆಯ ನ್ಯೂಯಾರ್ಕ್ ನಗರದ ಸಾರ್ವಜನಿಕ ಗ್ರಂಥಾಲಯದಲ್ಲಿ ಶ್ರೀ ಅರವಿಂದರ ಗೀತಾ ಪ್ರಬಂಧಗಳು (Essays on Geeta) ಎಂಬ ಪುಸ್ತಕವನ್ನು

ಓದಿ ಆಧ್ಯಾತ್ಮಿಕವಾಗಿ ಪ್ರಭಾವಿರಾಗುತ್ತಾಳೆ. ಅವಳು, ಮಾರ್ಚ್ 3, 1936 ರಂದು ತನ್ನ ಸಾಧನೆಯಲ್ಲಿ ಮಾರ್ಗದರ್ಶನಕ್ಕಾಗಿ ಪ್ರಾರ್ಥಿಸುತ್ತಾ ಮತ್ತು (ಶ್ರೀ ಅರವಿಂದರ) ಶಿಷ್ಯಳಾಗಿ ಉಳಿಯಲು ಆಶ್ರಮಕ್ಕೆ ಬರಲು ಅವಕಾಶ ನೀಡಬಹುದೇ ಎಂದು ವಿಚಾರಿಸುತ್ತಾ ಶ್ರೀ ಅರಬಿಂದೋ ಅವರಿಗೆ ಪತ್ರವೊಂದನ್ನು ಬರೆಯುತ್ತಾಳೆ. 1938 ರಲ್ಲಿ (ಶ್ರೀ ಅರಬಿಂದೋ) ಆಶ್ರಮವನ್ನು ಸೇರಲು ಆಕೆಗೆ ಅನುಮತಿಯನ್ನು ನೀಡಲಾಯಿತು. ಶ್ರೀ ಅರವಿಂದರು ಅವಳಿಗೆ "ನಿಷ್ಟಾ" (ನಿಷ್ಟಾ ಎಂದರೆ, ಒಂದೇ ಗುರಿಯ ಮೇಲೆ ಒಂದೇ ಬಿಂದುವಿನಲ್ಲಿ ಸ್ಥಿರವಾದ ಏಕಾಗ್ರತೆ) ಎನ್ನುವ ಹೆಸರನ್ನು ನೀಡುತ್ತಾರೆ. ಅನಾರೋಗ್ಯದ ನಂತರ 1948 ರಲ್ಲಿ ಅವಳು ಸಾವನ್ನು ಹೊಂದುತ್ತಾಳೆ.

ದಿನಾಂಕ 3–3–1936 ರಂದು ಕುಮಾರಿ ಮಾರ್ಗರೆಟ್ ವಿಲ್ಸನ್ ಶ್ರೀ ಅರವಿಂದರಿಗೆ ಬರೆದ ಪತ್ರದ ಮತ್ತು ದಿನಾಂಕ 7–9–1936 ರಂದು ಶ್ರೀ ಅರವಿಂದರು ಅವಳಿಗೆ ಬರೆದ ಪತ್ರದ ಪ್ರತಿರೂಪವನ್ನು ನಾವು ಇಲ್ಲಿ ಪ್ರಸ್ತುತ ಪಡಿಸಿತ್ತಿದ್ದೇವೆ (ಈ ಪತ್ರಗಳನ್ನು ಪ್ರಕಟಿಸುವ ಮೊದಲು ಶ್ರೀ ಅರವಿಂದರು ಕೆಲವು ಮಾರ್ಪಾಡುಗಳನ್ನು ಮಾಡಿದ್ದಾರೆ).

## ಶ್ರೀ ಅರವಿಂದರಿಗೆ ಕುಮಾರಿ ಮಾರ್ಗರೆಟ್ ವಿಲ್ಸನ್ ಇವಳ ಪತ್ರ

ನ್ಯೂಯಾರ್ಕ್ ಮಾರ್ಚ್ 3, 1936

ಪ್ರೀತಿಯ ಶ್ರೀ ಅರಬಿಂದೋ,

ಗೀತೆಯ ಕುರಿತು ನಿಮ್ಮ ಪ್ರಬಂಧಗಳು 1932 ರ ಬೇಸಿಗೆಯಿಂದಲೂ (ಅವುಗಳ ಬಗ್ಗೆ ನನಗೆ ಮೊದಲ ಸಲ ಗೊತ್ತಾದ ನಂತರದಿಂದ) ನನಗೆ ಸಹಾಯ ಮತ್ತು ಸ್ಫೂರ್ತಿಯ ಮೂಲವಾಗಿದೆ. ನಿಮ್ಮ ನೇರವಾದ ಸಹಾಯಕ್ಕಾಗಿ ಹಾಗೂ ಸ್ಪೂರ್ತಿಗಾಗಿ ನಿಮ್ಮನ್ನು ವಿನಮ್ರವಾಗಿ ಕೇಳಲು ನಾನು ಈ ಪತ್ರವನ್ನು ಬರೆಯುತ್ತಿದ್ದೇನೆ. ಈ ದೇಶದಲ್ಲಿ ಯಾರನ್ನಾದರು ವಿಶ್ವಾಸದಿಂದ ಕೇಳಬೇಕೆಂದರೆ ನನಗೆ ಯಾರೂ ಗೊತ್ತಿಲ್ಲ, ಏಕೆಂದರೆ ಗೀತಾ ಪ್ರಬಂಧಗಳ ಬಗ್ಗೆ ಹೆಚ್ಚು ಜ್ಞಾನವನ್ನು ಹೊಂದಿದವರು ಇಲ್ಲಿ ಯಾರೂ ನನಗೆ ಗೊತ್ತಿಲ್ಲ. ಈ ಶಾಲೆ ಅಥವಾ ಆ ಶಾಲೆ ಅಥವಾ ಕೇಂದ್ರವನ್ನು ಸೇರಲು ನಾನು ಆಸೆ ಪಟ್ಟಾಗಲೆಲ್ಲಾ, ಅವರ ನಿಯಮಗಳು

ಮತ್ತು ಶಿಸ್ತುಗಳು ಅದರ ವಿಮೋಚನೆಗೆ ಸಹಾಯವಾಗದೆ ಸ್ವಯಂ ಸ್ವತಂತ್ರಗೊಳಿಸದೆ ಬಂಧನ ಮತ್ತು ನಿರ್ಬಂಧಿತವಾಗಿರುತ್ತದೆ ಎಂಬ ಭಯದಿಂದ ನಾನು ಹಿಂದೆ ಸರಿಯುತ್ತೇನೆ. ನಿಮ್ಮ ಆಶ್ರಮದ ಬಗ್ಗೆ ಮಾಹಿತಿ ಇರುವ ಕರಪತ್ರವೊಂದು ನನಗೆ ಸಿಕ್ಕಿದೆ, ಮತ್ತು ಮೊದಲಿಗೆ ನನ್ನಲ್ಲಿರುವ ಹಾಗೂ ಇತರಲ್ಲಿರುವ ಚೇತನದ ಪ್ರಜ್ಞೆಯಲ್ಲಿ ವಿಮೋಚನೆಗೊಳ್ಳಬೇಕಾದರೆ, ಮುಕ್ತವಾಗಿ ನನ್ನ ಮೇಲೆ ನಾನು ಹೇರಿಕೊಳ್ಳಬಹುದಾದ ಶಿಸ್ತುಗಳ ಬಗ್ಗೆ ಮತ್ತು ಕೊನೆಯದಾಗಿ ಅದನ್ನು ಭಗವಂತನು ನನ್ನ ಹೃದಯದಲ್ಲಿ ಇಚ್ಛಿಸಿದಾಗ, ಪುರುಷೋತ್ತಮ ಪ್ರಜ್ಞೆ ಮತ್ತು ಪುರುಷೋತ್ತಮನೊಂದಿಗೆ ಅಂತಿಮ ಕೂಡುವಿಕೆಯನ್ನು ಅನುಭವಿಸಲು ನೀವು ನನಗೆ ಸೂಚಿಸುವಿರಿ ಎಂದು ಧೈರ್ಯದಿಂದ ಭಾವಿಸುತ್ತೇನೆ. ಇದು ಸಾಧ್ಯವಾಗುವ ಮೊದಲು, ಈ ಮಾರ್ಗವು ದೀರ್ಘ ಮತ್ತು ಕಠಿಣವಾಗಿರುತ್ತದೆ ಎಂದು ನನಗೆ ತಿಳಿದಿದೆ, ಆದರೆ ನಾನು ಅದನ್ನು ಪ್ರವೇಶಿಸಲು ಬಯಸುತ್ತೇನೆ ಮತ್ತು ಯಾವುದೇ ಮಾನಸಿಕ ಸಂಪತ್ತು ಅಥವಾ ಶಕ್ತಿಯ ಆನಂದಕ್ಕಾಗಿ ದಾರಿಯಲ್ಲಿ ನಿಲ್ಲದಂತೆ ಸಾಧ್ಯವಾದಷ್ಟು ನೇರವಾಗಿ ಮತ್ತು ಬೇಗನೆ ಹೋಗಲು ಬಯಸುತ್ತೇನೆ. ಆದರೆ, ಮಾರ್ಗದುದ್ದಕ್ಕೂ ನಾನು ದೈವೀ ಕಾರ್ಯಗಳಿಗಾಗಿ ಆಧ್ಯಾತ್ಮಿಕ ಚೇತನದ ಸಾಧನವಾಗಬೇಕೆಂದು ಬಯಸುತ್ತೇನೆ.

ನಾನು ಈಗ ಭಯಾನಕ ಶೂನ್ಯತನದ ಬಗ್ಗೆ ಜಾಗೃತಳಾಗಿದ್ದೇನೆ, ಈಗ ನನ್ನ ಪ್ರತಿಯೊಂದು ಮಾತು ಮತ್ತು ಕಾರ್ಯವು ನಿಷ್ಪ್ರಯೋಜಕವಾಗಿದೆ ಎಂಬ ಅರಿವಿದೆ, ಏಕೆಂದರೆ ಆಂತರಿಕವಾಗಿ ಚೇತನದಿಂದ ನಾನು ಪ್ರೇರೇಪಿಸಲ್ಪಟ್ಟಿಲ್ಲ. ಅದು ಉನ್ನತ ಚೈತನ್ಯದಿಂದ ಅರಿವು ಹಾಗೂ ನಿರ್ದೇಶನದ ಹೊರತುಪಡಿಸಿ ಚಿಕ್ಕ ಚೇತನವು ಉಪಯುಕ್ತವಾಗಬಹುದು ಎಂಬ ಭ್ರಮೆಗೆ ನಾನು ಎಂದಿಗೂ ಒಳಪಡುವುದಿಲ್ಲ ಎಂಬ ಮನವರಿಕೆ ನನಗಾಗಿದೆ. ಹಾಗಾಗಿ ನಾನು, ಪರಿಚಿತ ತೀರವನ್ನು ತೊರೆದ ಆದರೆ ಆತ ಬಯಸುತ್ತಿರುವ ದಡವನ್ನು ಸೇರಲು ದಾರಿ ತಿಳಿಯದೆ, ಕಳೆದುಹೋದ (ಏಕೆಂದರೆ ಆತನಲ್ಲಿ ದಿಕ್ಸೂಚಿಯಿಲ್ಲ) ನಾವಿಕನಂತೆ ಇದ್ದೇನೆ...

"ಶಿಷ್ಯ ಸಿದ್ಧವಾದಲ್ಲಿ ಶಿಕ್ಷಕನಿರುತ್ತಾನೆ (ತಿಳಿದು ಕೊಳ್ಳಬೇಕೆಂಬ ಪ್ರಭಲವಾದ ಆಕಾಂಕ್ಷೆ ನಮ್ಮಲ್ಲಿದ್ದರೆ ಮಾರ್ಗದರ್ಶಕ ದೊರೆಯುತ್ತಾನೆ)" ಎನ್ನುವುದನ್ನು ನಾನು ಕೇಳಿದ್ದೇನೆ. ನಾನು ಸಿದ್ಧಳಾಗಿದ್ದೇನೋ ಇಲ್ಲವೋ ಅಥವಾ ನಿಮ್ಮ ನಿರ್ದೇಶನಗಳನ್ನು ಅನುಸರಿಸಲು ನಾನು ಸಮರ್ಥಳಾಗಿದ್ದೇನೆಯೇ ಎನ್ನುವುದು

ನನಗೆ ತಿಳಿದಿಲ್ಲ. ಆದರೆ ಪ್ರೀತಿಯ ಗುರುಗಳೆ, ನನಗೆ ದಾರಿ ತೋರಿಸಲು ನಾನು ನಿಮ್ಮನ್ನು ಬೇಡಿಕೊಳ್ಳುತ್ತೇನೆ, ಮತ್ತು ನಾನು ಅದನ್ನು ಭಯವಿಲ್ಲದೆ ಅನುಸರಿಸಲು ಪ್ರಯತ್ನಿಸುತ್ತೇನೆ. ಏಕೆಂದರೆ, ಈಗ ನನಗೆ ಅರಿವಿರದ ನನ್ನ ಸ್ವಂತ ಉನ್ನತ ಪ್ರಜ್ಞೆಯ ಪ್ರತಿನಿಧಿ ನೀವಾಗಿದ್ದೀರಿ ಎಂದು ನನಗೆ ತಿಳಿದಿದೆ. ಮೋಕ್ಷಕ್ಕಾಗಿ ನನ್ನ ಹಂಬಲವು ನಾನು ಅಂದುಕೊಂಡಷ್ಟು ಆಳ ಮತ್ತು ಪ್ರಾಮಾಣಿಕವಾಗಿಲ್ಲದಿದ್ದರೆ, ದಯವಿಟ್ಟು ಅದನ್ನು ಆಳವಾಗಿಸಿ (ಗುರುಗಳೆ, ಅದು ಕೆಲವೊಮ್ಮೆ ನನ್ನನ್ನು ಹಿಂಸಿಸುತ್ತಿದ್ದರೂ ಸಹ) ನಾನು ಅದನ್ನು ಕಳೆದುಕೊಳ್ಳಲು ಬಯಸುವುದಿಲ್ಲ.

ನಿಮ್ಮ ಆಶ್ರಮದಲ್ಲಿ ವಾಸಿಸದ ಶಿಷ್ಯರು ನಿಮ್ಮಲ್ಲಿದ್ದಾರೆ ಎಂದು ನನಗೆ ಹೇಳಲಾಗಿದೆ. ನೀವು ಅಮೆರಿಕದಲ್ಲಿ ಶಿಷ್ಯರನ್ನು ತೆಗೆದುಕೊಳ್ಳುತ್ತೀರಾ? ಯಾವುದೇ ಸಮಯದಲ್ಲಿ, ಎಲ್ಲವನ್ನೂ ಬಿಟ್ಟು ನಾನು ಆಶ್ರಮಕ್ಕೆ ಬಂದು ಅಲ್ಲಿ ವಾಸಿಸಲು ನೀವು ಅಪ್ಪಣೆಯನ್ನು ಕೊಟ್ಟರೆ, ನಾನು ಹಾಗೆ ಮಾಡುತ್ತೇನೆ. ದೇವರು ನನಗೆ ಸಹಾಯ ಮಾಡುತ್ತಾನೆ.

ನಿಮ್ಮ ಉತ್ತರವನ್ನು ನಾನು ವಿನಮ್ರವಾಗಿ ಕಾಯುತ್ತೇನೆ.

ನೀವು ಈಗಾಗಲೇ ನನಗಾಗಿ ಮಾಡಿದ ಎಲ್ಲದಕ್ಕೂ ನಾನು ನಿಮಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ನಿಮ್ಮ ವಿಶ್ವಾಸಿ,
ಮಾರ್ಗರೆಟ್ ವುಡ್ರೊವಿಲ್ಸನ್

**ಕುಮಾರಿ ಮಾರ್ಗರೆಟ್ ವಿಲ್ಸನ್ ಇವಳಿಗೆ ಶ್ರೀ ಅರವಿಂದರ ಪತ್ರ**

ಗೆ: ಕುಮಾರಿ ಮಾರ್ಗರೆಟ್ ವುಡ್ರೊವಿಲ್ಸನ್,

ಪಾಂಡಿಚೇರಿ
ಸೆಪ್ಟೆಂಬರ್ 7, 1936

ದೇವನನ್ನು ಕಂಡುಕೊಳ್ಳುದು ನಿಜಕ್ಕೂ ಆಧ್ಯಾತ್ಮಿಕ ಸತ್ಯವನ್ನು ಮತ್ತು ಆಧ್ಯಾತ್ಮಿಕ ಜೀವನವನ್ನು ಹುಡುಕುವ ಮೊದಲ ಕಾರಣವಾಗಿದೆ; ಇದೊಂದು ಅನಿವಾರ್ಯವಾದ ಸಂಗತಿಯಾಗಿದೆ ಮತ್ತು ಅದಿಲ್ಲದೆ ಉಳಿದವುಗಳೆಲ್ಲ ಏನೂ ಅಲ್ಲ. ದೇವನನ್ನು ಒಮ್ಮೆ ಕಂಡುಕೊಂಡರೆ, ಆತನನ್ನು ಅಭಿವ್ಯಕ್ತಗೊಳಿಸಲು –

ಅಂದರೆ, ಮೊದಲಿಗೆ ನಮ್ಮ ಸ್ವಯಂ ಸೀಮಿತ ಪ್ರಜ್ಞೆಯನ್ನು ದೈವೀ ಪ್ರಜ್ಞೆಯಾಗಿ ಪರಿವರ್ತಿಸುವುದು, ಅನಂತವಾದ ಶಾಂತಿ, ಬೆಳಕು, ಪ್ರೀತಿ, ಶಕ್ತಿ, ಆನಂದದಲ್ಲಿ ಬದುಕುವುದು, ನಮ್ಮ ಅಗತ್ಯ ಸ್ವರೂಪದಲ್ಲಿ ಹಾಗೂ ಅದರ ಪರಿಣಾಮವಾಗಿ ನಮ್ಮ ಸಕ್ರೀಯ ಸ್ವಭಾವದಲ್ಲಿ ಅದರ ನಾವೆ, ಸಂಪರ್ಕ ಪಥ, ಸಾಧನವಾಗುವುದು. ಭೌತಿಕ ಸ್ಥರದಲ್ಲಿ ಏಕತೆಯ ತತ್ತ್ವವನ್ನು ಚಟುವಟಿಕೆಯಲ್ಲಿ ತೊಡಗಿಸುವುದು ಅಥವಾ ಮಾನವೀಯತೆಗಾಗಿ ಕೆಲಸ ಮಾಡವುದು ಸತ್ಯದ ಮಾನಸಿಕ ಅಶುದ್ಧ ಅನುವಾದವಾಗಿದೆ – ಈ ವಿಷಯಗಳು ಆಧ್ಯಾತ್ಮಿಕ ಅನ್ವೇಷಣೆಯ ಮೊದಲ ಅಥವಾ ನಿಜವಾದ ಉದ್ದೇಶವಲ್ಲ. ನಮ್ಮ ಆತ್ಮನನ್ನು ಕಂಡುಕೊಳ್ಳಬೇಕು, ದೇವನನ್ನು ಕಂಡುಕೊಳ್ಳಬೇಕು. ನಂತರವೇ, ನಮ್ಮಿಂದ ಆತ್ಮನು ಅಥವಾ ದೇವನು ಬೇಡಿಕೆಗಳು ಏನು ಎನ್ನುವುದನ್ನು ಮಾತ್ರ ನಾವು ತಿಳಿದು ಕೊಳ್ಳಬಹುದು. ಅಲ್ಲಿಯವರೆಗೆ ನಮ್ಮ ಜೀವನ ಮತ್ತು ಕ್ರಿಯೆಯು ದೈವವನ್ನು ಹುಡುಕುವಲ್ಲಿ ಸಹಾಯ ಅಥವಾ ಸಾಧನವಾಗಿರಬಹುದು ಮತ್ತು ಅದು ಬೇರೆ ಯಾವುದೇ ಉದ್ದೇಶವನ್ನು ಹೊಂದಿರಬಾರದು. ನಾವು ಆಂತರಿಕ ಪ್ರಜ್ಞೆಯಲ್ಲಿ ಬೆಳೆದಂತೆ, ಅಥವಾ ದೈವೀಕತೆಯ ಆಧ್ಯಾತ್ಮಿಕ ಸತ್ಯವು ನಮ್ಮಲ್ಲಿ ಬೆಳೆದಂತೆ, ನಮ್ಮ ಜೀವನ ಮತ್ತು ಕ್ರಿಯೆಯು ಅದರಿಂದ ಹೆಚ್ಚು ಹೆಚ್ಚು ಹರಿಯಬೇಕು, ಅದರೊಂದಿಗೆ ಒಂದಾಗಿರಬೇಕು. ಆದರೆ ಅವುಗಳು ಏನಾಗಿರಬೇಕು ಎಂದು ನಮ್ಮ ಸೀಮಿತ ಮಾನಸಿಕ ಪರಿಕಲ್ಪನೆಗಳಿಂದ ಮೊದಲೇ ನಿರ್ಧರಿಸುವುದು ಆಧ್ಯಾತ್ಮಿಕ ಸತ್ಯದ ಬೆಳವಣಿಗೆಗೆ ಅಡ್ಡಿಯಾಗುವುದು.

ಅದು ಬೆಳೆದಂತೆ ನಾವು ದೈವೀ ಬೆಳಕನ್ನು ಮತ್ತು ಸತ್ಯವನ್ನು, ದೈವೀ ಶಕ್ತಿಯನ್ನು ಮತ್ತು ಬಲವನ್ನು, ದೈವೀ ಶುದ್ಧತೆ ಮತ್ತು ಶಾಂತಿಯು ನಮ್ಮೊಳಗೆ ಕೆಲಸ ಮಾಡುತ್ತಿರುವುದನ್ನು, ನಮ್ಮ ಕಾರ್ಯಗಳನ್ನು ಮತ್ತು ನಮ್ಮ ಪ್ರಜ್ಞೆಯನ್ನು ನಿಭಾಯಿಸುತ್ತಿರುವುದನ್ನು (ನಿಯಂತ್ರಿಸುವುದನ್ನು), ನಮ್ಮನ್ನು ದೈವೀ ಸ್ವರೂಪದಲ್ಲಿ ಮರು–ರೂಪಿಸಲು ಅವುಗಳ ಉಪಯೋಗವನ್ನು, ಅಶುದ್ಧತೆಯನ್ನು ತೆಗೆಯುತ್ತಿರುವುದನ್ನು ಮತ್ತು ಅಲ್ಲಿ ಆತ್ಮದ ಶುದ್ಧ ಚಿನ್ನವನ್ನು ಹಾಕುತ್ತಿರುವುದನ್ನು ಅನುಭವಿಸುತ್ತೇವೆ. ದೈವೀ ಉಪಸ್ಥಿತಿಯು ಯಾವಾಗಲೂ ನಮ್ಮಲ್ಲಿದ್ದಾಗ ಮತ್ತು ಪ್ರಜ್ಞೆಯು ರೂಪಾಂತರಗೊಂಡಾಗ ಮಾತ್ರ ನಾವು ದೈವಿಕತೆಯನ್ನು ಭೌತಿಕ ಸ್ಥರದಲ್ಲಿ ಅಭಿವ್ಯಕ್ತಪಡಿಸಲು ಸಿದ್ಧರಿದ್ದೇವೆ ಎಂದು ಹೇಳುವ ಹಕ್ಕನ್ನು ನಾವು ಹೊಂದಬಹುದೇ? ಒಂದು ಮಾನಸಿಕ ಆದರ್ಶ ಅಥವಾ ತತ್ತ್ವವನ್ನು

ಉಳಿಸಿಕೊಳ್ಳುವುದು ಮತ್ತು ಚಟುವಟಿಕೆಯ ಮೇಲೆ ಹೇರುವುದು ನಮ್ಮನ್ನು ಮಾನಸಿಕ ಸಾಕ್ಷಾತ್ಕಾರಕ್ಕೆ ಸೀಮಿತಗೊಳಿಸುವ ಅಪಾಯವನ್ನು ತರುತ್ತದೆ. ಅಥವಾ ನಿಜವಾದ ಬೆಳವಣಿಗೆಯನ್ನು, ದೇವನೊಂದಿಗೆ (ಯೋಚನೆಗಳ) ಪೂರ್ಣ ಹಂಚಿಕೆಯಲ್ಲಿ ಮತ್ತು ಒಂದಾಗುವಿಕೆಯಲ್ಲಿ ಮತ್ತು ನಮ್ಮ ಜೀವನದಲ್ಲಿ ಆತನ ಇಚ್ಛೆಯು ಮುಕ್ತ ಹಾಗೂ ಸ್ನೇಹಶೀಲ ಹೊರಹೋಗುವಿಕೆಯಲ್ಲಿ ಬಂದೆರಗಲಿರುವ ಅಥವಾ ಅರೆ–ರಚನೆಯಿಂದ ವಿರೂಪಗೊಳಿಸುವ ಅಪಾಯವನ್ನು ತರುತ್ತದೆ. ಇದೊಂದು, ಇಂದಿನ ಪೀಡಿತವಾದ ಮನಸ್ಸನ್ನು ಅನುಗೊಳಿಸುವಿಕೆಯ ತಪ್ಪಾಗಿದೆ. ಒಂದು ಅಗತ್ಯವಾದ ಸಂಗತಿಯಿಂದ ನಮ್ಮನ್ನು ಬೇರೆಡೆಗೆ ತಿರುಗಿಸುವಂಥ ಸಣ್ಣ ಸಂಗತಿಗಳಲ್ಲಿ ತರುವುದಕ್ಕಿಂತ ಆತನ ಸಾಕ್ಷಾತ್ಕಾರವು ಕೊಡುವಂಥ ಶಾಂತಿಗಾಗಿ ಅಥವಾ ಬೆಳಕಿಗಾಗಿ ಅಥವಾ ಅತ್ಯಾನಂದಕ್ಕಾಗಿ ದೇವನನ್ನು ಸಮೀಪಿಸುವುದು ಅತಿ ಉತ್ತಮವಾಗಿದೆ. ಭೌತಿಕ ಜೀವನದ ದೈವೀಕರಣ ಮತ್ತು ಆಂತರಿಕ ಜೀವನವು ನಾವು ದೈವೀ ಯೋಜನೆಯಾಗಿ ನೋಡುವ ಭಾಗವಾಗಿದೆ, ಆದರೆ ಆಂತರಿಕ ಸಾಕ್ಷಾತ್ಕಾರದ ಹೊರ ಹರಿವಿನಿಂದ ಮಾತ್ರ ಇದನ್ನು ನೆರವೇರಿಸಬಹುದಾಗಿದೆ. ಈ ಸಾಕ್ಷಾತ್ಕಾರವು ಆಂತರಂಗದಿಂದ ಬಾಹ್ಯವಾಗಿ ಬೆಳೆಯುವಂಥದ್ದು ಮತ್ತು ಅದು ಮಾನಸಿಕ ತತ್ವದಿಂದ ಕೆಲಸ ಮಾಡುವುದರಿಂದ ಬೆಳೆಯಲಾರದು.

ಮಾನಸಿಕ ಹುಡುಕಾಟವನ್ನು ಜೀವಂತ ಆಧ್ಯಾತ್ಮಿಕ ಅನುಭವವನ್ನಾಗಿ ಪರಿವರ್ತಿಸುವ ಸಲುವಾಗಿ ಅನುಸರಿಸಬೇಕಾದ ಶಿಸ್ತು ಏನು ಎಂದು ನೀವು ಕೇಳಿದ್ದೀರಿ. ಮೊದಲ ಅವಶ್ಯಕತೆ ಯಾವುದೆಂದರೆ, ನಿಮ್ಮೊಳಗೆ ನಿಮ್ಮ ಪ್ರಜ್ಞೆಯ ಏಕಾಗ್ರತೆಯ ಅಭ್ಯಾಸವಾಗಿದೆ. ಸಾಮಾನ್ಯ ಮಾನವ ಮನಸ್ಸು, ಮೇಲ್ಮೈಯಲ್ಲಿ, ನಿಜವಾದ ಆತ್ಮನನ್ನು ಮರೆಮಾಡುವಂಥ ಒಂದು ಚಟುವಟಿಕೆಯನ್ನು ಹೊಂದಿದೆ. ಆದರೆ, ಅಲ್ಲಿ ಇನ್ನೊಂದು ಸಂಗತಿ ಇದೆ. ಅದೇನೆಂದರೆ, ಮೇಲ್ಮೈ ಹಿಂದಿರುವ ಒಂದು ಗುಪ್ತ ಪ್ರಜ್ಞೆ, ಇದರಲ್ಲಿ ನಾವು ನಿಜವಾದ ಆತ್ಮನ ಮತ್ತು ಪ್ರಕೃತಿಯ ದೊಡ್ಡದಾದ, ಆಳವಾದ ಸತ್ಯದ ಬಗ್ಗೆ ಅರಿವನ್ನು ಹೊಂದಬಹುದು, ಆತ್ಮನನ್ನು ಅರಿತು ಕೊಳ್ಳಬಹುದು ಮತ್ತು ಪ್ರಕೃತಿಯನ್ನು ಮುಕ್ತಗೊಳಿಸಬಹುದು ಮತ್ತು ಪರಿವರ್ತಿಸಬಹುದು. ಮೇಲ್ಮೈ ಮನಸ್ಸನ್ನು ಶಾಂತಗೊಳಿಸುವುದು ಮತ್ತು ಆಂತರಿಕವಾಗಿ ಬದುಕಲು ಪ್ರಾರಂಭಿಸುವುದು ಈ ಏಕಾಗ್ರತೆಯ ಉದ್ದೇಶವಾಗಿದೆ. ಬಾಹ್ಯ ಪ್ರಜ್ಞೆಯನ್ನು ಹೊರತುಪಡಿಸಿ, ಈ ನಿಜವಾದ ಪ್ರಜ್ಞೆಯಲ್ಲಿ ಎರಡು ಪ್ರಮುಖ ಕೇಂದ್ರಗಳಿವೆ, ಒಂದು ಹೃದಯದಲ್ಲಿ (ಭೌತಿಕ ಹೃದಯವಲ್ಲ, ಆದರೆ ಎದೆಯ

ಮಧ್ಯದಲ್ಲಿರುವ ಹೃದಯ ಕೇಂದ್ರ), ಒಂದು ತಲೆಯಲ್ಲಿ. ಹೃದಯದಲ್ಲಿನ ಏಕಾಗ್ರತೆಯು ಒಳಗಡೆ ತೆರೆದು ಕೊಳ್ಳುತ್ತದೆ ಮತ್ತು ಈ ಆಂತರಿಕ ಮಾರ್ಗವನ್ನು ಅನುಸರಿಸುವುದರಿಂದ ಮತ್ತು ಆಳದಲ್ಲಿ ಹೋಗುವುದರಿಂದ, ವ್ಯಕ್ತಿಯಲ್ಲಿರುವ ಆತ್ಮನ ಅಥವಾ ಚೈತ್ಯ ಪುರುಷನ, ದೈವೀ ಅಂಶದ ಬಗ್ಗೆ ಅರಿವನ್ನು ಹೊಂದಬಹುದು. ಅನಾವರಣಗೊಂಡ ಈ ಪುರುಷನು ಪ್ರಕೃತಿಯನ್ನು ನಿಯಂತ್ರಿಸಲು, ಅದನ್ನು ಮತ್ತು ಅದರ ಎಲ್ಲ ಚಲನೆಗಳನ್ನು ಸತ್ಯದ ಕಡೆಗೆ, ದೈವದ ಕಡೆಗೆ ತಿರುಗಿಸಲು ಮತ್ತು ಮೇಲಿರುವ ಎಲ್ಲವನ್ನೂ ಕರೆಯಲು ಮುಂದೆ ಬರಲು ಪ್ರಾರಂಭಿಸುತ್ತಾನೆ. ಇದು ಉಪಸ್ಥಿತಿಯ ಪ್ರಜ್ಞೆಯನ್ನು, ಅಸ್ತಿತ್ವದ ಸಮರ್ಪಣೆಯನ್ನು ಅತ್ಯುನ್ನತ ಸ್ಥಿತಿಗೆ ತರುತ್ತದೆ ಮತ್ತು ನಮ್ಮ ಮೇಲೆ ಕಾಯುತ್ತಿರುವಂಥ ಉನ್ನತ ಶಕ್ತಿಯ ಮತ್ತು ಪ್ರಜ್ಞೆಯು ನಮ್ಮ ಪ್ರಕೃತಿಯಲ್ಲಿ ಅವರೋಹಣವನ್ನು ಆಹ್ವಾನಿಸುತ್ತದೆ.

ನಮ್ಮನ್ನು ನಾವು ದೇವನಿಗೆ ಅರ್ಪಣೆ ಮಾಡಿಕೊಳ್ಳುವುದರೊಂದಿಗೆ ಹೃದಯ ಕೇಂದ್ರದಲ್ಲಿ ಏಕಾಗ್ರಗೊಳ್ಳುವುದು ಮತ್ತು ಈ ಆಂತರಿಕ ತೆರೆದು ಕೊಳ್ಳುವಿಕೆಗಾಗಿ ಹಾಗೂ ಹೃದಯದಲ್ಲಿ ಇರುವಿಕೆಗಾಗಿ ಆಶಿಸುವುದು ಮೊದಲ ಮಾರ್ಗವಾಗಿದೆ, ಅದನ್ನು ಮಾಡಲು ಸಾಧ್ಯವಾದರೆ ಅದು ಸಹಜ ಆರಂಭ; ಒಮ್ಮೆ ಪಡೆದ ಅದರ ಫಲಿತಾಂಶಕ್ಕಾಗಿ ಆಧ್ಯಾತ್ಮಿಕ ಮಾರ್ಗವನ್ನು ನಾವು ಬೇರೆ ರೀತಿಯಲ್ಲಿ ಪ್ರಾರಂಭ ಮಾಡುವುದಕ್ಕಿಂತ ಹೆಚ್ಚು ಸುಲಭ ಮತ್ತು ಸುರಕ್ಷಿತವಾಗಿಸುತ್ತದೆ.

ತಲೆಯಲ್ಲಿನ, ಮನಸ್ಸಿನ ಕೇಂದ್ರದಲ್ಲಿನ ಏಕಾಗ್ರತೆಯು ಇನ್ನೊಂದು ಮಾರ್ಗವಾಗಿದೆ. ಒಂದು ವೇಳೆ ಇದು ಮೇಲ್ಮೈ ಮನಸ್ಸಿನ ಮೌನವನ್ನು ತಂದರೆ, ಅದು ಆಂತರಿಕವಾದ, ದೊಡ್ಡದಾದ, ಆಳವಾದ ಮನಸ್ಸನ್ನು ತೆರೆಯುತ್ತದೆ. ಈ ಮನಸ್ಸಿನೊಳಗೆ ಆಧ್ಯಾತ್ಮಿಕ ಅನುಭವ ಮತ್ತು ಆಧ್ಯಾತ್ಮಿಕ ಜ್ಞಾನವನ್ನು ಪಡೆಯುವ ಹೆಚ್ಚು ಸಾಮರ್ಥ್ಯವಿದೆ. ಆದರೆ ಒಮ್ಮೆ ಇಲ್ಲಿ ಏಕಾಗ್ರಗೊಳಿಸಿದ ನಂತರ ಮೌನ ಮಾನಸಿಕ ಪ್ರಜ್ಞೆಯನ್ನು ಮನಸ್ಸಿನ ಮೇಲಿರುವಂಥ ಎಲ್ಲದಕ್ಕೂ ಮೇಲಕ್ಕೆ ತೆರೆಯಬೇಕು. ಸ್ವಲ್ಪ ಸಮಯದ ನಂತರ ಪ್ರಜ್ಞೆಯು ಮೇಲಕ್ಕೆ ಏರುತ್ತಿರುವುದನ್ನು ಅನುಭವಿಸಬಹುದು ಮತ್ತು ಕೊನೆಯಲ್ಲಿ, ಇಷ್ಟು ದಿನ ದೇಹದಲ್ಲಿ ಕಟ್ಟಲ್ಪಟ್ಟಂಥ ಮುಚ್ಚಳವನ್ನು ಮೀರಿ ಅದು ಏರುತ್ತದೆ ಮತ್ತು ಅದು ತಲೆಯ ಮೇಲಿರುವ ಒಂದು ಕೇಂದ್ರವನ್ನು ಕಂಡುಕೊಳ್ಳುತ್ತದೆ. ಅದು ಅಲ್ಲಿ ಅನಂತದಲ್ಲಿ ಮುಕ್ತಗೊಳಿಸಲ್ಪಡುತ್ತದೆ. ಅದು ಅಲ್ಲಿ ವಿಶ್ವಾತ್ಮನೊಂದಿಗೆ, ದಿವ್ಯ ಶಾಂತಿ, ಬೆಳಕು, ಶಕ್ತಿ, ಜ್ಞಾನ,

ಆನಂದದೊಂದಿಗೆ ಸಂಪರ್ಕಕ್ಕೆ ಬರಲು ಪ್ರಾರಂಭಿಸುತ್ತದೆ. ಅದರಲ್ಲಿ ಪ್ರವೇಶಿಸಲು ಮತ್ತು ಅದೇ ಆಗಲು, ಮತ್ತು ಪ್ರಕೃತಿಯಲ್ಲಿ ಈ ಸಂಗತಿಗಳ ಅವರೋಹಣವನ್ನು ಅನುಭವಿಸಲು ಪ್ರಾರಂಭಿಸುತ್ತದೆ. ಮನಸ್ಸಿನಲ್ಲಿ ಸ್ತಬ್ಧತೆಯ ಆಕಾಂಕ್ಷೆಯೊಂದಿಗೆ ತಲೆಯಲ್ಲಿ ಕೇಂದ್ರೀಕರಿಸುವುದು ಮತ್ತು ಆತ್ಮನ ಹಾಗೂ ಮೇಲಿರುವ ದೈವೀ ಸಾಕ್ಷಾತ್ಕಾರವು ಏಕಾಗ್ರತೆಯ ಎರಡನೆಯ ಮಾರ್ಗವಾಗಿದೆ. ಆದಾಗ್ಯೂ, ತಲೆಯಲ್ಲಿನ ಪ್ರಜ್ಞೆಯ ಏಕಾಗ್ರತೆಯು ಮೇಲಿರುವ ಕೇಂದ್ರಕ್ಕೆ ಅದರ ಆರೋಹಣದ ಸಿದ್ಧತೆಯಾಗಿದೆ ಎಂಬುದನ್ನು ನೆನಪಿಟ್ಟುಕೊಳ್ಳುವುದು ಬಹಳ ಮುಖ್ಯ; ಇಲ್ಲದಿದ್ದರೆ ನಾವು ನಮ್ಮ ಸ್ವಂತ ಮನಸ್ಸಿನಲ್ಲಿ ಮತ್ತು ಅದರ ಅನುಭವಗಳಲ್ಲಿ ಮುಚ್ಚಿಹೋಗಬಹುದು ಅಥವಾ ಇನ್ನೂ ಉತ್ತಮವೆಂದರೆ, ಆಧ್ಯಾತ್ಮಿಕ ಅತೀತಕ್ಕೆ ಏರಲು ಮತ್ತು ಅಲ್ಲಿ ಇರುವುದಕ್ಕಿಂತ ಮೇಲಿರುವ ಸತ್ಯದ ಪ್ರತಿಬಿಂಬವನ್ನು ಪಡೆದುಕೊಳ್ಳಬಹುದು. ಕೆಲವರಿಗೆ ಮಾನಸಿಕ ಏಕಾಗ್ರತೆಯು ಸುಲಭವಾದರೆ, ಹೃದಯ ಕೇಂದ್ರದಲ್ಲಿನ ಏಕಾಗ್ರತೆಯು ಕೆಲವರಿಗೆ ಸುಲಭ; ಕೆಲವರು ಎರಡನ್ನೂ ಪರ್ಯಾಯವಾಗಿ ಮಾಡುವ ಸಾಮರ್ಥ್ಯ ಹೊಂದಿದ್ದಾರೆ – ಆದರೆ ನಾವು ಅದನ್ನು ಮಾಡಲು ಸಾಧ್ಯವಾಗುವುದಾದರೆ ಹೃದಯ ಕೇಂದ್ರದಿಂದ ಪ್ರಾರಂಭಿಸುವುದು ಹೆಚ್ಚು ಅಪೇಕ್ಷಣೀಯವಾಗಿದೆ.

ಈ ಶಿಸ್ತಿನ/ವಿಷಯದ ಇನ್ನೊಂದು ಬದಿಯು ಪ್ರಕೃತಿಯ, ಮನಸ್ಸಿನ, ಪ್ರಾಣಿಕ ಅಥವಾ ಭೌತಿಕ ಪುರುಷನ ಚಟುವಟಿಕೆಗಳಿಗೆ ಸಂಬಂಧಿಸಿದೆ. ನಾವು, ಹೊಂದಿಕೆ–ಯಾಗದ ಭಾಗಗಳಲ್ಲಿ ವಿಂಗಡಿಸಬಾರದೆಂದರೆ (ವಿಭಜಿಸಲ್ಪಡಬಾರದೆಂದರೆ) ಪ್ರಕೃತಿಯನ್ನು ಆಂತರಿಕ ಸಾಕ್ಷಾತ್ಕಾರದೊಂದಿಗೆ ಹೊಂದಿಸುವುದು ಇಲ್ಲಿನ ತತ್ತ್ವವಾಗಿದೆ. ಇಲ್ಲಿ ಸಾಧ್ಯವಿರುವ ಹಲವಾರು ವಿಭಾಗಗಳು ಅಥವಾ ಪ್ರಕ್ರಿಯೆಗಳಿವೆ. ಅವುಗಳಲ್ಲಿ ಒಂದು ಪ್ರಕ್ರಿಯೆ ಯಾವುದೆಂದರೆ: ದೇವನಿಗೆ ಎಲ್ಲ ಚಟುವಟಿಕೆಗಳನ್ನು ಅರ್ಪಿಸುವುದು ಮತ್ತು ಆಂತರಿಕ ಮಾರ್ಗದರ್ಶನಕ್ಕಾಗಿ ಆಗ್ರಹಿಸುವುದು ಮತ್ತು ಉನ್ನತ ಪ್ರಭಾವದಿಂದ ನಮ್ಮ ಪ್ರಕೃತಿಯಲ್ಲಿ ಆಸಕ್ತಿ ಹೊಂದುವುದು. ಆಂತರಿಕ ಆತ್ಮನ ತೆರೆಯುವಿಕೆ ಅಲ್ಲಿದ್ದರೆ, ಚೈತ್ಯ ಪುರುಷನು ಮುಂದೆ ಬಂದರೆ, ಆಗ ಅಲ್ಲಿ ದೊಡ್ಡದಾದ ತೊಂದರೆ ಇರುವುದಿಲ್ಲ – ಅಲ್ಲಿ, ಅದರೊಂದಿಗೆ, ಆತ್ಮಸಂಬಂಧಿ ತಾರತಮ್ಯ, ನಿರಂತರ ಸೂಚನೆ, ಕೊನೆಯದಾಗಿ ಎಲ್ಲ ಅಪೂರ್ಣತೆಗಳನ್ನು ಬಹಿರಂಗಪಡಿಸುವಂಥ ಮತ್ತು ಸದ್ದಿಲ್ಲದೆ ತೆಗೆದುಹಾಕುವಂಥ, ಸರಿಯಾದ ಮಾನಸಿಕ ಮತ್ತು ಪ್ರಮುಖ ಚಲನೆಗಳನ್ನು ತರುವಂಥ ಮತ್ತು ಭೌತಿಕ ಪ್ರಜ್ಞೆಯನ್ನೂ ಸಹ ಪುನರ್ನಿರ್ಮಾಣ ಮಾಡುವಂಥ ಪ್ರಭುತ್ವವು ಬರುತ್ತದೆ. ಮತ್ತೊಂದು

ವಿಧಾನವೆಂದರೆ, ಮನಸ್ಸಿನ, ಜೀವನದ, ಭೌತಿಕ ಪುರುಷನ ಚಲನೆಗಳಿಂದ ಬೇರ್ಪಟ್ಟು ಹಿಂದೆ ನಿಲ್ಲುವುದು, ಅವುಗಳ ಚಟುವಟಿಕೆಗಳನ್ನು ಹಿಂದಿನ ಕರ್ಮಗಳಿಂದ ನಮ್ಮ ಮೇಲೆ ಹೇರಲ್ಪಟ್ಟ ವ್ಯಕ್ತಿಯಲ್ಲಿನ ಸಾಮಾನ್ಯ ಸ್ವಭಾವದ ಅಭ್ಯಾಸದ ರಚನೆ ಮಾತ್ರ ಎಂದು ಪರಿಗಣಿಸುವುದು (ನಮ್ಮ ನೈಜ ಪುರುಷನ ಯಾವುದೇ ಭಾಗವಾಗಿ ಅಲ್ಲ): ಇದರಲ್ಲಿ ನಾವು ಒಂದು ಪ್ರಮಾಣದಲ್ಲಿ ಯಶಸ್ವಿಯಾದಂತೆ ಪ್ರತ್ಯೇಕವಾಗಿ ಬಿಡುತ್ತೇವೆ, ಮನಸ್ಸು ಮತ್ತು ಅದರ ಚಟುಚಟಿಕೆಗಳನ್ನು ತನ್ನದೆಂದು ನೋಡುವುದಿಲ್ಲ, ಜೀವನ ಮತ್ತು ಅದರ ಚಟುವಟಿಕೆಗಳನ್ನು ತನ್ನದೆಂದು ನೋಡುವುದಿಲ್ಲ, ದೇಹ ಮತ್ತು ಅದರ ಚಟುವಟಿಕೆಗಳನ್ನು ತನ್ನದೆಂದು ನೋಡುವುದಿಲ್ಲ, ನಮ್ಮೊಳಗಿರುವ ಆಂತರಿಕ ಪುರುಷನ ಬಗ್ಗೆ ಅರಿವಾಗುತ್ತದೆ – ಆಂತರಿಕ ಮಾನಸಿಕ, ಆಂತರಿಕ ಪ್ರಾಣಿಕ, ಆಂತರಿಕ ದೈಹಿಕ – ಮೌನ, ಶಾಂತ, ಬಂಧಮುಕ್ತ, ಕಡಿದುಕೊಂಡಿರುವ ಇದು ಮೇಲಿನ ನಿಜವಾದ ಆತ್ಮವನ್ನು ಪ್ರತಿಬಿಂಬಿಸುತ್ತದೆ ಮತ್ತು ಅದರ ನೇರ ಪ್ರತಿನಿಧಿಯಾಗಿರಬಹುದು; ಈ ಆಂತರಿಕ ಶಾಂತ ಪುರುಷನಿಂದ ಯಾವುದೆಲ್ಲವನ್ನು ತಿರಸ್ಕರಿಬೇಕೊ ಆ ತಿರಸ್ಕಾರವನ್ನು, ಏನನ್ನು ಮಾತ್ರ ಇಡಬಹುದು ಮತ್ತು ಪರಿವರ್ತಿಸಬಹುದು ಅದರ ಸ್ವೀಕೃತಿಯನ್ನು, ಪರಿಪೂರ್ಣತೆಗೆ ಒಂದು ಪ್ರಭಲವಾದ ಇಚ್ಛೆಯನ್ನು ಅಥವಾ ಪ್ರತಿ ಹಂತದಲ್ಲೂ ಸಹಜ ಸ್ವಭಾವದ ಬದಲಾವಣೆಗಾಗಿ ಏನು ಅವಶ್ಯಕತೆ ಇದೆಯೋ ಅದನ್ನು ಮಾಡಲು ದೈವೀ ಶಕ್ತಿಗೆ ಕರೆಯನ್ನು ಮುಂದುವರೆಸುತ್ತದೆ. ಇದು ಮನಸ್ಸನ್ನು, ಜೀವನವನ್ನು ಮತ್ತು ದೇಹವನ್ನೂ ಅಂತರಾಳದ ಚೈತ್ಯ ಅಂಶಕ್ಕೂ ಮತ್ತು ಅದರ ಮಾರ್ಗದರ್ಶಿ ಪ್ರಭಾವಕ್ಕೂ ಅಥವಾ ಅದರ ನೇರ ಮಾರ್ಗದರ್ಶನಕ್ಕೂ ಸಹ ತೆರೆದುಕೊಳ್ಳಬಹುದು. ಹೆಚ್ಚಿನ ಸಂದರ್ಭಗಳಲ್ಲಿ ಈ ಎರಡಡೂ ವಿಧಾನಗಳು ಹೊರಹೊಮ್ಮುತ್ತವೆ ಮತ್ತು ಒಟ್ಟಿಗೆ ಕೆಲಸ ಮಾಡುತ್ತವೆ ಮತ್ತು ಅಂತಿಮವಾಗಿ ಒಂದಾಗುತ್ತವೆ. ಆದರೆ ನಾವು ಅತ್ಯಂತ ನೈಸರ್ಗಿಕ ಮತ್ತು ಅನುಸರಿಸಲು ಸುಲಭವೆಂದು ಭಾವಿಸುವ ಯಾವುದಾದರೊಂದರಿಂದ ಪ್ರಾರಂಭಿಸಬಹುದು.

ಅಂತಿಮವಾಗಿ, ವೈಯಕ್ತಿಕ ಪ್ರಯತ್ನಕ್ಕೆ ಅಡ್ಡಿಯಾಗುವ ಎಲ್ಲಾ ತೊಂದರೆಗಳಲ್ಲಿ, ಶಿಕ್ಷಕರ ಸಹಾಯವು ಮಧ್ಯ ಪ್ರವೇಶಿಸಬಹುದು ಮತ್ತು ಸಾಕ್ಷಾತ್ಕಾರಕ್ಕಾಗಿ ಅಥವಾ ಅಗತ್ಯವಿರುವ ತಕ್ಷಣದ ಹಂತಕ್ಕೆ ಬೇಕಾದುದನ್ನು ಒದಗಿಸಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/5–9 – ಶ್ರೀ ಅರವಿಂದರು**

ಈ ಯೋಗವು ದೈವೀ ಸತ್ಯದ ಆವಿಷ್ಕಾರ ಮತ್ತು ಸಾಕಾರಕ್ಕಾಗಿ ಜೀವನದ ಸಂಪೂರ್ಣ ಸಮರ್ಪಣೆಯನ್ನು ಬೇಡುತ್ತದೆ. ನಿಮ್ಮ ಜೀವನವನ್ನು, ಸತ್ಯದ ಹುಡುಕಾಟದ ಚಟುವಟಿಕೆಗೆ ಯಾವುದೇ ಸಂಬಂಧವಿಲ್ಲದ ದೇವ ಹಾಗೂ ಬಾಹ್ಯ ಗುರಿಯ ನಡುವೆ ವಿಭಜಿಸುವುದು ಅಸ್ವೀಕಾರಾರ್ಹ. ಆ ರೀತಿಯ ಕನಿಷ್ಠ ಸಂಗತಿಯು ಯೋಗದಲ್ಲಿ ಯಶಸ್ಸನ್ನು ಅಸಾಧ್ಯವಾಗಿಸುತ್ತದೆ. ನೀವು ನಿಮ್ಮೊಳಗೆ ಹೋಗಲೇಬೇಕು ಮತ್ತು ಆಧ್ಯಾತ್ಮಿಕ ಜೀವನಕ್ಕೆ ಸಂಪೂರ್ಣ ಸಮರ್ಪಣೆಯಲ್ಲಿ ಪ್ರವೇಶಿಸಬೇಕು. ನೀವು ಯೋಗದಲ್ಲಿ ಸಫಲರಾಗಬೇಕಾದರೆ, ಮಾನಸಿಕ ಆದ್ಯತೆಗಳಿಗೆ ಅಂಟಿಕೊಳ್ಳುವಿಕೆಯು ನಿಮ್ಮಿಂದ ದೂರವಾಗಬೇಕು, ಪ್ರಾಣಿಕ ಉದ್ದೇಶಗಳ ಮೇಲಿನ ಎಲ್ಲ ಆಗ್ರಹಗಳನ್ನು ಆಸಕ್ತಿಗಳನ್ನು ಮತ್ತು ಬಂಧನಗಳನ್ನು ದೂರವಿರಿಸಬೇಕು, ಕುಟುಂಬಕ್ಕೆ, ಸ್ನೇಹಿತರಿಗೆ ದೇಶಕ್ಕೆ ಅಂಟಿದ ಎಲ್ಲ ಮಮಕಾರವು ಮಾಯವಾಗಬೇಕು. ಹೊರಹೋಗುವ ಶಕ್ತಿ ಅಥವಾ ಕ್ರಿಯೆಯಾಗಿ ಏನೇ ಬರಬೇಕಾದರೂ, ಅದು ಒಮ್ಮೆ ಕಂಡುಹಿಡಿದ ಸತ್ಯದಿಂದ ಮುಂದುವರಿಯಬೇಕೆ ಹೊರತು ನಿಮ್ಮ ಮಾನಸಿಕ ಅಥವಾ ಪ್ರಾಣಿಕ ಉದ್ದೇಶಗಳಿಂದ ಅಲ್ಲ. ಅದು ದೈವೇಚ್ಛೇಯಿಂದ ಮುಂದುವರೆಯಬೇಕೆ ಹೊರತು ವೈಯಕ್ತಿಕ ಆಯ್ಕೆಯಿಂದ ಅಥವಾ ಅಹಂನ ಆದ್ಯತೆಗಳಿಂದ ಅಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/15 – ಶ್ರೀ ಅರವಿಂದರು**

***ಪ್ರ: ಶ್ರೀಮಾತೆಯವರೆ, ನಾನು ಏನಾಗಿದ್ದೇನೆ ಎಂಬುದನ್ನು ಹೇಳಿ.***

ಮೇಲ್ನೋಟಕ್ಕೆ, ನೀವೊಂದು ಜಾಗೃತರಾಗಲು ಪ್ರಯತ್ನಿಸುತ್ತಿರುವ ಸುಪ್ತಾವಸ್ಥೆಯ ಮಗುವಾಗಿರುವಿರಿ.

ಆಂತರಿಕವಾಗಿ, ನೀವು ದೇಹದಲ್ಲಿ ಪ್ರಕಟಗೊಳ್ಳಲು ಪ್ರಯತ್ನಿಸುತ್ತಿರುವ ಅನಂತ ಆತ್ಮವಾಗಿರುವುರು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 17/74–75 – ಶ್ರೀಮಾತೆ**

# 'ವಿಶ್ವಾತ್ಮದೊಡನೆ ಮಿಲನ' – ಶ್ರೀಮಾತೆಯ ಭರವಸೆ

**– ಅನು: ಶ್ರೀ ಕಿಶೋರಕುಮಾರ ಕಾಸಾರ, ಕಲಬುರ್ಗಿ**

ಒಂದು ವೇಳೇ ನೀವು ನಿರ್ಮಲ ಚಿತ್ತದಿಂದ ದಿವ್ಯತೆಯನ್ನು ಕುರಿತು ಪ್ರಾರ್ಥಿಸುತ್ತ, "ಓ ದಿವ್ಯೆತೆಯೇ ನನಗೆ ನೀನು ಮಾತ್ರ ಬೇಕು" ಎಂದು ಕೋರಿಕೊಂಡಿದ್ದೇ ಆದಲ್ಲಿ, ಆ ದಿವ್ಯತೆಯು ನಿಮ್ಮ ಜೀವನದ ಎಲ್ಲಾ ಸಂದರ್ಭಗಳಲ್ಲಿ ನೀವು ಪ್ರಾಮಾಣಿಕರಾಗಿರುವಂತೆ ಎಲ್ಲಾ ರೀತಿಯ ವ್ಯವಸ್ಥೆಯನ್ನು ಮಾಡುತ್ತದೆ. ಹಾಗೆಯೇ ನಿಮ್ಮ ಆಂತರ್ಯದಲ್ಲಿ ನೆಲೆಸಿದ ನಿಮ್ಮದೇ ಒಂದಂಶವು ಸದಾ ಆ ದಿವ್ಯತೆಯನ್ನು ಕುರಿತು, "ನನಗೆ ನೀನು ಮಾತ್ರ ಬೇಕು" ಎಂದು ಹೇಳುತ್ತಿರುತ್ತದೆ. ಆ ನಿಮ್ಮ ಒಂದಂಶವೇ, ಅಭೀಪ್ಸೆಯಾಗಿದೆ. ಕೆಲವರು ಸದಾ ತಮಗೆ ವಿಶಿಷ್ಟ ದ್ರವ್ಯಗಳು ದೊರೆಯಬೇಕೆಂದು ಬಯಸುತ್ತಿರುತ್ತಾರೆ ಅಲ್ಲವೇ? ಅದೇ ರೀತಿ ಅವರಿಗೆ ಅವರು ಬಯಸಿದ ಕೆಲವು ದ್ರವ್ಯಗಳು ದೊರಕಿಯೂ ಬಿಡುತ್ತವೆ. ಆದರೆ, ಇನ್ನೂ ಕೆಲವು ಸಂದರ್ಭಗಳಲ್ಲಿ ಮಾರ್ಗ ಕಂಟಕವಾದ ಒಂದು ಅದೃಶ್ಯ ಶಕ್ತಿಯು ನಿಮಗೆದುರಾಗಿ ನಿಮ್ಮನ್ನು ನಿಮ್ಮ ಅಭೀಪ್ಸೆಯ ಗುರಿಯೆಡೆಗೆ ತಲುಪುವದನ್ನು ತಡೆಯುತ್ತಿರುತ್ತದೆ. ಆಗ ದಿವ್ಯತೆಯು ಯಾವುದೋ ಒಂದು ರೂಪದಲ್ಲಿ ಬಂದು, ನೀವು ಅದರ ಕುರಿತು ಧೇನಿಸಲಿ, ಧೇನಿಸದೇ ಇರಲಿ, ಅದು ತನ್ನ ಕಾರ್ಯವನ್ನು ಮಾಡುತ್ತ, ಯಾವುದೇ ಒಂದು ಸೂಚನೆಯನ್ನೂ ಸಹ ನೀಡದೆ, ನಿಮ್ಮ ಅಭೀಪ್ಸೆಯ ದಾರಿಯಲ್ಲಿ ಮುಳುವಾಗಿರುವ ಎಲ್ಲಾ ಕಂಟಕಗಳನ್ನು ಪರಿಹರಿಸಿ ನಿಮ್ಮ ಔನತ್ಯದ ಮಾರ್ಗವನ್ನು ಮುಕ್ತವಾಗಿಸುತ್ತದೆ. ಹೀಗೆ ತಮ್ಮ ಮಾರ್ಗದಲ್ಲಿ ಬಂದ ವಿಷಮ ವೃತ್ತಗಳು ಮರೆಯಾದ ನಂತರ, ದಿವ್ಯತೆಯ ಅಸ್ತಿತ್ವದ ಅನುಭಾವವಿರದವರು ಕೇವಲ ದೂರು–ದೂಷಣೆಗಳನ್ನು ಮಾತ್ರ ನೀಡುತ್ತಾರೆ. ಅದೇ, ನೇರ ದೃಷ್ಟಿಯಿರುವ, ದಿವ್ಯತೆಯ ಕುರಿತಾಗಿ ಪ್ರಾರ್ಥಿಸುವ ಪ್ರಾಮಾಣಿಕ ವ್ಯಕ್ತಿತ್ವದವರು, "ನಾನು ಈ ಹಿಂದೆ ದಿವ್ಯತೆಯ ಕುರಿತು, 'ನನಗೆ ನೀನು ಮಾತ್ರ ಬೇಕು' ಎಂದು ಪ್ರಾರ್ಥಿಸಿದ್ದೆ, ಅದರ ಫಲವಾಗಿಯೇ ನಾನಿಂದು ನನ್ನ ಅಭೀಪ್ಸಾ ಮಾರ್ಗವನ್ನು ಮುಕ್ತವಾಗಿಸಿಕೊಂಡಿದ್ದೇನೆ." ಎಂಬುದನ್ನು ಅರಿಯುತ್ತಾರೆ. ಇದನ್ನೇ ದಿವ್ಯತೆಯ ಕೃಪೆ ಎನ್ನಬಹುದು. ಅದನ್ನು ಪಡೆಯಲು ನೀವು ಈ ಮಾರ್ಗವನ್ನೇ ಅನುಸರಿಸಿ. ದಿವ್ಯತೆಗೆ 'ನನಗೆ ನೀನು ಮಾತ್ರ ಬೇಕು' ಎನ್ನಬೇಕು. ಹಾಗೆಂದು ಇದನ್ನು ನೀವು ನಿರಂತರವಾಗಿ ಹೇಳಬೇಕೆಂದೇನಿಲ್ಲ. ಒಮ್ಮೆ ಹೇಳಿದರೂ ಸಾಕು.

ಆದರೆ ಆ ಒಂದು ಬಾರಿಯೇ ನಿರ್ಮಲ ಚಿತ್ತದಿಂದ ಹೇಳಬೇಕು. ಇದರಿಂದ ನೀವು ಹಿಡಿದ ಕಾರ್ಯಗಳನ್ನು ನೀವು ಸಾಧಿಸಬಹುದು. ಕೆಲವೊಮ್ಮೆ ಇದು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳಬಹುದು. ಆದರೆ ನೀವು ನಿಮ್ಮ ಗುರಿಯನ್ನು ತಲುಪುವದರಲ್ಲಿ ಇದು ನಿಮಗೆ ಸಹಾಯಕವಾಗೇ ಆಗುತ್ತದೆ.

ಆದರೆ ಗುರಿ ತಲುಪುವದಂತೂ ನಿಶ್ಚಿತ!

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/176–77 – ಶ್ರೀಮಾತೆ**

ನಮಗೆ ಕೆಟ್ಟದೆಂದು ತೋರಿಬರುವ ಎಲ್ಲವನ್ನೂ ನಾವು ನಮ್ಮ ದಾರಿಯಲ್ಲಿಯೇ ಬಿಟ್ಟು ಮುನ್ನಡೆಯಬೇಕು. ಹಾಗೆಯೇ, ಕೆಲವೊಮ್ಮೆ ನಮಗೆ ಒಳ್ಳೆಯದ್ದೆಂದು ತೋರುವ ಕೆಲ ಅಂಶಗಳೂ ಸಹ ನಮ್ಮ ದಾರಿಯಲ್ಲಿ ನಮಗೆದುರಾಗುತ್ತವೆ. ಹಾಗೆ ಒಳ್ಳೆಯದರ ಮುಖವಾಡವನ್ನು ಹಾಕಿಕೊಂಡ ಆ ಕೆಲವು ಕೆಟ್ಟ ಅಂಶಗಳನ್ನೂ ಸಹ ನಾವು ಹಿಂದೆ ಬಿಟ್ಟು ಮುಂದೆ ನಡೆಯಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/333–34**

**– ಶ್ರೀ ಅರವಿಂದರು**

## ಸಾಕ್ಷಾತ್ಕಾರ ಮತ್ತು ಐಕ್ಯತೆ

### ಶ್ರೀಮಾತೆಯವರ ಧ್ಯಾನ–ಪ್ರಾರ್ಥನೆಗಳು

ಇದ್ದಕ್ಕಿದ್ದಂತೆ ಮರ್ತ್ಯವನ್ನು ಮುಚ್ಚಿದ ಮಾಯೆಯ ಮುಸುಕು ಹರಿದು, ದಿಗಂತದ ದಿವ್ಯಾನುಭವವು ದೊರೆಯಿತು. ಆ ದಿವ್ಯ ದರ್ಶನದ ಸಾಕ್ಷಾತ್ಕಾರಕ್ಕೂ ಪೂರ್ವದಲ್ಲಿ ನನ್ನ ಇಡೀ ಚೇತನವು ಸಿಡಿದ ಕೃತಜ್ಞತೆಯ ಕಮಲದಂತಿರುವ ನಿನ್ನ ಪಾದಗಳಡಿ ಪವಡಿಸಿತ್ತು. ಆ ಅನುಭೂತಿಯಲ್ಲಿ ಆಳವೂ–ಅನುಪಮವೂ ಆದ ಆನಂದದ ಆವಿರ್ಭಾವಾದರೂ, ಆಂತರ್ಯದೊಳಗೆ ಶಾಂತ ಪ್ರಶಾಂತತೆಯ ಪರಿಧಿಯೊಂದು ಅನುನಯಿಸಿತ್ತು.

ಅಂದಿನಿಂದ ನನಗಿದ್ದ ಮರ್ತ್ಯದ ಮಿತಿಗಳೆಲ್ಲ ಮಾಯವಾದವು; ಸ್ಥೂಲದ ವೇದನೆ–ಸಂವೇದನೆಗಳೆಲ್ಲ ಕಳೆದುಹೋದವು, ಭಾವನೆ–ಭಾವಾವೇಶಗಳೆಲ್ಲ

ಅಳಿದುಹೋದವು, ಆಲಸ್ಯ–ಆಲೋಚನೆಗಳೆಲ್ಲ ಇಳಿದುಹೋದವು. ನನ್ನ ಆಂತರ್ಯದೊಳಗೆ ಕೇವಲ ಪ್ರೇಮ–ಪ್ರಕಾಶದಿಂದ ತುಂಬಿರುವ ಸ್ಪಷ್ಟವೂ, ಶುದ್ಧವೂ, ಶಾಂತವೂ, ವಿಶಾಲವೂ ಆದ ಅವ್ಯಕ್ತಾನುಭಾವವೊಂದು ತುಂಬಿ ತೊಟ್ಟಿಕ್ಕುತ್ತಿತ್ತು. ಈಗ ಈ ನನ್ನ ಆಂತರ್ಯವು 'ನಾನೇ' ಎಂಬುದು ಅರ್ಥವಾಯಿತು. ಈ ಮುಂಚೆ ನನ್ನಲ್ಲಿದ್ದ ಸ್ವಾರ್ಥ–ಸೀಮಿತವಾದ 'ನಾನು' ಕಳೆದುಹೋಗಿ ಅಲ್ಲಿ ದಿವ್ಯಾನುಭೂತಿಯ 'ನಾನು' ಬಂದು ನೆಲೆಸಿತ್ತು. ಇದೆಲ್ಲವೂ ಆ ದಿವ್ಯತೆಯ ದರ್ಶನದಿಂದಲೇ ಸಾಧ್ಯವಾದದ್ದು.

ಇದೆಲ್ಲವೂ ಬಲ, ಶಕ್ತಿ, ಇಚ್ಛೆ, ಅನಂತಾಮೃತ ಮತ್ತು ಅವ್ಯಕ್ತವಾದ ಕರುಣೆಯ ಮೂಲವೇ ಆಗಿದೆ.

ಆ ದಿವ್ಯಾನುಭೂತಿಯು ದೊರಕಿದ ನಂತರದಲ್ಲಿ ನನ್ನ ಭೂತ ಕಾಲದ ಆ ದಿನಗಳೆಲ್ಲ ಅಳಿದುಹೋಗಿ, ನವ್ಯ ಜೀವನದ ಕಿರಣಗಳಡಿಯಲ್ಲಿ ಹೂತುಹೋದವು. ಹಾಗೂ ಈಗ ಈ ಪುಸ್ತಕದ ಕೆಲವು ಪುಟಗಳನ್ನು ಓದುತ್ತಿದ್ದಂತೆ ನನ್ನ ಅಳಿದುಹೋದ ಭೂತದ ದಿನಗಳು ನಿಜಕ್ಕೂ ಅಳಿದುಹೋಗಿದ್ದು, ನಾನೀಗ ನವ್ಯ ಜೀವನದ ಪ್ರಕಾಶದಲ್ಲಿ ಬದುಕುತ್ತಿದ್ದೇನೆಂಬುದು ಖಚಿತವಾಗುತ್ತಿದೆ. ಓ ನನ್ನ ದಿವ್ಯ ಗುರುವೇ, ಬೆತ್ತಲಾಗಿ ಜನಿಸಿದ ನವಜಾತ ಶಿಶುವಿನ ಸರಳತೆಯೊಂದಿಗೆ ನಾನು ನಿಮ್ಮ ಔನತ್ಯದೊಂದಿಗೆ ಒಂದಾಗಿದ್ದು, ಇನ್ನು ನನಗೆ ನಿಮ್ಮ ಆ ವಿಶಾಲವಾದ ಶುದ್ಧ–ಶಾಂತ ವ್ಯಾಪ್ತಿಯೊಳಗೆ ಪ್ರವೇಶಿಸುವದೊಂದೇ ಬಾಕಿಯಿದೆ.

ಓ ದಿವ್ಯತೆಯೇ, ನನ್ನೆಲ್ಲ ಪ್ರಾರ್ಥನೆಗೆ ನೀನು ಉತ್ತರಿಸಿದ್ದೀಯ, ನಾನು ನಿನ್ನಿಂದ ಬಯಸಿದ ಎಲ್ಲವನ್ನೂ ಕರುಣಿಸಿದ್ದೀಯ; ಅಂದಿನಿಂದ ನನ್ನಲ್ಲಿದ್ದ "ನಾನು" ಎಂಬುದು ಕಳೆದುಹೋಯಿತು. ಅಲ್ಲಿ ಈಗ ಭಾವಾಧಿಕ್ಯದ ಸಾಧನವೊಂದು ನೆಲೆಸಿ ನಿನ್ನ ಸೇವೆಗಾಗಿ ನಿಯುಕ್ತವಾಗಿದೆ. ಅದೀಗ ನಿನ್ನ ಅನಂತ ಮತ್ತು ಅವಿನಾಶಿ ಕಿರಣಗಳ ಚಿತ್ತಾನುಭೂತಿಯ ಕೇಂದ್ರವಾಗಿದೆ. ನೀನು ನನ್ನ ಚೈತನ್ಯವನ್ನು ನಿನ್ನದಾಗಿಸಿಕೊಂಡಿರುವೆ; ನನ್ನ ಇಚ್ಛೆಯನ್ನು ನಿನ್ನೊಂದಿಗೆ ಸಂಯುಕ್ತಗೊಳಿಸಿರುವೆ; ನನ್ನ ಪ್ರೀತಿಯನ್ನು ನಿನ್ನೊಂದಿಗೆ ಸಮನ್ವಯಿಸಿರುವೆ; ನನ್ನ ಆಲೋಚನೆಯನ್ನು ನಿನ್ನ ಪೂರ್ಣ ಪ್ರಜ್ಞೆಯೊಡನೆ ಒಂದಾಗಿಸಿರುವೆ.

ನನ್ನ ಸ್ಥೂಲವು, ಮೌನ–ವಿಧೇಯಕವಾದ ಆರಾಧನೆಯಲ್ಲಿ ತೊಡಗಿ ನಿನ್ನಡಿಯಲ್ಲಿ ಬಾಗಿ, ನಿನ್ನ ಧೂಳಿಯನ್ನು ಹಣೆಗೆ ತಿಲಕವಾಗಿಸಿದೆ.

ಹಾಗೂ ನಿನ್ನ ಆ ಅವ್ಯಕ್ತ ಶಾಂತಿಯ ವಲಯ ವೈಭವದಲ್ಲಿ ನೀನಲ್ಲದೇ ಬೇರಾವ ಅಸ್ತಿತ್ವವೂ ಇಲ್ಲದಿರುವದನ್ನು ಕಂಡುಕೊಂಡಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/123–24 – ಶ್ರೀಮಾತೆ**

ನಮ್ಮ ಅಸ್ತಿತ್ವಕ್ಕಿರುವ ಏಕಮಾತ್ರ ಋತ ವಾಸ್ತವವೇ,
ಓ ನನ್ನ ಪ್ರೀತಿಯ ಶ್ರೇಷ್ಠ ಗುರುವೇ, ಭವ್ಯ ಬದುಕಿನ ಪ್ರವರ್ತಕನೇ,
ಪ್ರತಿಯೊಂದು ಕಣ–ಕ್ಷಣದಲ್ಲೂ, ಪ್ರತಿಯೊಂದು ಜೀವ–ಭಾವದಲ್ಲೂ
ನಿನ್ನ ಪ್ರಜ್ಞೆಯನ್ನು ಹೊರತುಪಡಿಸಿ ನನಗೆ ಬೇರೆ ಇನ್ನೇನೂ ಬೇಕಿಲ್ಲ.
ನಾನು ನಿನ್ನ ಅಂತರಾತ್ಮಾಯನದೊಡನೆ ಸಮನ್ವಯಗೊಳ್ಳದೇ
ಬದುಕಿದ್ದೇ ಆದಲ್ಲಿ ನಾನು ನಿಧಾನವಾಗಿ ದುಃಖ ಸಾಗರದಲ್ಲಿ,
ಅಂಧಕಾರದ ಅಳಿವಿನಾಗರದಲ್ಲಿ ಮುಳುಗಲಾರಂಭಿಸುತ್ತೇನೆ. ಏಕೆಂದರೆ,
ನನ್ನ ಅಸ್ತಿತ್ವಕ್ಕಿರುವ ಏಕಮಾತ್ರ ಗುರಿಯೂ–ಕಾರಣನೂ–ಬೆಂಬಲಿಗನೂ
ನೀನೇ ಆಗಿರುವೆ. ನಾನಿನ್ನೂ ರೆಕ್ಕೆಗಳ ಅರಿವಿರದ,
ಹಾರಲು ಹಿಂಜರಿಯುತ್ತಿರುವ, ಅನನುಭವಿ ಹಕ್ಕಿಯಂತಿರುವ
ನನ್ನನ್ನು ನಿನ್ನೊಂದಿಗೆ ಆ ಔನತ್ಯದ ಅಂಚನ್ನು ತಲುಪಲು
ಮೇಲೇರುವಂತೆ ಸಹಕರಿಸು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/59 (ಜನವರಿ 24, 1914)**
**– ಶ್ರೀಮಾತೆ**

1914 ರಲ್ಲಿ ಶ್ರೀಮಾತೆಯವರು ಮಾಡಿದ ಕೆಲವು ಪ್ರಾರ್ಥನೆಗಳಲ್ಲಿ ಅವರು ರೂಪಾಂತರ ಮತ್ತು ಅಭಿವ್ಯಕ್ತಿಯ ಕುರಿತು ತಿಳಿಸುತ್ತಾರೆ. ಆದರೆ ಆ ಸಮಯದಲ್ಲಿ ಅವರು ಇಲ್ಲಿ ಇರಲೇ ಇಲ್ಲ. ಆದರೂ ಸಹ ಅವರು ಈ ವಿಚಾರವಾಗಿ ಮಾತನಾಡಿದುದನ್ನು ನೋಡಿದರೆ, ಅವರಿಗೆ ಈ ವಿಚಾರಗಳು ಮೊದಲೇ ತಿಳಿದಿದ್ದವು ಎಂದು ಅರ್ಥವಲ್ಲವೇ?

ಶ್ರೀಮಾತೆಯವರು ತಮ್ಮ ಶೈಶವದಿಂದ ಹಿಡಿದು ಯೌವನಾವಸ್ಥೆಗೆ ಬರುವವರೆಗೂ ಆವರು ಸಾಧನಾ ಪ್ರವೃತ್ತರಾಗಿದ್ದು, ಆಧ್ಯಾತ್ಮಿಕವಾಗಿ ಜಾಗೃತರಾಗಿಯೇ ಇದ್ರು. ಹಾಗಾಗಿ ಅವರು ಭಾರತಕ್ಕೆ ಬರುವ ಮೊದಲೇ ಈ ಜ್ಞಾನವನ್ನು ಬೆಳೆಸಿಕೊಂಡಿದ್ದರು.

ದಿವ್ಯತೆಯು ಮರ್ತ್ಯಕ್ಕೆ ದಿವ್ಯತೆಯ ಅನುಭೂತಿಯನ್ನು ತೋರಿಸಲೋಸುಗ ತಾನೇ ಓರ್ವ ಮರ್ತ್ಯನ ರೂಪದಲ್ಲಿ ಅವತರಣಿಕೆಯನ್ನು ಮಾಡುತ್ತದೆ. ಆ ದಿವ್ಯತೆಯು ಮರ್ತ್ಯ ರೂಪದಲ್ಲಿ ಬಂದು ಇಲ್ಲಿ ದಿವ್ಯತೆಗೆ ಹೋಗುವ ಮಾರ್ಗವನ್ನು ತೋರಿಸುತ್ತದೆ ಆದರೆ ತಾನೇ ಆ ದಿವ್ಯತೆಯೆಂದು ಎಲ್ಲೂ ಪ್ರಕಟಪಡಿಸುವದಿಲ್ಲ. ಇದು ನಿರಂತರವಾಗಿ ನಡೆಯುತ್ತಿರುವ ಅಭಿವ್ಯಕ್ತಿ, ದಿವ್ಯ ಪ್ರಜ್ಞೆಯ ಅಭಿವ್ಯಕ್ತಿ. ಶ್ರೀಮಾತೆಯವರ ಬಾಲ್ಯದಿಂದಲೂ ಸಾಮಾನ್ಯ ಮಾನವರಿಗಿಂತ ಉಚ್ಚ ಮಟ್ಟದಲ್ಲಿದ್ದರೆಂದು ಹಲವರು ಅಭಿಪ್ರಾಯಪಟ್ಟಿದ್ದಾರೆ.

## ಶ್ರೀ ಅರವಿಂದರ
## ‘ಗೀತಾ ಪ್ರಬಂಧಗಳು’

**– ಅನುವಾದ: ಜಾನ್ವಿ**

### 33

### ಎರಡನೆಯ ಸರಣಿ:
### ಭಾಗ–1: ಜ್ಞಾನ, ಭಕ್ತಿ ಮತ್ತು ಕರ್ಮಗಳ ಸಮನ್ವಯ
### ಅಧ್ಯಾಯ – 1
### ದ್ವಿವಿಧ ಪ್ರಕೃತಿ (1/1)

ಗೀತೆಯ ಮೊದಲ ಆರು ಅಧ್ಯಾಯಗಳ ಒಂದು ಗುಂಪು (ಕಟ್ಟು) ಬೋಧನಾಪರವಾಗಿದ್ದು, ಗೀತೆಯ ಜ್ಞಾನ ಮತ್ತು ಅನುಸಂಧಾನದ ಪ್ರಾಥಮಿಕ ತಳಹದಿಯಾಗಿದೆ. ಉಳಿದ ಹನ್ನೆರಡು ಅಧ್ಯಾಯಗಳು ಕೂಡ ಇದೇ ರೀತಿ ಪರಸ್ಪರ ನಿಕಟ ಸಂಬಂಧವುಳ್ಳ ಎರಡು ಕಟ್ಟುಗಳಾಗಿದ್ದು, ಈ ಪ್ರಾಥಮಿಕ ತಳಹದಿಯ ಮೇಲೆ ಉಳಿದ ತತ್ತ್ವದ ಗೋಪುರವನ್ನು ಕಟ್ಟುತ್ತವೆ. ಏಳರಿಂದ ಹನ್ನೆರಡರವರೆಗಿನ ಅಧ್ಯಾಯಗಳು ವಿಶಾಲವಾದ ತಾತ್ವಿಕ ನಿರೂಪಣೆ ಮಾಡುತ್ತ ಪರಾತ್ಪರ ಸತ್ತೆಯ ಸ್ವರೂಪವನ್ನು ಹೇಳುವುದರ ಜೊತೆಗೆ ಜ್ಞಾನ ಮತ್ತು ಭಕ್ತಿಗಳನ್ನು ಸಮನ್ವಯ ಮಾಡುತ್ತವೆ. ಮೊದಲ ಕಟ್ಟು ಜ್ಞಾನ ಮತ್ತು ಕರ್ಮಗಳನ್ನು ಸಮನ್ವಯ ಮಾಡಿದ ರೀತಿಯಲ್ಲಿವೇ, ಇವು ಜ್ಞಾನ ಮತ್ತು ಭಕ್ತಿಗಳನ್ನು ಒಂದುಗೂಡಿಸುತ್ತವೆ. ಹನ್ನೊಂದನೆಯ ಅಧ್ಯಾಯದಲ್ಲಿ ಬರುವ ವಿಶ್ವರೂಪ ದರ್ಶನ ಅಥವಾ ವಿರಾಟ್ ಪುರುಷನ ವರ್ಣನೆಯು ಈ ಸಮನ್ವಯದ ಪ್ರಕ್ರಿಯೆಗೆ ಹೊಸ ಸಕ್ರಿಯ ತಿರುವು ನೀಡಿ, ಈ ಸಮನ್ವಯವನ್ನು ಜೀವನ ಮತ್ತು ಕ್ರಿಯೆಗಳಿಗೆ (ಜೀವನ ಕ್ರಿಯೆಗಳಿಗೆ) ಸಂಬಂಧ ಏರ್ಪಡಿಸುತ್ತದೆ. ಹೀಗೆ ಎಲ್ಲವನ್ನೂ ಮರಳಿ ಅರ್ಜುನನ ಮೂಲ ಪ್ರಶ್ನೆಗೇ ತಂದು ಜೋಡಿಸಿ, ಅದರ ಸುತ್ತಲೇ ವಿವರಣೆ ನೀಡುತ್ತ ಒಂದು ಚಕ್ರವನ್ನು ಪೂರ್ಣಗೊಳಿಸುತ್ತದೆ. ಆನಂತರ ಗೀತೆಯು ಪುರುಷ ಮತ್ತು ಪ್ರಕೃತಿಯರ ನಡುವೆ ಪ್ರಾತ್ಯಕ್ಷಿಕ ಭೇದ ಕಲ್ಪನೆ, ತ್ರಿಗುಣಗಳು, ಅವುಗಳ ಕಾರ್ಯ, ತ್ರಿಗುಣಗಳನ್ನು ಮೀರಿ ಹೋಗುವ ಬಗೆ, ಕೊನೆಗೆ ನಿಷ್ಕಾಮ ಕರ್ಮ ಮತ್ತು ಜ್ಞಾನ, ಹಾಗೂ ಇವೆರಡೂ ಭಕ್ತಿಯ ಜೊತೆ ಹೇಗೆ ಸಮನ್ವಯವಾಗುತ್ತವೆ ಎಂಬುದನ್ನು ವರ್ಣಿಸುತ್ತದೆ. ಅಂದರೆ, ಜ್ಞಾನ, ಭಕ್ತಿ, ಕರ್ಮ ಮೂರನ್ನೂ ಸಮನ್ವಯ ಮಾಡಿ, ಏಕ ರೂಪಗೊಳಿಸಿ, ಇದೇ

ಪರಮ ರಹಸ್ಯ, ಇದರ ಮೂಲಕ ಬ್ರಹ್ಮಾಂಡದ ಅಸ್ತಿತ್ವದ ಒಡೆಯನಾದ ಪರಮ ಪುರುಷನಿಗೆ ಸಮರ್ಪಣ ಮಾಡಿಕೊಳ್ಳುವುದನ್ನು ವಿಧಿಸುತ್ತದೆ.

ಗೀತೆಯ ಈ ಎರಡನೆಯ ಭಾಗದಲ್ಲಿ, ಇದುವರೆಗೆ ಮಾಡಿದ ಚಿಂತನೆಗಿಂತ ಹೆಚ್ಚು ಆಳವಾದ ಹಾಗೂ ಕರಾರುವಕ್ಕಾದ ವಿವರಣೆಗೆ ಬರುತ್ತೇವೆ. ಮೊದಲ ಆರು ಅಧ್ಯಾಯಗಳಲ್ಲಿ ಎಲ್ಲದರ ಅಡಿಪಾಯದಲ್ಲಿರುವ ಸತ್ಯವನ್ನು ಅರಿಯುವ ಬೀಗದ ಕೈ ಯಾವುದೆಂಬುದರ ವಿವರಣೆ ಇಲ್ಲ. ಆ ಬಗ್ಗೆ ಚಿಂತನೆ ಇಲ್ಲ. ಅನೇಕ ಅಡೆ–ತಡೆಗಳನ್ನು ಹೇಳಲಾಗಿದೆ, ಅವುಗಳ ನಿವಾರಣೋಪಾಯಗಳನ್ನು ಹೇಳಲಾಗಿದೆ. ಪ್ರಗತಿ ಎನ್ನುವುದು ಸ್ವಲ್ಪ ಶ್ರಮದಾಯಕ, ಅನೇಕ ಅಂತರ್ಗತ ತತ್ತ್ವಗಳ ಮೂಲಕ, ಅವುಗಳ ಅಳವಡಿಕೆಗಳ ಮೂಲಕ ಮುಂದುವರಿಯುವಂಥದು. ಇದುವರೆಗೆ ಏನೆಲ್ಲವನ್ನು ಸೂತ್ರ ರೂಪದಲ್ಲಿ ಹೇಳಿದೆಯೋ, ಕೇವಲ ಅನುಸೂಚಿತವಾಗಿದೆಯೋ ಅದನ್ನಿಲ್ಲಿ ಸ್ಪಷ್ಟಪಡಿಸಲಾಗಿದೆ. ಹೆಚ್ಚು ವಿವರಣೆ ಹಾಗೂ ಹೆಚ್ಚು ಸ್ಪಷ್ಟವಾದ ನಿರೂಪಣೆಯೊಂದಿಗೆ ಕ್ಲುಪ್ತವಾದ ಹಾಗೂ ನೇರವಾದ ಹೇಳಿಕೆಯನ್ನು ನೋಡುತ್ತೇವೆ. ಆದರೆ ಈ ಕ್ಲುಪ್ತವಾದ ಅಥವಾ ಸಾರಾಂಶ ರೂಪದ ಸಂಕ್ಷಿಪ್ತ ವಿವರಣೆಯ ಬಗ್ಗೆ ನಾವು ಹೆಚ್ಚು ಜಾಗರೂಕರಾಗಿರಬೇಕಾಗಿರುತ್ತದೆ. ಏಕೆಂದರೆ ಇಲ್ಲಿ ನಾವು ಅಪಾರ್ಥ ಮಾಡಿಕೊಂಡು ನಿಜ ಅರ್ಥವನ್ನು ತಿಳಿಯದೇ ಹೋಗುವ ಅಪಾಯ ಇರುತ್ತದೆ. ಇಲ್ಲಿ ನಾವು ಮನೋ ವೈಜ್ಞಾನಿಕ ಹಾಗೂ ಆಧ್ಯಾತ್ಮಿಕ ಅನುಭವದ ಸುರಕ್ಷಿತ ನೆಲೆಗಟ್ಟಿನ ಮೇಲೆ ನಿಂತಿರುವುದಿಲ್ಲ, ಬದಲಾಗಿ ಆಧ್ಯಾತ್ಮಿಕ ಹಾಗೂ ಕೆಲ ಸಲ ವಿಶ್ವೋತ್ತರ ಸತ್ಯದ ಬೌದ್ಧಿಕ ವಿವರಣೆಗಳನ್ನು ಅರ್ಥೈಸಿಕೊಳ್ಳಬೇಕಾದ ಸ್ಥಿತಿ ಇದೆ. ತತ್ತ್ವ ಶಾಸ್ತ್ರ ಅಥವಾ ತಾತ್ವಿಕ ಚಿಂತನೆಯು ಯಾವಾಗಲೂ ಈ ರೀತಿಯ ಅಪಾಯವನ್ನು ಸಾಮಾನ್ಯವಾಗಿ ಎದುರಿಸಲೇಬೇಕು. ಅಸ್ಪಷ್ಟತೆಯನ್ನು ಸಹಿಸಲೇಬೇಕು; ಏಕೆಂದರೆ ನಿಜವಾಗಿ ಅನಂತವಾಗಿದೆಯೋ ಅದನ್ನು ಮನಸ್ಸಿನ ಗ್ರಹಿಕೆಯ ವ್ಯಾಪ್ತಿಗೆ ತಂದುಕೊಡುವುದು ಸುಲಭವಲ್ಲ. ಈ ಪ್ರಯತ್ನ ಮಾಡಲೇಬೇಕು. ಆದರೆ ಈ ಪ್ರಯತ್ನ ಪೂರ್ಣ ಪ್ರಮಾಣದಲ್ಲಿ ಎಂದಿಗೂ ತೃಪ್ತಿಕರವಾಗಿರುವುದಿಲ್ಲ. ಇದೇ ಕೊನೆ, ಇದೇ ಅಂತಿಮ ಎಂದು ಎಂದಿಗೂ ಹೇಳಲು ಸಾಧ್ಯವಾಗುವುದಿಲ್ಲ. ಅತ್ಯುನ್ನತವಾದ ಸತ್ಯವನ್ನು ಜೀವಿಸಬಹುದು, ದರ್ಶಿಸಬಹುದು ಆದರೆ ಮಾತಿನಲ್ಲಿ ಪೂರ್ತಿಯಾಗಿ ಸಮರ್ಪಕವಾಗಿ ಹೇಳಲಾಗದು. ಉಪನಿಷತ್ತುಗಳ ಆಳವಾದ ಚಿಂತನೆ ಮತ್ತು ಭಾಷೆಯು ಹೆಚ್ಚಾಗಿ ಪ್ರತಿಮೆಗಳನ್ನು ಸಂಕೇತಗಳನ್ನು ಬಳಸಿಕೊಳ್ಳುತ್ತದೆ, ಅದರ ಶಬ್ದಗಳು ಅಂತಃ

ಸ್ಫೂರ್ತಿಯಿಂದ ಬಂದಿದ್ದು ತೀರ ಬೌದ್ಧಿಕವಾಗಿ, ವೈಚಾರಿಕವಾಗಿ, ಕೇವಲ ಪಂಡಿತರಿಗಾಗಿ ಅರ್ಥವಾಗಬಹುದಾದಂಥ ಪ್ರಸಂಗವನ್ನು ತೋರೆದು, ಅವುಗಳ ಅರ್ಥ, ಅಭಿಪ್ರೇತಾರ್ಥ, ಮತಿತಾರ್ಥ ಹೀಗೆ ಅಗಣಿತವಾದ ರೀತಿಯಲ್ಲಿ ಅರ್ಥೈಸಿಕೊಳ್ಳುವುದನ್ನು ಕಲಿಸುತ್ತವೆ; ಹೀಗಾಗಿ ನಿಜವಾಗಿ ಅದೊಂದೇ ಸರಿಯಾದ ರೀತಿ ಮತ್ತು ಭಾಷೆ ಎಂದು ತೋರುತ್ತದೆ. ಆದರೆ ಗೀತೆಯು ಈ ದಾರಿಯನ್ನು ಹಿಡಿಯುವುದಿಲ್ಲ. ಏಕೆಂದರೆ ಅದು ಭೌದ್ಧಿಕ ಅಡ್ಡಿಯನ್ನು ನಿವಾರಿಸಲೆಂದು ಉದ್ದೇಶಿತವಾಗಿದೆ, ತರ್ಕ, ಅವ್ಯವಸ್ಥೆ ಮುಂತಾದವುಗಳಿಂದ ಉಂಟಾಗಬಹುದಾದ ಗೊಂದಲ, ಭಾವ–ಭಾವನೆ, ಸಂವೇದನೆಗಳ ಸಂಘರ್ಷವಿರುವ ಆತಂಕಿತ ಮನಸ್ಸಿಗೆ ಪರಿಹಾರ ನೀಡುವ ಉದ್ದೇಶದಿಂದ ಉತ್ಪನ್ನವಾಗಿದೆ, ಹೀಗಾಗಿ ಅದರೊಳಗೇ ಸಂಘರ್ಷವಿದೆ, ಅಂತೆಯೇ ಅದು ನಿರ್ದಿಷ್ಟ ನಿಲುವಿಗೆ ಬಂದು ಉತ್ತರ ಕಂಡುಕೊಳ್ಳುವ ಪ್ರಯತ್ನವಾಗಿದೆ. ತರ್ಕವನ್ನು ಅದರ ಮಿತಿಯ ಅಂಚಿಗೆ ಒಯ್ದು, ಅದನ್ನು ಮೀರಲು ಕಲಿಸಬೇಕಾಗಿದೆ. ಆದರೆ ಅದು ತನ್ನದೇ ಆದ ರೀತಿಯಲ್ಲಿ ತನ್ನದೇ ಆದ ಪರಿಹಾರ ಕಂಡು ಕೊಳ್ಳುವುದು ಮುಖ್ಯ. ಮನಸ್ಸಿಗೆ ಗೊತ್ತೆ ಇರದ ತತ್ತ್ವವನ್ನು, ತಥ್ಯವನ್ನು ಹೇಳಿದರೆ, ಅದೇ ಆಧ್ಯಾತ್ಮಿಕ ಹಾಗೂ ಮನೋ ವೈಜ್ಞಾನಿಕ ಪರಿಹಾರ ಎಂದು ಸಾಧಿಸ ಹೊರಟರೆ ಮನಸ್ಸಿಗೆ ಅರ್ಥವಾಗುವುದಿಲ್ಲ, ಗ್ರಾಹ್ಯವಾಗುವುದಿಲ್ಲ. ನಾವು ಕೊಡುವ ಪರಿಹಾರ ಯಾವ ಸತ್ಯಗಳ ಮೇಲೆ ಆಧಾರಿತವಾಗಿದೆ ಎಂಬುದನ್ನು ಸಂಪೂರ್ಣವಾಗಿ ತಾರ್ಕಿಕ ಮತ್ತು ಬೌದ್ಧಿಕ ನೆಲೆಗಟ್ಟಿನ ಮೇಲೆ ಅದಕ್ಕೆ ತಿಳಿ ಹೇಳಬೇಕಾಗುತ್ತದೆ. ಅಂದಾಗ ಮಾತ್ರ ಮನಸ್ಸಿಗೆ ತೃಪ್ತಿಯಾಗುವುದು ಮತ್ತು ಆ ಪರಿಹಾರವನ್ನು ಅದು ಒಪ್ಪಿಕೊಳ್ಳುವುದು.

ಮನಸ್ಸಿಗೆ ಇದುವರೆಗೆ ನೀಡಿರುವ ಸಮರ್ಥನೀಯವಾದ ತತ್ತ್ವಗಳು ಮತ್ತು ಸಿದ್ಧಾಂತ, ನಿರ್ಣಯಗಳು ಬೇಕಾದಷ್ಟಿವೆ, ಮನಸ್ಸಿಗೆ ಅವೆಲ್ಲವೂ ಚೆನ್ನಾಗಿ ಪರಿಚಿತ ಇವೆ. ಆದರೆ ಅವೆಲ್ಲವೂ ಆರಂಭ ಮಾಡಲು ಮಾತ್ರ ಸಾಕಾಗುತ್ತವೆ. ಮೊದಲನೆಯ ಸಿದ್ಧಾಂತದ ಪ್ರಕಾರ ಆತ್ಮ ಮತ್ತು ಪ್ರತ್ಯೇಕ ಜೀವಾತ್ಮರುಗಳ ನಡುವಿನ ಭೇದವನ್ನು ಹೇಳಿದ ಕಾರಣವೇನೆಂದರೆ, ಜೀವಾತ್ಮನು ಕರ್ತೃವು, ಎಲ್ಲಿಯವರೆಗೆ ತ್ರಿಗುಣಗಳ ಕಾರ್ಯಾಚರಣೆಗೆ ಬದ್ಧನಾಗಿ, ಅವುಗಳ ಅಸ್ಥಿರ ಚಲನೆಗೆ ಸಿಲುಕಿ ಅಹಂನ ಹಿಡಿತದಲ್ಲಿದ್ದುಕೊಂಡು ಬಿಡುವುನೋ ಅಲ್ಲಿಯವರೆಗೆ ಅವನು ಶರೀರ, ಮನಸ್ಸು, ಪ್ರಾಣ, ಇಂದ್ರಿಯಗಳು ಹಾಗೂ ಭೌತಿಕ ಶರೀರದ ಮಿತಿಗೆ ಒಳಪಟ್ಟಿರುತ್ತಾನೆ, ಬದ್ಧನಾಗಿರುತ್ತಾನೆ.

ಆದ್ದರಿಂದ ಈ ವೃತ್ತದ ಪರಿಧಿಯಲ್ಲಿ ಪರಿಹಾರ ದೊರೆಯಲಾರದು. ಪರಿಹಾರ ಬೇಕು ಅನ್ನುವುದಾದರೆ, ಈ ವೃತ್ತವನ್ನು ಮೀರಿ ಮೇಲೆ ಹೋಗಬೇಕು, ಅದನ್ನು ಮೀರಿ ಬೆಳೆಯಬೇಕು. ತ್ರಿಗುಣಾತ್ಮಕ ಪ್ರಕೃತಿಯನ್ನು ಮೀರಿ ಬೆಳೆಯಬೇಕು. ಅವಿಕಾರಿಯಾದ ಪುರುಷನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು, ಅಚಲ, ನಿಶ್ಚಲ ಮೌನ, ಆತ್ಮ ಚೈತನ್ಯದಲ್ಲಿ ಏರಿ ಹೋಗಬೇಕು. ಅಂದಾಗ ಮಾತ್ರ ಸಮರ್ಪಕ ಸಮಾಧಾನ ದೊರೆಯಲು ಸಾಧ್ಯ. ಏಕೆಂದರೆ ಆಗ ಅವನು ಅಹಂನ ಕಾರ್ಯ ವ್ಯಾಪ್ತಿಯನ್ನು ಮೀರಿ ಹೋಗಿರುತ್ತಾನೆ. ಅವನಲ್ಲಿ ಆಶೆ, ಬಯಕೆಗಳಿರುವುದಿಲ್ಲ, ತೊಂದರೆಯ ಬೇರು ಕತ್ತರಿಸಿ ಹೋಗಿರುತ್ತದೆ. ಆದರೆ ಇದು ನೇರವಾಗಿ ನಿಷ್ಕ್ರಿಯತೆಯೆಡೆಗೆ ಕರೆದೊಯ್ಯುಬಹುದು. ಪ್ರಕೃತಿಯ ಆಚೆಗೆ ಏನಿದೆ, ಏನೂ ಇಲ್ಲ, ಉಪಕರಣಗಳ ಮಾತಿಲ್ಲ, ಕ್ರಿಯೆ ಇಲ್ಲ, ಕಾರಣ ಇಲ್ಲ, ಕಾರ್ಯದ ನಿರ್ದಿಷ್ಟತೆ ಇಲ್ಲ; ನಿರ್ವಿಕಾರಿಯಾದ ಆತ್ಮವು ನಿಶ್ಚಲವಾಗಿದೆ, ನಿಷ್ಕ್ರಿಯವಾಗಿದೆ, ಸರ್ವ ವಸ್ತುಗಳಿಗೂ, ಜೀವಿಗಳಿಗೂ ಸಮಾನವಾಗಿದೆ, ನಿಷ್ಪಕ್ಷಪಾತವಾಗಿದೆ, ಎಲ್ಲ ಕ್ರಿಯೆ, ಕಾರ್ಯ, ಚಲನೆ, ಘಟನೆ, ಎಲ್ಲವುಗಳಿಗೂ ನಿರಾಸಕ್ತವಾಗಿದೆ. ಅಂತೆಯೇ ಯೋಗವು ಈಶ್ವರನು ಕರ್ಮಗಳ ಪ್ರಭು, ಯಜ್ಞಾದಿಗಳ ಒಡೆಯ ಎಂದು ಹೇಳುತ್ತದೆ. ಈ ಪರಾತ್ಪರ ಸತ್ತೆಯು ವಾಸ್ತವವಾಗಿ ನಿರ್ವಿಕಾರ ಸತ್ತೆಗಿಂತ ಶ್ರೇಷ್ಠವಾಗಿದೆ ಎಂಬುದನ್ನು ಸ್ಪಷ್ಟವಾಗಿ ಹೇಳದೇ ಹೋದರೂ ಸೂಚ್ಯವಾಗಿ ಹೇಳುತ್ತದೆ. ಆ ಪರಾತ್ಪರ ಸತ್ತೆಯಲ್ಲಿಯೇ ಈ ಸೃಷ್ಟಿಯ ಬೀಗದ ಕೈ ಇದೆ ಎಂದೂ ಹೇಳುತ್ತದೆ. ಆದ್ದರಿಂದ ಪರಾತ್ಪರನೆತ್ತರಕ್ಕೆ ಬೆಳೆಯುತ್ತ ಹೋದಂತೆಲ್ಲ ಆಧ್ಯಾತ್ಮಿಕ ಸ್ವಾತಂತ್ರ್ಯ ದೊರೆಯುವುದು, ನಮ್ಮ ಕರ್ಮಗಳ ಮೇಲೆ ಪ್ರಭುತ್ವ ದೊರೆಯುವುದು, ಕರ್ಮಗಳನ್ನು ಮಾಡುತ್ತಲೇ ಕರ್ಮಗಳ (ಅವುಗಳ ಪರಿಣಾಮಗಳ) ಪ್ರಭುವಾಗಲು ಸಾಧ್ಯವಿದೆ. ಆದರೆ ಇಲ್ಲಿಯವರೆಗೆ ಆ ಪರಾತ್ಪರನೆಂದರೆ ಯಾರು ಎಂಬುದನ್ನು ಗೀತೆ ಸ್ಪಷ್ಟಪಡಿಸಿಲ್ಲ. ಆ ಸಮಯದಲ್ಲಿ ಸಾರಥಿಯಾಗಿ ಕುದುರೆಗಳ ಲಗಾಮು ಹಿಡಿದ ಅವತಾರ ಪುರುಷನೇ ಪರಾತ್ಪರ ಪ್ರಭು, ಅವನೇ ಎಲ್ಲ ಕರ್ಮಗಳ ಒಡೆಯ, ಆತ್ಮ–ಪರಮಾತ್ಮ, ಜೀವಾತ್ಮ–ಪುರುಷ ಹೀಗೆ ಏನೆಲ್ಲ ಸಾಪೇಕ್ಷ ಸಂಬಂಧಗಳಿವೆಯೋ ಅವೆಲ್ಲಕ್ಕೂ ಸಮರ್ಥನೀಯ ಸಮಾಧಾನ ಅಲ್ಲಿ ಸಿಕ್ಕುವುದು. ಪರಾತ್ಪರನ ಸಂಕಲ್ಪವು ಪ್ರಕೃತಿಯ ತ್ರಿಗುಣಗಳ ಸಂಕಲ್ಪಕ್ಕಿಂತ ಭಿನ್ನವೇ? ಹೇಗೆ ಮತ್ತು ಎಷ್ಟರ ಮಟ್ಟಿಗೆ ಭಿನ್ನ ಎಂಬುದನ್ನು ಗೀತೆಯ ಇದುವರೆಗಿನ ಅಧ್ಯಯನದಿಂದ ತಿಳಿದುಬಂದಿಲ್ಲ. ಪರಾತ್ಪರನ ಇಚ್ಛೆ ಮತ್ತು ಪ್ರಕೃತಿಯ ತ್ರಿಗುಣಗಳ ಇಚ್ಛೆ ಬೇರೆ ಬೇರೆ ಆಗಿದ್ದರೆ

ಜೀವಾತ್ಮನು ಅದನ್ನೇಕೆ ಪಾಲಿಸಬೇಕು? ತ್ರಿಗುಣಗಳ ಕಾರ್ಯಾಚರಣೆಗೆ ಅವನೇಕೆ ಬದ್ಧನಾಗಬೇಕು? ಈ ವಿಷಯವನ್ನು ಇದುವರೆಗೆ ಚರ್ಚೆ ಮಾಡಿಲ್ಲ. ಇದನ್ನು ಸ್ಪಷ್ಟವಾಗಿ ತಿಳಿದುಕೊಂಡಿಲ್ಲದೇ ಯಾವ ದೃಢ ನಿರ್ಧಾರಕ್ಕೂ ಬರಬಾರದು. ಇಲ್ಲವಾದರೆ "ಮುಕ್ತಿ", ಸ್ವಾತಂತ್ರ್ಯ ಇವುಗಳ ಪರಿಕಲ್ಪನೆಯೇ ತಪ್ಪಾಗಿ ಹೋಗುವುದು. ಅದೆಲ್ಲ ಭ್ರಮೆ, ಕೇವಲ ಭ್ರಾಮಕ ಕಲ್ಪನೆ ಅನಿಸಬಹುದು. ಸಂಕಲ್ಪವೆನ್ನುವುದು ಸತ್ತೆಯ ಅಥವಾ ಜೀವಿಯ ಕಾರ್ಯಕಾರಿ ಶಕ್ತಿಯ ಒಂದು ಅಂಶವಾಗಿದೆ ಎಂದು ತೋರುವುದು. ಅದು ಪ್ರಕೃತಿಯ ಶಕ್ತಿಯೂ ಸಕ್ರಿಯ ಬಲವೂ ಆಗಿರುವುದು. ಅಂದರೆ ಈ ತ್ರಿಗುಣಗಳಿಗಿಂತ ಉನ್ನತವಾದ ಪ್ರಕೃತಿ ಇದೆಯೇ? ಈ ಅಹಂ, ಇಚ್ಛೆ, ಮನಸ್ಸು, ಇಂದ್ರಿಯಗಳ ಅರ್ಥೈಕೆ, ತರ್ಕ ಹಾಗೂ ಪ್ರಾಣಿಕ ಸಹಜ ಪ್ರವೃತ್ತಿಗಳಿಗಿಂತ ಭಿನ್ನವಾದ ಪ್ರಾತ್ಯಕ್ಷಿಕ ಸೃಷ್ಟಿಯ ಶಕ್ತಿ, ಸಂಕಲ್ಪ ಹಾಗೂ ಕಾರ್ಯಕಾರಿ ಅಂಶ ಇದೆಯೇ?

ಆದ್ದರಿಂದ, ಈ ಅಸ್ಪಷ್ಟತೆ, ಅನಿಶ್ಚಿತತೆಯ ನಡುವೆ ನಾವು ಮಾಡಬಹುದಾದುದೇನೆಂದರೆ, ಯಾವ ಆಧಾರಗಳ ಮೇಲೆ ದೈವೀ ಕಾರ್ಯ ಸಂಪನ್ನವಾಗಬೇಕಾಗಿದೆಯೋ ಅವುಗಳ ಸಂಪೂರ್ಣ ಜ್ಞಾನವನ್ನು ನಾವು ಗಳಿಸಬೇಕು. ಅವುಗಳನ್ನು ಚೆನ್ನಾಗಿ ಅಧ್ಯಯನ ಮಾಡಬೇಕು. ಭಗವಂತನೇ ಎಲ್ಲ ಕರ್ಮಗಳ ಆಧಾರ, ಅವನ ಸತ್ತೆಯಲ್ಲಿ ಮಾತ್ರ ಕರ್ತೃವು ಜ್ಞಾನದ ಮೂಲಕ ಮೋಕ್ಷ ಪಡೆಯಬಲ್ಲ ಎಂಬುದರ ಕೂಲಂಕುಷ ಅರಿವು ಪಡೆಯಬೇಕು. ಅಂದಾಗ ಮಾತ್ರ ಸಮಗ್ರ ಜ್ಞಾನ ಸಾಧ್ಯವಾಗವುದು, ಅವನು ಮುಕ್ತನಾಗುವುನು. ಏಕೆಂದರೆ, ಆಗ ಯಾವ ಮಹಾಚೈತನ್ಯದಿಂದ ಎಲ್ಲ ಕರ್ಮಗಳು ಆರಂಭವಾಗುತ್ತವೆ ಮತ್ತು ಮಾನವನ ಮುಕ್ತಿಯಲ್ಲಿ ಯಾವೆಲ್ಲ ಅಂಶಗಳು ಭಾಗಿಯಾಗುತ್ತವೆ ಎಂಬುದು ಅರ್ಥವಾಗುತ್ತದೆ. ಈ ಜ್ಞಾನವು ನೀಡಬಹುದಾದ ಅರ್ಥೈಕೆ ಅಥವಾ ಬೆಳಕು ಗೀತೆಯ ಮೊದಲ ಖಂಡವು ಸ್ಥಾಪಿಸಿದ ಸತ್ಯಗಳನ್ನು ದೃಢಪಡಿಸುವಂತಿರಬೇಕು. ಇದು ಭಕ್ತಿಯ ಶ್ರೇಷ್ಠತೆಯನ್ನು ಸಾರಿ, ಆಧ್ಯಾತ್ಮಿಕ ಪ್ರಜ್ಞೆಯ ಎಲ್ಲ ಉದ್ದೇಶಗಳು, ಶಕ್ತಿ ಸಾಮರ್ಥ್ಯ ಮತ್ತು ಅದರ ಕ್ರಿಯೆಯ ಮೇಲೆ ಭಕ್ತಿಯ ಅಧಿಕಾರವನ್ನು ಸ್ಥಾಪಿಸಬೇಕು. ಸಕಲ ಜೀವರಾಶಿಗಳ ಪ್ರಭುವಾಗಿರುವ ಭಗವಂತನ ಬಗ್ಗೆ ಸಂಪೂರ್ಣ ಅರಿವು ಮೂಡಿಸಿ, ಜ್ಞಾನ ನೀಡಿ, ಅವನಿಗೆ, ಅವನೊಬ್ಬನಿಗೆ ಮಾತ್ರ ಜೀವಾತ್ಮನು ಸಮರ್ಪಣೆ ಮಾಡಿಕೊಳ್ಳಬೇಕು. ಅದೇ ಎಲ್ಲ ರೀತಿಯ ಭಕ್ತಿ

ಯೋಗದ ಪರಾಕಾಷ್ಠೆ ಎಂಬುದನ್ನು ಎತ್ತಿ ತೋರಿಸಬೇಕು. ಏಳನೆಯ ಅಧ್ಯಾಯದ ಆರಂಭದಲ್ಲಿ ಗೀತಾಚಾರ್ಯನು ಇದನ್ನೇ ಹೇಳುತ್ತಾನೆ. ಇದೇ ಮುಂದಿನ ಎಲ್ಲ ಅಧ್ಯಾಯಗಳಲ್ಲೂ ವಿವರವಾಗಿ, ವಿಸ್ತೃತವಾಗಿ ಚರ್ಚಿತವಾಗುತ್ತ ಹೋಗುತ್ತದೆ. ಅವನು ಹೇಳುತ್ತಾನೆ; "ನನ್ನಲ್ಲಿ ಸಂಪೂರ್ಣ ಮನಸ್ಸನ್ನು ಸ್ಥಾಪಿಸು, ನನ್ನನ್ನು ಆಶ್ರಯಿಸು, (ಜೀವಾತ್ಮನ ಸಮಸ್ತ ಪ್ರಜ್ಞೆ ಮತ್ತು ಕಾರ್ಯಗಳ ಆಧಾರ, ನಿವಾಸ ಸ್ಥಾನ ಮತ್ತು ಶರಣಾಗತಿಯ ಬಿಂದು) ಹೀಗೆ ಮಾಡುವುದರಿಂದ ನಿನಗೆ ನನ್ನ ಸಂಪೂರ್ಣ ಜ್ಞಾನವಾಗುವುದು, ನನ್ನ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳಬಲ್ಲಿ 'ಸಮಗ್ರಂ ಮಾಮ್' ಅಶೇಷತಃ ಅಂದರೆ ಏನನ್ನೂ ಬಿಡದೇ ಎಲ್ಲವನ್ನೂ ನಿನಗೆ ಹೇಳಿದ್ದೇನೆ. ಇದನ್ನು ತಿಳಿದುಕೊಂಡರೆ ಮತ್ತಿನ್ನಾವುದರ ಬಗ್ಗೆಯೂ ನೀನು ತಿಳಿದುಕೊಳ್ಳಬೇಕಾದ ಅಗತ್ಯ ಇರುವುದಿಲ್ಲ". (7/1, 2) ಇದರ ಅರ್ಥವೇನೆಂದರೆ, ವಾಸುದೇವ, ಸರ್ವಂ, ಭಗವಂತನೇ ಎಲ್ಲವೂ, ಆದ್ದರಿಂದ ಅವನ್ನು ಸಮಗ್ರವಾಗಿ, ಅಂದರೆ ಅವನ ತತ್ವ, ಶಕ್ತಿ ಎಲ್ಲವನ್ನೂ ಅರಿತುಕೊಂಡರೆ, ಸರ್ವಸ್ವವನ್ನೂ ಅರಿತಂತೆಯೇ ಸರಿ; ಕೇವಲ ಶುದ್ಧ ಆತ್ಮ ಅಂತಲ್ಲ, ಜಗತ್ತು, ಕಾರ್ಯ ಮತ್ತು ಪ್ರಕೃತಿ ಎಲ್ಲವನ್ನೂ ತಿಳಿದುಕೊಂಡಂತಾಗುವುದು. ಬೇರೆ ಏನನ್ನಾದರೂ ತಿಳಿದುಕೊಳ್ಳಬೇಕಾದ ಅವಶ್ಯಕತೆಯೂ ಇರುವುದಿಲ್ಲ, ಏಕೆಂದರೆ ಏನಿದೆಯೋ ಅದೆಲ್ಲವೂ ದೈವೀ ಅಸ್ತಿತ್ವವೇ ಆಗಿರುವುದು, ನಮ್ಮ ಮನಸ್ಸಿಗೆ ಈ ರೀತಿ ಸಮಗ್ರತೆಯನ್ನು ಗ್ರಹಿಸುವ ಶಕ್ತಿ ಇಲ್ಲ; ಅದರ ಸ್ವಭಾವ ವಿಭಜನಾತ್ಮಕವಾಗಿದೆ, ಅದು ತರ್ಕವನ್ನು ಅಲವಂಬಿಸಿದೆ, ಅಹಂನ ವಿಭಾಜಕ ತತ್ವದಿಂದ ಬಾಧಿತವಾಗಿದೆ, ಹಿಗಾಗಿ ನಮ್ಮ ಮಾನಸಿಕ ದೃಷ್ಟಿಕೋನವು ದೋಷಪೂರಿತವಾಗಿದೆ, ಅಜ್ಞಾನಮಯವಾಗಿದೆ, ನಾವು ಈ ಮಾನಸಿಕ ಮತ್ತು ಅಹಂನ ದೃಷ್ಟಿಕೋನವನ್ನು ಬಿಡಬೇಕು, ದೂರೀಕರಿಸಬೇಕು, ಎಲ್ಲವನ್ನೂ ಸಮನ್ವಯ ಮಾಡಿ ಏಕೀಕರಿಸಬಲ್ಲ ಜ್ಞಾನದತ್ತ ಹೊರಳಬೇಕು. ಈ ಜ್ಞಾನವು ಎರಡು ಆಯಾಮಗಳನ್ನು ಹೊಂದಿದೆ, ಒಂದು ಸಾರಭೂತವಾದ ಜ್ಞಾನ, ಇನ್ನೊಂದು ಸರ್ವ ಗ್ರಾಹಿಯಾದ ವಿಜ್ಞಾನ, ಅಥವಾ ಪರಮಾತ್ಮನ ನೇರವಾದ ಆಧ್ಯಾತ್ಮಿಕ ಅರಿವು ಮತ್ತು ಅವನ ಅಸ್ತಿತ್ವದ ತತ್ವಗಳ ಸರಿಯಾದ ಆಪ್ತ (ನಿಕಟ) ಜ್ಞಾನ, ಇದನ್ನೇ ಪ್ರಕೃತಿ, ಪುರುಷ ಎಂದು ಹೇಳಬಹುದು. ಈ ರೀತಿಯಾದ ಸಮಗ್ರ ಜ್ಞಾನವು ತುಂಬ ಕಠಿಣ ಮತ್ತು ಅಪರೂಪದ್ದು ಎಂದು ಗೀತೆ ಹೇಳುತ್ತದೆ, "ಸಾವಿರ ಜನರಲ್ಲಿ ಅಲ್ಲೊಬ್ಬ ಇಲ್ಲೊಬ್ಬ ಈ ಸಮಗ್ರ ಜ್ಞಾನಕ್ಕಾಗಿ ಪ್ರಯತ್ನ ಪಡುತ್ತಾರೆ. ಅವರಲ್ಲೂ ಸಹ ಅಲ್ಲೊಬ್ಬ, ಇಲ್ಲೊಬ್ಬ

ಇದನ್ನು ಅರಿಯುತ್ತಾನೆ, ನನ್ನನ್ನು ತತ್ತ್ವತಃ ಅರಿಯಲು ಸಮರ್ಥನಾಗುತ್ತಾನೆ. ನನ್ನ ಅಸ್ತಿತ್ವದ ತತ್ತ್ವಗಳು ವೇದ್ಯವಾಗುತ್ತವೆ" (7/3).

ಆರಂಭದಲ್ಲಿ ಮತ್ತು ಈ ಸಮಗ್ರ ಜ್ಞಾನಕ್ಕೆ ಅಡಿಪಾಯ ಹಾಕಲೆಂದು ಗೀತೆಯು ಆಳವಾದ ಮತ್ತು ಅತಿ ಮಹತ್ವದ ಭೇದವನ್ನು, ದ್ವಿವಿಧ ಪ್ರಕೃತಿಗಳ ನಡುವೆ, ಅಂದರೆ ಬಾಹ್ಯ ತೋರಿಕೆಯ ಪ್ರಕೃತಿ ಮತ್ತು ಆಧ್ಯಾತ್ಮಿಕ ಪ್ರಕೃತಿಗಳ ನಡುವೆ ಸ್ಪಷ್ಟವಾದ ಭೇದವನ್ನು ಎತ್ತಿ ತೋರಿಸುತ್ತದೆ. "ಭೌತಿಕ ಸೃಷ್ಟಿಯ ಮೂಲ ದ್ರವ್ಯಗಳೆಂದರೆ ಪಂಚ ಮಹಾಭೂತಗಳು; ಅವುಗಳ ಜೊತೆಗೆ ಮನಸ್ಸು, ಬುದ್ಧಿ ಮತ್ತು ಅಹಂಕಾರ ಇವು ಮೂರು ಸೇರಿ ಎಂಟು, ಇವು ನನ್ನ (ಪರಮಾತ್ಮನ) ಎಂಟು ಬಗೆಯ ವಿಭಿನ್ನ ಮೂಲ ಪ್ರಕೃತಿಗಳು. ಇವುಗಳಿಗಿಂತ ಭಿನ್ನವಾದ ನನ್ನದೇ ಆದ ಇನ್ನೊಂದು ಪ್ರಕೃತಿ – ಪರಾ ಪ್ರಕೃತಿಯೂ ಇದೆ ಎಂಬುದು ನಿನಗೆ ತಿಳಿದಿರಲಿ, ಈ ಪರಾಪ್ರಕೃತಿಯೇ ಜೀವ, ಇದೇ ಜಗದಾಧಾರ ತತ್ತ್ವ (7/4–5) ಇದರ ಮೂಲಕ ಗೀತೆಯು ತನ್ನ ಹೊಸ ಸಿದ್ಧಾಂತವನ್ನು ಮಂಡಿಸುತ್ತದೆ. ಗೀತೆಯು ಸಾಂಖ್ಯ ದರ್ಶನದ ಮೂಲಕ ಆರಂಭ ಮಾಡಿದರೂ, ಸಾಂಖ್ಯರ ಶಬ್ದಗಳನ್ನೇ ಹೇಳಿದರೂ ಅದನ್ನು ಮೀರಿ, ಸಾಂಖ್ಯದಲ್ಲಿ ವೇದಾಂತದ ಅರ್ಥವನ್ನು ತುಂಬುತ್ತದೆ. ಗೀತೆ ಹೇಳುವ "ಅಸ್ಟಧಾ ಪ್ರಕೃತಿಯು" ಸಾಂಖ್ಯರ ತತ್ತ್ವ, ಪಂಚ ಭೂತಗಳಿಂದ ನಿರ್ಮಾಣವಾದ ಜಗತ್ತು, ಜ್ಞಾನೇಂದ್ರಿಯ ಸಹಿತ ಮನಸ್ಸು, ಬುದ್ಧಿಯುಕ್ತ ಸಂಕಲ್ಪ ಮತ್ತು ಅಹಂಕಾರ, ಕರ್ಮೇಂದ್ರೀಯಗಳು ಇದು ಪ್ರಕೃತಿಯ ಘಟಕಗಳ ವರ್ಣನೆ; ಇಲ್ಲಿಗೆ ಸಾಂಖ್ಯರ ವರ್ಣನೆ ಅಥವಾ ಅವರ ದರ್ಶನ ನಿಲ್ಲುತ್ತದೆ. ಇದರಿಂದಾಗಿ ಪುರುಷ ಮತ್ತು ಪ್ರಕೃತಿಗಳ ನಡುವೆ ಅಭೇದ್ಯ ಅಂತರ ನಿರ್ಮಾಣವಾಗುತ್ತದೆ. ಅಂತೆಯೇ ಸಾಂಖ್ಯ ದರ್ಶನದಲ್ಲಿ ಪ್ರಕೃತಿ ಮತ್ತು ಪುರುಷ ಎಂದು ಎರಡು ಭೇದಗಳನ್ನು ಕಲ್ಪಿಸಲಾಗಿದೆ.

ಗೀತೆಯು ಇಷ್ಟಕ್ಕೇ ನಿಂತಿದ್ದರೆ, ಅಂದರೆ ಅಷ್ಟಧಾ ಪ್ರಕೃತಿ ಎಂದು ಹೇಳಿ ಸುಮ್ಮನಾಗಿದ್ದರೆ, ಪುನಃ ಪುರುಷ ಮತ್ತು ಪ್ರಕೃತಿಗಳ ನಡುವೆ ಅದೇ ಅಪರಿಹಾರ್ಯ ಭೇದ ಉಂಟಾಗುತ್ತಿತ್ತು. ಆಗ ವಿಶ್ವ ಪ್ರಕೃತಿಯು ತ್ರಿಗುಣಾತ್ಮಕ ಮಾಯೆಯಾಗಿ, ಪ್ರಪಂಚವೆಲ್ಲವೂ ಈ ಮಾಯೆಯ ಸೃಷ್ಟಿ, ಇದೆಲ್ಲ ಮಾಯೆ ಎಂದಾಗಿ ಬಿಡುತ್ತಿತ್ತು. ಅಂತೆಯೇ ಗೀತೆ ಇಲ್ಲಿಗೆ ನಿಂತು ಬಿಡುವುದಿಲ್ಲ. ಈ ಪ್ರಕೃತಿಗಿಂತ ಶ್ರೇಷ್ಠವಾದ "ಪರಾ ಪ್ರಕೃತಿ"ಯನ್ನದು ಹೇಳುತ್ತದೆ. "ಪರಾ ಪ್ರಕೃತಿಯೇ" ಈ ವಿಶ್ವದ ಮೂಲ. ವಿಶ್ವದ ಮೂಲ ಸೃಷ್ಟಿ ಈ ಪರಾ ಪ್ರಕೃತಿ ಅಥವಾ ಪರಾಶಕ್ತಿಯಿಂದಲೇ ಆಗಿದೆ ಎಂದು ಗೀತೆ

ಹೇಳುತ್ತದೆ. ನಿಮ್ನ ಸ್ತರದ ಅಪರಾ ಪ್ರಕೃತಿಗೂ ಈ ಪರಾ ಪ್ರಕೃತಿಯೇ ಮೂಲ. ಅಜ್ಞಾನಮಯ ಪ್ರಕೃತಿಯು ಪರಾ ಪ್ರಕೃತಿಯ ನೆರಳು ಇದ್ದ ಹಾಗೆ. ಉಚ್ಚತಮ ಸಕ್ರಿಯ ಸ್ಥಿತಿಯಲ್ಲಿ ಪುರುಷ ಮತ್ತು ಪ್ರಕೃತಿ ಒಂದೇ, ಪ್ರಕೃತಿಯು ಇಲ್ಲಿ ಕೇವಲ ಸಂಕಲ್ಪ ಶಕ್ತಿ, ಪುರುಷನ ಕ್ರಿಯಾ ಶಕ್ತಿ, ಅವನ ಕಾರ್ಯಕಾರಿ ಅಂಶ, ಪುರುಷನಿಂದ ಪ್ರಕೃತಿ ಭಿನ್ನವಲ್ಲ. ಅದು ಪುರುಷನೇ, ಪುರುಷನ ಶಕ್ತಿ ರೂಪವೇ ಆಗಿದೆ.

ಈ ಪರಾ ಪ್ರಕೃತಿ ಎಂದರೆ ವಿಶ್ವ ವ್ಯವಹಾರಗಳಲ್ಲಿ ಅಂತರ್ಯಾಮಿಯಾಗಿರುವ ಈಶ್ವರನ ಶಕ್ತಿಯ ಉಪಸ್ಥಿತ ಎಂದಷ್ಟೇ ಅರ್ಥವಲ್ಲ, ಅಷ್ಟೇ ಆಗಿದ್ದರೆ ಚರಾಚರ ಸಕಲ ವಸ್ತುಗಳಲ್ಲಿ ಉಪಸ್ಥಿತನಾಗಿರುವ, ಪುರುಷನನ್ನು ತನ್ನ ಮಡಿಲೊಳಗಿರಿಸಿಕೊಂಡು ವಿಶ್ವ ವ್ಯವಹಾರವನ್ನು ಬಲವಂತವಾಗಿ ನಡೆಸಿಕೊಂಡು ಹೋಗುವ, ಆದರೆ ತಾನು ಮಾತ್ರ ಯಾವ ಕಾರ್ಯದಲ್ಲೂ ಭಾಗವಹಿಸದೇ ನಿಷ್ಕ್ರಿಯವಾಗಿ ಇರುವ ಈಶ್ವರನ ಸಾನಿಧ್ಯ ರೂಪವಾಗಿ ಇರಬಹುದಾಗಿತ್ತು.

(ಸಶೇಷ)

# ಶಿಕ್ಷಣ ಮತ್ತು ನೀತಿ

**– ಶ್ರೀ ಅರವಿಂದರು ಮತ್ತು ಶ್ರೀಮಾತೆ**

***(ಇಲ್ಲಿ ರೂಪಿಸಲಾಗಿರುವ ಭಾಗಗಳು, ಈ ಮೊದಲು 'ಕರ್ಮಯೋಗಿನ್' ಪತ್ರಿಕೆಯಲ್ಲಿ ಪ್ರಕಟವಾಗಿವೆ. ರಾಷ್ಟ್ರೀಯ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳ ಪ್ರಸ್ತಾಪದಲ್ಲಿ, ಇಲ್ಲಿ ರೂಪಿತಗೊಂಡಿರುತ್ತವೆ. ಈ ಪರಿಚಯಾತ್ಮಕ ಪ್ರಬಂಧದ ಆಯ್ದ ಭಾಗಗಳು, ಕಲಿಸುವ ಪದ್ಧತಿಯ ಕೆಲವೊಂದು, ಸಾಮಾನ್ಯವಾಗಿ ಅನ್ವಯವಾಗುವ ಗಾಢ ತತ್ತ್ವಗಳನ್ನು ಪ್ರತಿಪಾದಿಸುತ್ತವೆ. ಈ ತತ್ವಗಳನ್ನು ಯಾವುದೇ ದೇಶದ ರಾಷ್ಟ್ರೀಯ ಶಿಕ್ಷಣಕ್ಕೆ ಅನ್ವಯಿಸಬಹುದಾಗಿದೆ.)***

ಸಾರ್ವತ್ರಿಕ ಶಿಕ್ಷಣದ ಆವಶ್ಯಕತೆ ಹಾಗೂ ಅದು ಒದಗಿಸಬಹುದಾದ ಒಳಿತು ಆಧುನಿಕ ಬೌದ್ಧಿಕತೆಯ ಸ್ಥಿರಗೊಂಡ ಒಂದು ಸಿದ್ಧಾಂತವಾಗಿದೆ. ಅದನ್ನು ಯಾವುದೇ ಮುಕ್ತ ಮನಸ್ಸು ಅಥವಾ ಎಚ್ಚೆತ್ತುಗೊಂಡ ರಾಷ್ಟ್ರೀಯ ಪ್ರಜ್ಞೆ ವಿವಾದಕ್ಕೆ ಆಸ್ಪದವಿಲ್ಲದ ವಿಷಯ ಎಂದು ಭಾವಿಸುತ್ತದೆ. ಒಟ್ಟಿನಲ್ಲಿ ವಿವಾದಕ್ಕೆ ಆಸ್ಪದ ಕೊಡದ ರೀತಿಯಲ್ಲಿ ಆ ಸೂತ್ರವಿರಲಿ ಇಲ್ಲವೆ ಬಿಡಲಿ, ಅದು ಮಾನವ ಕುಲದ ಇಂದಿನ ಅತ್ಯಗತ್ಯ ಬೌದ್ಧಿಕ ಹಾಗೂ ಪ್ರಾಣಿಕ ಆವಶ್ಯಕತೆಗೆ ಓಗೊಡುತ್ತದೆ. ಶಿಕ್ಷಣ ಎಂದರೆ ಏನು ಇಲ್ಲವೆ ವ್ಯಾವಹಾರಿಕವಾಗಿ ಅಥವಾ ಆದರ್ಶಪ್ರಾಯವಾಗಿ ಶಿಕ್ಷಣ ಹೇಗಿರಬೇಕು ಎಂಬುದನ್ನು ಕುರಿತು ತಾರ್ಕಿಕವಾದ, ಪ್ರಕಾಶಮಾನವಾದ ವಿಚಾರವೊಂದಕ್ಕೆ ಒಮ್ಮತವಾಗಲಿ ಅಥವಾ ಸಾಮಾನ್ಯವಾಗಿ ಸಿದ್ಧಿಸಿಕೊಂಡಂತಹದಾಗಲಿ ಏನೂ ಇಲ್ಲ. ಈ ಅನಿಶ್ಚಿತತೆಗೆ ನಮ್ಮ ದೇಶದಲ್ಲಿ ಸ್ವಾತಂತ್ರ್ಯಕ್ಕಾಗಿರುವ ಮನೋಭಾವ ಎಚ್ಚೆತ್ತುಕೊಂಡಿರುವುದರಿಂದ, ಒತ್ತಾಯ ಹಾಗೂ ಕೋಲಾಹಲದಿಂದ ಕೂಡಿದ ಬೇಡಿಕೆಯನ್ನು ಕೂಡಿಸಬೇಕು. ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿರುವ ಈ ಮನೋಭಾವ ಏಶಿಯಾ ಹಾಗೂ ಯುರೋಪಿನ ಇಲ್ಲವೆ ಪಾಶ್ಚಿಮಾತ್ಯರ ಪ್ರಜ್ಞೆಯೊಂದಿಗಿನ ವಿರೋಧದ ವಿಶಿಷ್ಟ ಪರಿಸ್ಥಿತಿಯಲ್ಲಿ, ಮತ್ತು ಅವು ಸೃಷ್ಟಿಸಿದ ಬಹಳ ಭಿನ್ನ ಸಂಸ್ಕೃತಿಗಳ ಮಧ್ಯದಲ್ಲಿ ಮತ್ತು ಒತ್ತಾಯದಿಂದ ಹೇರಿದ ಇಂಗ್ಲಿಷ ಹಾಗೂ ಭಾರತೀಯ ಮನಸ್ಸುಗಳ ಹಾಗೂ ಸಂಸ್ಕೃತಿಗಳು ಸಂಧಿಸುವಿಕೆಯಲ್ಲಿ ಸಿಕ್ಕಿಹಾಕಿಕೊಂಡಿದೆಯಲ್ಲದೆ ರಾಜಕೀಯ ಗುಲಾಮರಿಗೆ ಒಳಗಾಗಿರುವುದು ಶಿಕ್ಷಣದ ನಿರ್ಣಾಯಕ ಹಾಗೂ ಪರಮ ಶ್ರೇಷ್ಠ ನಿಯಂತ್ರಣ ಪರದೇಶದವರ ಕೈಗಳಲ್ಲಿ ಉಳಿದುಕೊಳ್ಳುವಂತಾಗಿದೆ. ರಾಷ್ಟ್ರೀಯ

ರೂಪದ ಶಿಕ್ಷಣ ಕುರಿತು ಸ್ಪಷ್ಟ ವಿಚಾರಗಳ ಅಭಾವದಲ್ಲಿ ನಾವು ಪ್ರವೇಶಿಸಬಹುದಾದ ವಸ್ತುಸ್ಥಿತಿಯಲ್ಲಿ ನಾವು ಈಗಾಗಲೇ ಪ್ರವೇಶಿಸಿದ ದೊಡ್ಡ ಹಾಗೂ ಕಂಗೆಡಿಸುವ ಅಸ್ತವ್ಯಸ್ತತೆಯ ವಾತಾವರಣದಲ್ಲಿ ಆ ಬಗೆಯ ಶಿಕ್ಷಣಕ್ಕಾಗಿರುವ ಬೇಡಿಕೆಯನ್ನೂ ಸೇರಿಸಬೇಕು.

ಏಕೆಂದರೆ ನಾವು, ನಿಜವಾದ ಶಿಕ್ಷಣ ಸಾಮಾನ್ಯವಾಗಿ ಹೇಗಿರುತ್ತದೆ ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಂಡಿರದಿದ್ದರೆ, ರಾಷ್ಟ್ರೀಯ ಶಿಕ್ಷಣದ ಅರ್ಥ ಏನು ಎಂಬುದನ್ನು ತಿಳಿದುಕೊಳ್ಳುವ ಸಾಧ್ಯತೆ ಇನ್ನೂ ಕಡಿಮೆ ಎಂದು ತೋರಿಬರುತ್ತದೆ. ಎಲ್ಲರೂ ಒಮ್ಮತದಿಂದ ಒಪ್ಪಿಕೊಂಡಿರುವದೇನೆಂದರೆ ಈಗ ಅಸ್ತಿತ್ವದಲ್ಲಿರುವ ಶಾಲೆಗಳಲ್ಲಿ ಹಾಗೂ ವಿಶ್ವವಿದ್ಯಾಲಯಗಳಲ್ಲಿ ನೀಡುತ್ತಿರುವ ಬೋಧನೆ ರಾಷ್ಟ್ರೀಯತೆಯ ಭಾವನೆಯನ್ನು ತೊಡೆದುಹಾಕುವಂತಹದು, ಕೀಳು ದರ್ಜೆಗಿಳಿಸುವಂತಹದು ಹಾಗೂ ಬಡವಾದದ್ದನ್ನಾಗಿ ಮಾಡುವಂತಹದು ಆಗಿದೆ, ಏಕೆಂದರೆ ಅದು ಪರ ದೇಶದವರ ಹಸ್ತಕ್ಷೇಪದಿಂದ ಕಾಂತಿಹೀನವಾಗಿದೆ, ಗುರಿಯಲ್ಲಿ, ವಿಧಾನದಲ್ಲಿ, ಮೂಲತತ್ತ್ವದಲ್ಲಿ ಹಾಗೂ ಮನೋಭಾವದಲ್ಲಿ ವಿದೇಶಿಯದ್ದಾಗಿದೆ. ಆದರೆ ಈ ಋಣಾತ್ಮಕ ಒಮ್ಮತ ನಮ್ಮನ್ನು ಬಹಳ ದೂರ ಕರೆದೊಯ್ಯದು, ತಾತ್ವಿಕವಾಗಿ ಹಾಗೂ ಆಚರಣೆಗಾಗಿ ನಾವು ಬಯಸುವುದೇನು, ಅದರ ಸ್ಥಾನದಲ್ಲಿ ಏನನ್ನಿರಿಸಬೇಕು ಎಂಬುದನ್ನು ಅದು ಹೇಳುವುದಿಲ್ಲ. 'ರಾಷ್ಟ್ರೀಯ' ಎಂಬ ವಿಶೇಷಣದಲ್ಲಿ ಬಹಳ ಒಳ್ಳೆಯದಾದದ್ದಿರಬಹುದು, ಆದರೆ ರಾಷ್ಟ್ರೀಯ ಶಬ್ದವನ್ನು ಶಾಲೆಗೆ, ಕಾಲೇಜಿಗೆ, ಶಿಕ್ಷಣ ಇಲಾಖೆಗೆ ಇಲ್ಲವೆ ಸಮಿತಿಗೆ ಸೇರಿಸಿ, ಹೆಚ್ಚಾಗಿ ನಾವು ಹೀಯಾಳಿಸುತ್ತಿರುವ ಪದ್ಧತಿಯ ಪ್ರಕಾರ ತರಬೇತಿ ಪಡೆದ ಜನರಿರುವ ನಿಯೋಗಿಯ(agency) ಹಸ್ತದಲ್ಲಿರುವುದರಿಂದ ಹಾಗೂ ದೋಷಣೆಗೆ ಒಳಪಡಸಿದ ಆ ಪದ್ಧತಿಯಲ್ಲಿ ತಾಂತ್ರಿಕತೆಯ ಬದಿಯನ್ನು ಭದ್ರಪಡಿಸಲು ಕೆಲವೊಂದು ಬದಲಾವಣೆ ಮಾಡಿ, ಅಧಿಕವಾಗಿ ಒಂದಿಷ್ಟನ್ನು ಸೇರಿಸಿ ಇಲ್ಲವೆ ಒಂದಿಷ್ಟನ್ನು ಕಳೆದು, ವಿವರಗಳಲ್ಲಿ ಹಾಗೂ ಪಠ್ಯಕ್ರಮದಲ್ಲಿ ಮಾರ್ಪಾಟು ಮಾಡಿ ಪುನಃ ರೂಪಿಸುವುದರಿಂದ ಮತ್ತು ನಾವು ಸಮಸ್ಯೆಯನ್ನು ಬಗೆ ಹರಿಸಿದೆವೆಂದು ಯೋಚಿಸುವುದರಿಂದ ಏನನ್ನೂ ನಿಜವಾಗಿ ಬದಲಾಯಿಸಿದಂತಾಗುವುದಿಲ್ಲ.

ಈ ಬಗೆಯ ಯುಕ್ತಿಯಿಂದ ಸಮಾಧಾನ ತಂದುಕೊಳ್ಳುವುದೆಂದರೆ, ನಮ್ಮ ಬೌದ್ಧಿಕತೆಯ ಗುರುತ್ವಾಕರ್ಷಣದ ಕೇಂದ್ರದ ಸುತ್ತ ಲಾಗ ಹೊಡಯುವ ಪ್ರದರ್ಶನ

ಮಾಡಿದಂತೆ ಮತ್ತು ನಾವು ಮೊದಲು ಇದ್ದ ಸ್ಥಳಕ್ಕೆ ಮರಳಿ ಬಂದು ನಿಂತ ಹಾಗೆ, ಬೇರೆ ಯಾವುದೋ ಭಿನ್ನ ದೇಶದಲ್ಲಿ ಬಂದು ಇಳಿದಿದ್ದೇವೆ ಎಂದು ಯೋಚಿಸಿದ ಹಾಗೆ – ಸ್ಪಷ್ಟವಾಗಿ ಇದು ಬಹಳ ಅಸಮಾಧಾನಕರ ಮುಂದುವರಿಕೆಯಾಗಿದೆ. ಈ ಹೊಸ ಹೆಸರನ್ನಿಟ್ಟುಕೊಂಡು ಕಾರ್ಯ ನಡೆಸುತ್ತಿರುವ ಸಂಸ್ಥೆಗಳು, ಬೇರೆ ಸಂಸ್ಥೆಗಳಿಗಿಂತ, ಹೆಚ್ಚು ಒಳ್ಳೆಯ ಶಿಕ್ಷಣವನ್ನು ಕೊಡುತ್ತಿರಬಹುದು ಇಲ್ಲವೆ ಕೊಡುತ್ತಿರಲಿಕ್ಕಿಲ್ಲ, ಆದರೆ ಅವು ಯಾವ ರೀತಿಯಲ್ಲಿ ರಾಷ್ಟ್ರೀಯವಾಗಿವೆ ಎಂಬುದು ಬಹಳ ಸ್ವ–ಸಂತೋಷದಿಂದ ಸಹಾನುಭೂತಿ ಹೊಂದಿದ ವಿಮರ್ಶಾತ್ಮಕ ಬೌದ್ಧಿಕತೆಗೆ ಒಟ್ಟಿನಲ್ಲಿ ಸ್ಪಷ್ಟವಾಗಿಲ್ಲ. ಸಮಸ್ಯೆ ನಿಜವಾಗಿಯೂ ಮಿತಿಮೀರಿ ಕಠಿಣವಾದದ್ದು ಮತ್ತು ಯಾವ ಬಗೆಯ ಯೋಚನೆಯಿಂದ, ಆಚರಣೆಯಿಂದ ಪ್ರಾರಂಭಿಸಬೇಕು ಯಾವ ತತ್ತ್ವದ ಆಧಾರದ ಮೇಲೆ ಸೃಷ್ಟಿಮಾಡಬೇಕು, ಹೊಸ ನಿರ್ಮಾಣದ ರೂಪರೇಷೆಗಾಗಿ ಯಾವ ರೀತಿಯನ್ನು ಅನುಸರಿಸಬೇಕು ಎಂಬುದನ್ನು ಶೋಧಿಸುವುದು ಸುಲಭವಾಗಿಲ್ಲ, ಪರಿಸ್ಥಿತಿಗಳು ಜಟಿಲವಾಗಿವೆ ಮತ್ತು ಸೃಷ್ಟಿಸಬೇಕಾದುದು ಸಮಗ್ರ ರೀತಿಯಲ್ಲಿ ಹೊಸದಾಗಿದೆ. ಇಂದಿನ ಒತ್ತಡದ ಬೇಡಿಕೆಗಳಿಗೆ ಮತ್ತು ಭವಿಷ್ಯತ್ಕಾಲದ ಇನ್ನೂ ಹೆಚ್ಚಿನ ಬೇಡಿಕೆಗಳಿಗೆ ಪ್ರತಿಕ್ರಯಿಸಲು ಪ್ರಾಚೀನ ಕಾಲದಲ್ಲಿದ್ದುದಕ್ಕೆ ಹಿಂತಿರುಗಿ ಹೋಗುವುದು ನಿರರ್ಥಕ ಮತ್ತು ಅಸಾಧ್ಯ, ನಿರಾಶಾಜನಕ ಹಾಗೂ ಅಸಮರ್ಪಕ ಪ್ರಯತ್ನವಾಗುವುದು, ಇನ್ನೊಂದೆಡೆಗೆ ಇಂಗ್ಲೀಷ, ಜರ್ಮನ್ ಅಥವಾ ಅಮೇರಿಕನ್ ಪದ್ಧತಿಯ ಶಾಲೆ, ವಿಶ್ವ ವಿದ್ಯಾಲಯಗಳ ಅನುಕರಣೆ ಮಾಡುವುದು ಇಲ್ಲವೆ ಭಾರತೀಯ ಬಣ್ಣದ ಮೆರಗುಕೊಟ್ಟು ಬದಲಾವಣೆ ತರುವುದು ಆಕರ್ಷಕ ಹಾಗೂ ಸುಲಭಸಾಧ್ಯ. ಅದು ಯೋಚಿಸುವ ಆವಶ್ಯಕತೆಯನ್ನು ಹಾಗೂ ಹೊಸ ಪ್ರಯೋಗ ಮಾಡುವ ಶ್ರಮವನ್ನು ಕಡಿಮೆ ಮಾಡುತ್ತದೆ. ಆದರೆ ಆ ಸಂದರ್ಭದಲ್ಲಿ ಶಿಕ್ಷಣವನ್ನು ರಾಷ್ಟ್ರೀಕರಣಗೊಳಿಸಲು, ದೊಡ್ಡ ಗಲಭೆಗೆ ಕರೆ ಕೊಡಲು ಕಾರಣ ಇರುವುದಿಲ್ಲ.

ಅವಶ್ಯಕತೆ ಇರುವುದು ನಿಯಂತ್ರಣ ಪಡೆಯುವುದರಲ್ಲಿ, ಬೋಧನೆಗಾಗಿ ಶಿಕ್ಷಣದ ಮಾಧ್ಯಮದಲ್ಲಿ ಬದಲಾವಣೆ ತರುವುದರಲ್ಲಿ, ಪಠ್ಯಕ್ರಮದ ಚೌಕಟ್ಟನ್ನು ಹೊಂದಿಸುವುದರಲ್ಲಿ ಮತ್ತು ಸ್ವಲ್ಪಮಟ್ಟಿಗೆ ವಿಷಯಗಳಲ್ಲಿ ಸಮತೋಲನ ತರುವುದರಲ್ಲಿ. ನಮ್ಮ ಮನಸ್ಸಿನಲ್ಲಿರುವುದು ಹೆಚ್ಚು ಗಾಢವಾದದ್ದು, ಶ್ರೇಷ್ಠವಾದದ್ದು ಮತ್ತು ಅನ್ವೇಷಣೆಗೆ ಕರೆ ಕೊಡುವಂತಹದು ಎಂದು ನಾನು ಭಾವಿಸಿದ್ದೇನೆ. ಅದಕ್ಕೆ ಆಕಾರ ಕೊಡುವಾಗ ಯಾವುದೇ ತೊಂದರೆ ಬರಲಿ, ಅದು ಭಾರತೀಯ ಆತ್ಮಕ್ಕೆ,

ಆವಶ್ಯಕತೆಗೆ, ಸ್ವಭಾವಕ್ಕೆ ಯೋಗ್ಯವಾದ ಶಿಕ್ಷಣವನ್ನು ನಾವು ಅರಸುತ್ತಿದ್ದೇವೆ, ಕೇವಲ ಪ್ರಾಚೀನ ಕಾಲದ್ದಾದಕ್ಕೆ ನಿಷ್ಠವಾದದ್ದಲ್ಲ, ಆದರೆ ಅಭಿವೃದ್ಧಿ ಹೊಂದುತ್ತಿರುವ ಭಾರತದ ಆತ್ಮಕ್ಕೆ, ಅದರ ಭವಿಷ್ಯತ್ತಿನ ಆವಶ್ಯಕತೆಗೆ, ಬರಲಿರುವ ಸ್ವ–ಸೃಷ್ಟಿಯ ಶ್ರೇಷ್ಠತರ ಹಾಗೂ ಸನಾತನ ಆತ್ಮಕ್ಕೆ ಯೋಗ್ಯವಾಗಿರುವುದನ್ನು ಅರಸುತ್ತಿದ್ದೇವೆ. ಇದನ್ನೇ ನಾವು ನಮ್ಮ ಮನಸ್ಸಿನಲ್ಲಿ ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ ಮತ್ತು ಅದಕ್ಕಾಗಿ ಮೂಲಭೂತ ವಿಷಯಗಳ ತಳಬುಡಗಳತ್ತ ಸಾಗಿ ಆಳವಾಗಿ ನೋಡಬೇಕಾಗುತ್ತದೆ ಮತ್ತು ನಿರ್ವಹಣೆಗಾಗಿ ಅವುಗಳನ್ನು ಮೊದಲು ಸ್ಥಿರಗೊಳಿಸಬೇಕಾಗುತ್ತದೆ. ಹಾಗಿಲ್ಲದಿದ್ದರೆ ಮಿಥ್ಯೆಯ ಹಾಗೂ ತೋರ್ಕೆಗೆ ಚೆನ್ನಾಗಿ ಕಾಣುವ ಗಟ್ಟಿಯಾಗಿರದ ಘೋಷಣೆಯೊಂದಿಗೆ ಪ್ರಾರಂಭ ಬಿಂದು ಹೊರ ಹೊರಡುವಷ್ಟು ಸುಲಭವಾದದ್ದು ಬೇರೊಂದಿಲ್ಲ, ಅಂತಹದು ನಮ್ಮನ್ನು ಸರಿಯಾದ ಮಾರ್ಗದಿಂದ ಬಹಳ ದೂರ, ಶೂನ್ಯ ಮತ್ತು ವಿಫಲತೆಗಳತ್ತ ಕೊಂಡೊಯ್ಯುತ್ತದೆ.

ಆದರೆ ಮೊದಲು ನಮ್ಮ ದಾರಿಯನ್ನು ಸುಗಮಗೊಳಿಸಿಕೊಳ್ಳೋಣ. ಇಲ್ಲವೆ ರಾಷ್ಟ್ರೀಯ ಶಿಕ್ಷಣದ ವಿಚಾರ ತೊಂದರೆ ತೆಗೆದುಕೊಳ್ಳುವುದಕ್ಕೆ ಯೋಗ್ಯವಾಗಿಲ್ಲ, ಅದರಲ್ಲಿ ಅರ್ಥವಿಲ್ಲ, ಅರ್ಥವಿರುವುದು ಸಾಧ್ಯವಿಲ್ಲ ಎಂಬ ಪ್ರಾಥಮಿಕ, ನಿರ್ವೀರ್ಯಗೊಳಿಸುವ ಆಕ್ಷೇಪಣೆಯನ್ನು ಮತ್ತು ಒಳ್ಳೆಯ ಪೌರತ್ವ ಪಡೆಯುವುದಕ್ಕಾಗಿ ಮಾತ್ರ ಅವಶ್ಯವಾಗಿರುವ ತರಬೇತಿಯ ಕ್ಷೇತ್ರದಲ್ಲಿ ರಾಷ್ಟ್ರೀಯ ಶಿಕ್ಷಣದ ಮಿಥ್ಯೆಯ ಹಾಗೂ ಸಂಕುಚಿತ ಈ ವಿಚಾರದ ಅನಧಿಕೃತ ಪ್ರವೇಶ ಅನಪೇಕ್ಷಣೀಯ ಹಾಗೂ ಲಾಭದಾಯಕವಲ್ಲದ್ದು, ಕಾಯ್ದೆ ಬದ್ಧ ಸ್ಥಾನವಿಲ್ಲದ್ದು ಎಂಬ ಆಕ್ಷೇಪಣೆಯನ್ನು ಕನಿಷ್ಠ ಪಕ್ಷ ಸರಿಯಾದ ಸ್ಥಾನ ಹಾಗೂ ಬೆಳಕಿನಲ್ಲಿ ಇರಿಸೋಣ.

ಆ ಒಂದು ಉದ್ದೇಶಕ್ಕಾಗಿ ಯಾವುದೇ ವಿಶೇಷ ಇಲ್ಲವೆ ರೂಪದ ಶಿಕ್ಷಣದ ಆವಶ್ಯಕತೆಯಿಲ್ಲ, ಏಕೆಂದರೆ ಒಳ್ಳೆಯ ಪೌರತ್ವಕ್ಕಾಗಿ ಕೊಡುವ ತರಬೇತಿ, ಅದರ ಎಲ್ಲ ಅತ್ಯಗತ್ಯ ಅಂಶಗಳಲ್ಲಿ ಎಲ್ಲ ದೇಶಗಳಲ್ಲಿ, ಉದಾಹರಣೆಗೆ ಇಂಗ್ಲಂಡ, ಜರ್ಮನಿ, ಜಪಾನ ಅಥವಾ ಭಾರತ ಹೀಗೆ ಪೌರ್ವಾತ್ಯ ಹಾಗೂ ಪಾಶ್ಚಿಮಾತ್ಯ ದೇಶಗಳಲ್ಲಿ ಒಂದೇ ಆಗಿರಬೇಕು. ಮಾನವ ಕುಲ ಹಾಗೂ ಅದರ ಆವಶ್ಯಕತೆಗಳು ಎಲ್ಲೆಡೆಯಲ್ಲೂ ಒಂದೇ ಬಗೆಯದಾಗಿರುತ್ತವೆ. ಸತ್ಯ ಹಾಗೂ ಜ್ಞಾನ ಒಂದೇ ಆಗಿರುತ್ತವೆ, ಅವುಗಳಿಗೆ ಇಂತಹದೊಂದು ದೇಶ ಎಂಬುದಿಲ್ಲ. ಶಿಕ್ಷಣ ಕೂಡ

ಸರ್ವತ್ರ ಒಂದೇ ಬಗೆಯದಾಗಿರಬೇಕು, ಅದಕ್ಕೆ ರಾಷ್ಟ್ರೀಯತೆ ಅಥವಾ ಗಡಿಗಳು ಇರಬಾರದು ಉದಾಹರಣೆಗೆ ವಿಜ್ಞಾನದಲ್ಲಿ ರಾಷ್ಟ್ರೀಯ ಶಿಕ್ಷಣ ಎಂಬುದರ ಅರ್ಥವೇನು? ಅದರರ್ಥ ನಾವು ಆಧುನಿಕ ಸತ್ಯವನ್ನು ಮತ್ತು ವಿಜ್ಞಾನದ ಆಧುನಿಕ ವಿಧಾನವನ್ನು, ಅವು ನಮಗೆ ಐರೋಪ್ಯ ದೇಶಗಳಿಂದ ಬರುತ್ತವೆಂಬ ಕಾರಣದಿಂದಾಗಿ, ಅವುಗಳನ್ನು ತಿರಸ್ಕರಿಸಬೇಕೆ? ಮತ್ತು ಅಪರಿಪೂರ್ಣ ಪ್ರಾಚೀನ ವಿಜ್ಞಾನಕ್ಕೆ ಮರಳಿ ಹೋಗಬೇಕೆ? ನ್ಯೂಟನ್, ಗ್ಯಾಲಿಲಿಯೋ ಹಾಗೂ ಅವರ ನಂತರ ಬಂದುದೆಲ್ಲವನ್ನು ದೇಶ ಬಿಟ್ಟುಹೋಗುವಂತೆ ಮಾಡಬೇಕೆ, ಕೇವಲ ಭಾಸ್ಕರ, ಆರ್ಯಭಟ್ಟ ಮತ್ತು ವರಾಹಮಿಹಿರ ಇವರು ಕಂಡುಹಿಡಿದದ್ದನ್ನಷ್ಟೆ ಉಳಿಸಿಕೊಳ್ಳಬೇಕೆ? ನಾದಿಯಾ ಪ್ರದೇಶದ ತೋಲರ (Tols) ವಿಧಾನವನ್ನು ಮರಳಿ ಆಚರಣೆಯಲ್ಲಿ ತರಬೇಕೆ? ಬಹಳ ಹೆಚ್ಚೆಂದರೆ ನಮ್ಮ ದೇಶದ ಪೂರ್ವೇತಿಹಾಸವನ್ನು ವಿಸ್ತಾರವಾಗಿ ಅಭ್ಯಾಸ ಮಾಡಬೇಕು, ಇಂಗ್ಲೀಷ ಭಾಷೆಯ ಕಲಿಕೆಯನ್ನು ಎರಡನೆ ದರ್ಜೆಗೆ ಇಳಿಸಬೇಕು ಎಂಬ ನಮ್ಮ ಬೇಡಿಕೆಗಳನ್ನು ಮುಂದಿರಿಸಬಹುದು – ಆದರೆ ಈ ಬದಲಾವಣೆಗಳ ಔಚಿತ್ಯವನ್ನು ಕುರಿತು ಎದುರಿಸಬೇಕಾದ ಸವಾಲಿರುವ ಸಾಧ್ಯತೆಯಿದೆ.

ನಾವು ಇಪ್ಪತ್ತನೆ ಶತಮಾನದಲ್ಲಿ ಜೀವಿಸುತ್ತಿದ್ದೇವೆ, ಚಂದ್ರಗುಪ್ತ, ಅಕ್ಬರ ಅವರ ಕಾಲದ ಭಾರತವನ್ನು ಪುನರುಜ್ಜೀವನಗೊಳಿಸಲಾಗದು. ಸತ್ಯ, ಜ್ಞಾನಗಳ ಮುನ್ನುಡೆಯೊಂದಿಗೆ ನಾವು ಹೆಜ್ಜೆಯಿರಿಸಬೇಕು, ನಿಜವಾದ ಪರಿಸ್ಥಿತಿಗಳಡಿಯಲ್ಲಿ ಜೀವಿಸಲು ಯೋಗ್ಯರಾಗಬೇಕು. ಆದ್ದರಿಂದ ನಮ್ಮ ಶಿಕ್ಷಣ, ರೂಪದಲ್ಲಿ ಹಾಗೂ ಮೂಲತತ್ತ್ವಗಳಲ್ಲಿ ಇಂದಿನ ಆವಶ್ಯಕತೆಗಳಿಗನುಗುಣವಾಗಿ ಜೀವನ ಹಾಗೂ ಮನೋಭಾವದಲ್ಲಿ ಆಧುನಿಕವಾಗಿರಬೇಕು. ರಾಷ್ಟ್ರೀಯ ಶಿಕ್ಷಣವು, ಮಾನವ ಪ್ರಗತಿಗೆ ಬುದ್ಧಿ ಪೂರ್ವಕವಾಗಿ ವಿರೋಧಿಯಾಗಿರುವಿಕೆ ಹಾಗೂ ವಿಮುಖಗತಿಗಳನ್ನು, ಒಮ್ಮೆ ಜೀವಂತವಿದ್ದ ಆದರೆ ಈಗ ನಿರ್ಜೀವವಾಗಿರುವ ಇಲ್ಲವೆ ಆಗುತ್ತಿರುವ ನಮ್ಮ ಸಂಸ್ಕೃತಿಯ ಚೌಕಟ್ಟಿನ ಪ್ರಾಚೀನ ಕಾಲದ ರೂಪಗಳಿಗೆ ಸಾಧನವನ್ನಾಗಿ ಮಾಡಿಕೊಂಡಾಗ ಈ ಎಲ್ಲ ಆಕ್ಷೇಪಣೆಗಳು ಯುಕ್ತವೆನಿಸುವವು. ಬೇಡಿಕೆಯ ಜೀವಂತ ಮನೋಭಾವವು ರಾಷ್ಟ್ರೀಯ ಶಿಕ್ಷಣದ ಅಂಗವೆಂದಾಗ ಭಾಸ್ಕರನ ಖಗೋಳ ಶಾಸ್ತ್ರ ಹಾಗೂ ಗಣಿತ ಶಾಸ್ತ್ರಗಳೆಡೆಗೆ ಇಲ್ಲವೆ ನಳಂದಾದ ಪದ್ಧತಿಗೆ ಮರಳಿಹೋಗುವುದನ್ನು ಅಪೇಕ್ಷಿಸುವುದಿಲ್ಲ. ಹಾಗೆ ಮಾಡಿದರೆ ಸ್ವದೇಶಿಯ 7 ಜೀವಂತ ಮನೋಭಾವ ರೈಲ್ವೆ, ಮೋಟಾರ ಇಂಜಿನ್ನುಗಳ ಎಳೆತಗಳ ಬಳಕೆಗಳನ್ನು

ಬಿಟ್ಟು ಪ್ರಾಚೀನ ಕಾಲದ ರಥ ಹಾಗೂ ಎತ್ತಿನ ಚಕ್ಕಡಿಗಳ ಬಳಕೆಗೆ ಮರಳಿ ಹೋದಂತಾಗುತ್ತದೆ. ನಿಸ್ಸಂಶಯವಾಗಿ ಅದರ ಬಗ್ಗೆ ಬಹಳಷ್ಟು ವಿಮುಖತೆಯ ಭಾವಾತಿರೇಕವಿದೆ, ಸಾಮಾನ್ಯ ಜ್ಞಾನ ಹಾಗೂ ತರ್ಕ ವಿಚಿತ್ರ ಹಿಂಸೆಗೊಳಗಾಗಿವೆ. ನಿಜವಾದ ವಿಷಯದ ಬಗ್ಗೆ ಪೂರ್ವ ಗ್ರಹವನ್ನುಂಟುಮಾಡಿ ಕಂಗೆಡಿಸುವ ಲಹರಿಗಳಿವೆ.

ಆದರೆ ಈ ಅಪ್ರಾಸಂಗಿಕ ಹಗಲುಗನಸುಗಳ ಅಂಶಗಳು ಈ ವಿಷಯಕ್ಕೆ ಹುಸಿ ಬಣ್ಣವನ್ನು ಕೊಡುತ್ತವೆ. ಜೀವಂತವಾಗಿರುವ, ಪ್ರಮುಖವಾದ ವಿವಾದಾಂಶದೊಂದಿಗೆ ನಾವು ವ್ಯವಹರಿಸಬೇಕಾಗಿದೆ ಮತ್ತು ಅಲ್ಲಿರುವ ಪ್ರಶ್ನೆ ಆಧುನಿಕತೆ ಹಾಗೂ ಪ್ರಾಚೀನತೆಗಳ ನಡುವೆ ಅಲ್ಲ, ಆದರೆ, ಆಮದು ಮಾಡಿಕೊಂಡ ನಾಗರಿಕತೆ ಮತ್ತು ಭಾರತೀಯ ಮನಸ್ಸಿನ ಶ್ರೇಷ್ಠತರ ಸಾಧ್ಯತೆಗಳ ನಡುವೆ, ವರ್ತಮಾನ ಹಾಗೂ ಭೂತ ಕಾಲಗಳ ನಡುವೆಯಲ್ಲ, ಆದರೆ ವರ್ತಮಾನ ಹಾಗೂ ಭವಿಷ್ಯತ್ಕಾಲ ಇವುಗಳ ನಡುವೆ, ಐದನೆಯ ಶತಮಾನಕ್ಕೆ ಮರಳಿಹೋಗುವುದಲ್ಲ, ಆದರೆ ಬರಲಿರುವ ಶತಮಾನಗಳ ಆರಂಭಕ್ಕೆ, ಸಾಗುವುದಾಗಿದೆ, ವಿಮುಖತೆಯಲ್ಲ, ಆದರೆ ಸದ್ಯದ ಕೃತ್ರಿಮತೆಯಿಂದ ಭಾರತ ತನ್ನದೇ ಆಂತರಿಕ ಸಂಭಾವ್ಯತೆಗಳನ್ನು ಹೊರ ತಂದು ಮುಂದುವರಿಯುವುದಾಗಿದೆ, ಇದನ್ನೇ ಭಾರತದ ಆತ್ಮ ಹಾಗೂ ಶಕ್ತಿ ಬೇಡುತ್ತಿರುವುದು. ನಿರ್ಜೀವ ಶುಷ್ಕ ಪಾಂಡಿತ್ಯದ ಉದ್ದೇಶವು ವಿಷಯವನ್ನು ಅಂದರೆ ಆ ಬಗೆಯ ಇಲ್ಲವೆ ಈ ಬಗೆಯ ಮಾಹಿತಿಯನ್ನು ಕಲಿತುಕೊಳ್ಳುವುದೇ ಇಡೀ ಅಥವಾ ಪ್ರಧಾನ ಸಂಗತಿ ಎಂದು ರಾಷ್ಟ್ರೀಯ ಶಿಕ್ಷಣದ ವಿರುದ್ಧ ಮಾಡುವ ಮೊದಲ ವಾದದೊಂದಿಗೆ ಪ್ರಾರಂಭವಾಗುತ್ತದೆ. ಆದರೆ ಬೇರೆ, ಬೇರೆ ಬಗೆಯ ಮಾಹಿತಿಯನ್ನು ಸಂಪಾದಿಸುವುದು ಶಿಕ್ಷಣದ ಅವಶ್ಯಕತೆಗಳಲ್ಲಿ ಕೇವಲ ಒಂದು ಅಂಶ ಅಷ್ಟೆ, ಅದೇ ಮುಖ್ಯವಾದ ಅಂಶವಲ್ಲ, ಶಿಕ್ಷಣದ ಪ್ರಧಾನ ಉದ್ದೇಶ ಮಾನವ ಮನಸ್ಸಿನ ಹಾಗೂ ಆತ್ಮದ ಸಾಮರ್ಥ್ಯಗಳನ್ನು ಹೆಚ್ಚಿಸುವುದಾಗಿರುತ್ತದೆ, ಅದು ರೂಪುಪಡೆಯುವುದಾಗಿರುತ್ತದೆ, ಇಲ್ಲವೆ ನಾನು ನೋಡುವ ದೃಷ್ಟಿಕೋನದಿಂದ, ಅದು ಜ್ಞಾನ ಸಂಕಲ್ಪಗಳನ್ನು ಹಾಗೂ ಜ್ಞಾನ, ಚಾರಿತ್ರ್ಯ ಹಾಗೂ ಸಂಸ್ಕೃತಿಗಳನ್ನು ಉಪಯೋಗಿಸುವ ಸಾಮರ್ಥ್ಯವಾಗಿರುತ್ತದೆ. ಅದಕ್ಕೂ ಹೆಚ್ಚಿನಲ್ಲದಿದ್ದರೂ ಕನಿಷ್ಠ ಪಕ್ಷ ಅಷ್ಟಾದರೂ ಬೇಕು.

ಈ ಭೇದವನ್ನು ಮಾಡುವುದು ಬಹಳ ದೊಡ್ಡ ಪ್ರಮಾಣದ ವ್ಯತ್ಯಾಸವನ್ನು ಮಾಡುವುದು. ನಾವು ಬೇಡುತ್ತಿರುವುದೆಲ್ಲವೂ ವಿಜ್ಞಾನ ನಮ್ಮ ವಿನಿಯೋಗಕ್ಕೆ

ಒದಗಿಸುವ ಮಾಹಿತಿಯನ್ನು ಸಂಪಾದಿಸುವುದಷ್ಟೇ ಆಗಿದ್ದರೆ ಪಾಶ್ಚಾತ್ಯ ದೇಶಗಳು ಒದಗಿಸುವ ವಿಜ್ಞಾನವನ್ನು ಅರಗಿಸಿಕೊಳ್ಳದ ರೂಪದಲ್ಲಿ ಇಡಿಯಾಗಿ ಇಲ್ಲವೆ ಬಹಳ ಕಾಳಜಿಪೂರ್ವಕ ಪ್ಯಾಕ್ ಮಾಡಿದ ತುತ್ತುಗಳಲ್ಲಿ ಸ್ವೀಕರಿಸುವುದು ಸಾಕಾಗುತ್ತದೆ ಎಂಬುದು ಸತ್ಯವಾದ ಸಂಗತಿ. ಆದರೆ ಬಹಳ ದೊಡ್ಡ ಪ್ರಶ್ನೆಯೆಂದರೆ ನಾವು ಯಾವ ವಿಜ್ಞಾನವನ್ನು ಕಲಿಯುತ್ತೇವೆ ಎಂಬುದಷ್ಟೇ ಅಲ್ಲ, ಆ ವಿಜ್ಞಾನದಿಂದ ಏನು ಮಾಡುತ್ತೇವೆ ಮತ್ತು ಹಾಗೆಯೇ ವೈಜ್ಞಾನಿಕ ಮನಸ್ಸನ್ನು ಹೊಂದಿ ಮತ್ತು ವೈಜ್ಞಾನಿಕ ಸಂಶೋಧನದ ರೂಢಿಯನ್ನು ಮರಳಿ ಪಡೆದು ಮಾನವ ಮನಸ್ಸಿನ ಉಳಿದ ಸಾಮರ್ಥ್ಯಗಳಿಗೆ ಹಾಗೂ ವೈಜ್ಞಾನಿಕ ಜ್ಞಾನಕ್ಕೆ ಹೇಗೆ ಅನ್ವಯಿಸುತ್ತೇವೆ, ಬೇರೆಯದಕ್ಕೆ ಅತಿ ನಿಕಟವಾಗಿರುವ ಮತ್ತು ಸಾಕಷ್ಟು ಪ್ರಕಾಶ ಹಾಗೂ ಸಾಮರ್ಥ್ಯ ಕೊಡುವ ನಮ್ಮ ಬುದ್ಧಿಯ ಹಾಗೂ ಸ್ವಭಾವದ ಭಾಗಗಳು ಇನ್ನೊಂದು ಜ್ಞಾನಕ್ಕೆ ಹೇಗೆ ಸಂಬಂಧ ಕಲ್ಪಿಸುತ್ತವೆ ಎಂಬುದಾಗಿದೆ – ಭಾರತೀಯ ಮಾನಸಿಕತೆ ತನ್ನದೇ ಸ್ವಭಾವದಲ್ಲಿ ಮುಕ್ತವಾಗಿ ಕಾರ್ಯ ಮಾಡುವ, ಹೊಸ ವಿಧಾನಗಳನ್ನು ಶೋಸುವ ಇಲ್ಲವೆ ಭೌತಿಕ ವಿಜ್ಞಾನದಲ್ಲಿ ಹೊಸ ತಿರುವೊಂದನ್ನು ಕೊಡುವ ಸಾಧ್ಯತೆಯ ಬಗ್ಗೆ ಇಲ್ಲಿ ಚರ್ಚಿಸುವುದಿಲ್ಲ. ಭಾರತೀಯ ಮನಸ್ಸಿನ, ಅದರ ಮನೋವೈಜ್ಞಾನಿಕ ಸಂಪ್ರದಾಯ, ಅದರ ಪೂರ್ವಜರ ಸಾಮರ್ಥ್ಯ, ತಿರುವು ಹಾಗೂ ಜ್ಞಾನ ಇವು ಸರ್ವೋತ್ಕೃಷ್ಟ ಸಾಂಸ್ಕೃತಿಕ ಅಂಶಗಳನ್ನು ಒಳತರುತ್ತವೆ. ಭಾಷೆ, ಅದು ಸಂಸ್ಕೃತವಾಗಿರಲಿ ಇಲ್ಲವೆ ಇತರ ದೇಶೀಯ ಭಾಷೆಯೇ ಆಗಿರಲಿ ಅದನ್ನು ಸ್ವಾಭಾವಿಕ ಪರಿಣಾಮಕಾರಿ ಹಾಗೂ ಉತ್ತೇಜನಕಾರಿಯೆನಿಸುವ ಯಾವುದೇ ರೀತಿಯಿಂದಾದರೂ ಅಭ್ಯಾಸ ಮಾಡಬೇಕು, ಅಲ್ಲಿ ನಾವು ಯಾವುದೇ ಭೂತ ಕಾಲದ ಅಥವಾ ವರ್ತಮಾನ ಕಾಲದ ಬೋಧನೆಯ ಪದ್ಧತಿಗೆ ಅಂಟಿಕೊಳ್ಳಬೇಕಾಗಿಲ್ಲ. ಮುಖ್ಯವಾದ ಪ್ರಶ್ನೆಯೆಂದರೆ ನಾವು ಕಲಿಯುವುದು ಹೇಗೆ ಮತ್ತು ಸಂಸ್ಕೃತ ಹಾಗೂ ದೇಶೀಯ ಭಾಷೆಗಳನ್ನು ಉಪಯೋಗಿಸುವುದು ಹೇಗೆ, ಅದರಿಂದಾಗಿ ನಮ್ಮದೇ ಸಂಸ್ಕೃತಿಯ ಹೃದಯಕ್ಕೆ ತಲುಪುವಂತಾಗಬೇಕು, ನಮ್ಮ ಪ್ರಾಚೀನ ಕಾಲದ ಇನ್ನೂ ಜೀವಂತವಿರುವ ಸಾಮರ್ಥ್ಯ ಮತ್ತು ಭವಿಷ್ಯತ್ಕಾಲದ ಇನ್ನೂ ಸೃಷ್ಟಿಯಾಗಿರದ ಸಾಮರ್ಥ್ಯ ಇವುಗಳ ನಡುವೆ ಸ್ಪಷ್ಟ ಅವಿಚ್ಛಿನ್ನತೆ ಸ್ಥಾಪಿತಗೊಳ್ಳಬೇಕು; ಮತ್ತು ಇಂಗ್ಲೀಷ ಅಥವಾ ಇನ್ನಿತರ ವಿದೇಶೀ ಭಾಷೆಯನ್ನು ಹೇಗೆ ಕಲಿತುಕೊಂಡರೆ ಅದು ಸಹಾಯಕವಾಗಿ ಬೇರೆ ರಾಷ್ಟ್ರಗಳ ಜೀವನ, ವಿಚಾರಗಳು ಹಾಗೂ ಸಂಸ್ಕೃತಿ ಇವುಗಳ ಬಗ್ಗೆ ತಿಳಿದುಕೊಳ್ಳಬಹುದು ಮತ್ತು ನಮ್ಮ

ಸುತ್ತಲಿನ ಜಗತ್ತಿನೊಂದಿಗೆ ಸರಿಯಾದ ಸಂಬಂಧ ಕಲ್ಪಿಸಿಕೊಳ್ಳಲು ಸಾಧ್ಯವಾಗುವುದು, ಇದೇ ನಿಜವಾದ ರಾಷ್ಟ್ರೀಯ ಶಿಕ್ಷಣದ ಧ್ಯೇಯ ಹಾಗೂ ತತ್ತ್ವ. ನಿಶ್ಚಿತವಾಗಿ, ಆಧುನಿಕ ಸತ್ಯವನ್ನು ಹಾಗೂ ಜ್ಞಾನವನ್ನು ಅಲಕ್ಷಿಸುವುದಲ್ಲ, ಆದರೆ ನಮ್ಮ ಸತ್ತೆಯ, ಮನಸ್ಸಿನ ಹಾಗೂ ನಮ್ಮದೇ ಮನೋಭಾವದ ಪ್ರಕಾರ ನಮ್ಮ ತಳಹದಿ ಇರುವಂತಾಗಬೇಕು.

ಬಹಿರಂಗವಾಗಿ ಮತ್ತು ಮಾತಿಲ್ಲದೆ ವ್ಯಕ್ತವಾಗುವ ಎರಡನೆ ಬಗೆಯ ವಿರೋಧವೆಂದರೆ ಆಧುನಿಕ, ಅಂದರೆ ಯುರೋಪಿನ ನಾಗರಿಕತೆಯನ್ನು ನಾವು ಪಡೆಯಬೇಕು ಮತ್ತು ಅದಕ್ಕಾಗಿ ನಾವು ಯೋಗ್ಯರಾಗಬೇಕು, ಹಾಗಾಗುವುದಾದರೆ ಮಾತ್ರ ನಾವು ಬದುಕಬಲ್ಲೆವು, ಯಶಸ್ವಿಯಾಗಬಲ್ಲೆವು ಮತ್ತು ಇದನ್ನು ಶಿಕ್ಷಣ ನಮಗಾಗಿ ಮಾಡಬೇಕು ಎಂಬುದು. ರಾಷ್ಟ್ರೀಯ ಶಿಕ್ಷಣದ ವಿಚಾರ ಈ ಭರವಸೆ ಸಾಕಾಗುವುದನ್ನು ಕುರಿತು ಸವಾಲೊಡ್ಡುತ್ತದೆ. ಯುರೋಪ ತನ್ನ ಪ್ರಾಚೀನ ಸಂಸ್ಕೃತಿಯನ್ನು ಪೌರ್ವಾತ್ಯರಿಂದ, ಇಜಿಪ್ತ, ಚಾಲ್ಡಿಯಾ, ಫೋನೇರಿಕಾ ಮತ್ತು ಭಾರತ ದೇಶಗಳಿಂದ ದೊರಕಿಸಿದ ತಳಹದಿಯ ಮೇಲೆ ನಿರ್ಮಾಣ ಮಾಡಿತು, ಆದರೆ ಅದಕ್ಕೆ ಹೊಸ ದಿಶೆಯಲ್ಲಿ ತಿರುವು ಕೊಟ್ಟಿತು, ಮತ್ತೊಂದು ಜೀವನ ವಿಚಾರವನ್ನು ಗ್ರೀಸ್ ಹಾಗೂ ರೋಮ ದೇಶಗಳ ಸ್ಥಳೀಯ ಮನೋಭಾವ, ಸ್ವಭಾವ, ಮನಸ್ಸು ಹಾಗೂ ಸಾಮಾಜಿಕ 8 ಪ್ರತಿಭೆಗಳಿಂದ ದೊರಕಿಸಿತು, ಅದನ್ನು ಕಳೆದುಕೊಂಡಿತು ಮತ್ತೆ ದೊರಕಿಸಿತು. ಹಾಗೆ ದೊರಕಿಸಿದುದರಲ್ಲಿ ಒಂದು ಭಾಗ ಅರಬರಿಂದ ಬಂದಿತ್ತು. ಅರಬರು ಅದನ್ನು ಪ್ರಾಚ್ಯ ದೇಶಗಳಿಂದ ಹಾಗೂ ಭಾರತದಿಂದ ಎರವಲಾಗಿ ಪಡೆದಿದ್ದರು. ನವ ಜಾಗೃತಿ(Renaissance)ಯಿಂದ ಬಹಳ ವಿಸ್ತಾರವಾಗಿ ಆ ಸಂಸ್ಕೃತಿ ಬೆಳೆಯಿತು. ಆದರೆ ನಂತರವೂ ಅದಕ್ಕೆ ಹೊಸ ತಿರುವು ಹಾಗೂ ದಿಸೆಯನ್ನು ಕೊಟ್ಟಿತು, ಅದು ಟ್ಯೂಟೋನಿಕ್, ಲ್ಯಾಟಿನ್, ಸೆಲ್ಟಿಕ್ ಮತ್ತು ಸ್ಲಾವ ಕುಲಗಳ ಸ್ಥಳೀಯ ಸ್ವಭಾವ, ಮನಸ್ಸು ಮತ್ತು ಸಾಮಾಜಿಕ ಪ್ರತಿಭೆಗಳಿಗೆ ಯೋಗ್ಯವಾದದ್ದಾಗಿತ್ತು. ಆ ರೀತಿಯಿಂದ ಸೃಷ್ಟಿಯಾದ ನಾಗರಿಕತೆ ಮಾನವತೆಯ ಮನಸ್ಸಿಗೆ ಬಹಳಕಾಲದಿಂದ ತನ್ನನ್ನು ಕೊನೆಯ ಮತ್ತು ಅನುಶಾಸನದ ಶಬ್ದವೆಂದು ಕೊಟ್ಟುಕೊಂಡಿದೆ. ಆದರೆ ಏಶಿಯಾದ ರಾಷ್ಟ್ರಗಳು ಅದನ್ನು ಸ್ವೀಕರಿಸಬೇಕೆಂಬ ನಿರ್ಬಂಧನೆಗೆ ಒಳಗಾಗಬೇಕಿಲ್ಲ. ತನ್ನ ಸರದಿಯಲ್ಲಿ ಯುರೋಪ ಕೊಡಬಹುದಾದ ಹೊಸತಾದ ಜ್ಞಾನ ಅಥವಾ ಕೇವಲ ವಿಚಾರಗಳನ್ನು ಕೈಗೆತ್ತಿಕೊಂಡು ಅವನ್ನೆಲ್ಲ ತಮ್ಮದೇ ಸ್ಥಳೀಯ ಸ್ವಭಾವ, ಮತ್ತು

ಮನೋಭಾವ, ಮನಸ್ಸು ಹಾಗೂ ಸಾಮಾಜಿಕ ಪ್ರತಿಭೆಗಳಿಂದ ತಮ್ಮ ಜ್ಞಾನಕ್ಕಾಗಿ, ಸಂಸ್ಕೃತಿಗಾಗಿ ಅರಗಿಸಿಕೊಂಡು, ಮತ್ತು ಅದರಿಂದ ಭವಿಷ್ಯತ್ತಿನ ಸಂಸ್ಕೃತಿಯನ್ನು ಸೃಷ್ಟಿಸಿ ಅದನ್ನು ಇನ್ನೂ ಹೆಚ್ಚು ಒಳ್ಳೆಯದನ್ನಾಗಿ ಮಾಡುವುದಾಗಿದೆ. ಪಾಶ್ಚಿಮಾತ್ಯರ ವೈಜ್ಞಾನಿಕ, ವೈಚಾರಿಕ, ಔದ್ಯೋಗಿಕ, ಕಪಟ ಪ್ರಜಾ ಪ್ರಭುತ್ವದ ನಾಗರಿಕತೆ ಈಗ ವಿಘಟನೆಯ ವಿವಿಧ ಹಂತಗಳಲ್ಲಿ ಪರಿವರ್ತನೆ ಹೊಂದುತ್ತಿದೆ ಮತ್ತು ಆ ಮುಳುಗುತ್ತಿರುವ ತಳಹದಿಯ ಮೇಲೆ ನಮ್ಮ ನಾಗರಿಕತೆಯನ್ನು ಕುರುಡಾಗಿ ನಿರ್ಮಾಣಮಾಡುವುದು ಹುಚ್ಚುತನದ ಅಸಂಬದ್ಧತೆಯಾಗುತ್ತದೆ. ಪಶ್ಚಿಮ ದೇಶಗಳಲ್ಲಿ ಕೆಂಪು ಸಂಜೆ ಕಾಣುತ್ತಿರುವ ಈ ಸಮಯದಲ್ಲಿ ಮತ್ತು ಅಲ್ಲಿಯ ಹೆಚ್ಚು ಮುಂದುವರಿದ ಮನಸ್ಸುಳ್ಳ ಜನರು ಹೊಸ ಹಾಗೂ ಹೆಚ್ಚು ಆಧ್ಯಾತ್ಮಿಕವಾದ ನಾಗರಿಕತೆಗಾಗಿ ಏಶಿಯಾದ ಪ್ರತಿಭೆಯತ್ತ ವಾಲುತ್ತಿರುವಾಗ ನಾವು ನಮ್ಮದಾದುದನ್ನು ಹಾಗೂ ನಮ್ಮ ಸಾಧ್ಯತೆಗಳನ್ನು ಕೈಬಿಟ್ಟು ಯುರೋಪದ ಕರಗಿ ಹೋಗುತ್ತಿರುವ ಹಾಗೂ ಮರಣೋನ್ಮುಖ ಭೂತ ಕಾಲದಲ್ಲಿ ನಮ್ಮ ವಿಶ್ವಾಸವನ್ನಿರಿಸುವುದು ವಿಚಿತ್ರವಾಗಿದೆ.

ಕೊನೆಯದಾಗಿ, ಆಕ್ಷೇಪಣೆ ತನ್ನ ಆಧಾರವನ್ನು ಮನುಷ್ಯನ ಮನಸ್ಸು ಎಲ್ಲೆಡೆಯಲ್ಲೂ ಒಂದೇ ರೀತಿಯದು ಆಗಿರುತ್ತದೆ ಮತ್ತು ಎಲ್ಲೆಡೆಯಲ್ಲಿ ಅದನ್ನು ಒಂದೇ ಯಂತ್ರದಲ್ಲಿ ಹಾಯ್ದುಹೋಗುವಂತೆ ಮಾಡಬಹುದು ಮತ್ತು ಆಜ್ಞೆಗನುಸಾರವಾಗಿ ಯಾವುದೇ ಬದಲಾವಣೆಯಿಲ್ಲದೆ ರಚಿಸಬಹುದು ಎಂಬ ಅನುಮಾನವಿಲ್ಲದ ವಿಚಾರದಲ್ಲಿ ಕಂಡುಕೊಂಡಿದೆ. ಅದು ಹಳೆಯ, ಸೋತುಹೋದ ತರ್ಕದ ಮೂಢ ನಂಬಿಕೆ, ಅದನ್ನು ತ್ಯಾಗ ಮಾಡುವ ಕಾಲ ಸನ್ನಿಹಿತವಾಗಿದೆ. ಏಕೆಂದರೆ ಮಾನವತೆಯ ವಿಶ್ವಂಭರ ಮನಸ್ಸು ಮತ್ತು ಆತ್ಮ, ವ್ಯಕ್ತಿಯ ಮನಸ್ಸು ಹಾಗೂ ಆತ್ಮಗಳ ಅನಂತ ವೈವಿಧ್ಯ, ಸಾಮಾನ್ಯತೆ ಹಾಗೂ ಅನನ್ಯತೆಗಳಿಂದ ಕೂಡಿಕೊಂಡಿವೆ, ದೇಶದ ಮನಸ್ಸು, ಜನರ ಆತ್ಮ ಅವೆರಡರ ನಡುವೆ ಮಧ್ಯಸ್ಥಿಕೆ ವಹಿಸುವ ಸಾಮರ್ಥ್ಯವಾಗಿದೆ. ಶಿಕ್ಷಣ, ಯಂತ್ರದಿಂದ ಜೋಡಿಸಿದ ವಸ್ತುವಿನಂತಾಗದೆ ಇರಬೇಕಾದರೆ, ನಿಜವಾದ ನಿರ್ಮಾಣ ಅಥವಾ ಮಾನವ ಸತ್ತೆಯ ಮನಸ್ಸು ಮತ್ತು ಆತ್ಮದ ಸಾಮರ್ಥ್ಯಗಳ ಜೀವಂತ ಆವಾಹನೆಯಾಗಬೇಕಾದರೆ ಅದರ ಈ ಮೂರೂ ಅಂಗಗಳನ್ನು ಗಮನದಲ್ಲಿರಿಸಿಕೊಳ್ಳಬೇಕು.

## ಶ್ರೀಮಾತೆಯವರ ಅಭಿಪ್ರಾಯಗಳು

ಜೀವನ ವಿಜ್ಞಾನ ಗುರಿಯಿಲ್ಲದ ಜೀವನ ಯಾವಾಗಲೂ ದುಃಖದಾಯಕ. ಪ್ರತಿಯೊಬ್ಬನೂ ಒಂದು ಗುರಿಯನ್ನು ಇಟ್ಟುಕೊಂಡಿರಬೇಕು. ಆದರೆ ಗುರಿಯ ಗುಣಮಟ್ಟವು ಜೀವನದ ಗುಣಮಟ್ಟದ ಮೇಲೆ ಅವಲಂಬಿಸಿರುತ್ತದೆ ಎಂಬುದನ್ನು ಮರೆಯಬಾರದು. ನಿಮ್ಮ ಗುರಿ ಉಚ್ಚವಾದದ್ದು, ವಿಸ್ತಾರವಾದದ್ದು, ಉದಾರ ಮತ್ತು ಅನಾಸಕ್ತವಾದದ್ದು ಆಗಿರಬೇಕು, ಇದು ನಿಮ್ಮ ಜೀವನ ನಿಮಗೆ ಹಾಗೂ ಇತರರಿಗೆ ಮೌಲ್ಯವುಳ್ಳದ್ದನ್ನಾಗಿ ಮಾಡುವುದು. ಆದರೆ ನಿಮ್ಮ ಆದರ್ಶವೇನೇ ಆಗಿರಲಿ, ನಿಮ್ಮಲ್ಲಿಯೆ ಪರಿಪೂರ್ಣತೆಯನ್ನು ಸಿದ್ಧಿಸಿಕೊಂಡಿರದಿದ್ದರೆ ಆ ಆದರ್ಶವನ್ನು ಪರಿಪೂರ್ಣವಾಗಿ ಸಿದ್ಧಿಸಿಕೊಳ್ಳಲಾಗುವುದಿಲ್ಲ. ಸತ್ತೆಯ ಶುದ್ಧೀಕರಣ ಹಾಗೂ ಏಕೀಕರಣ: ಪರಿಪೂರ್ಣತೆಗಾಗಿ ಕೈಕೊಳ್ಳುವ ಕಾರ್ಯದಲ್ಲಿ ಮೊದಲ ಹೆಜ್ಜೆ ನಿಮ್ಮ ಬಗ್ಗೆ, ನಿಮ್ಮ ಸತ್ತೆಯ ಭಿನ್ನ ಭಾಗಗಳ ಬಗ್ಗೆ ಹಾಗೂ ಅವುಗಳ ಚಟುವಟಿಕೆಗಳ ಬಗ್ಗೆ ಪ್ರಜ್ಞಾಪೂರ್ಣರಾಗುವುದಾಗಿದೆ. ಈ ಭಿನ್ನ ಭಾಗಗಳಲ್ಲಿ ಒಂದನ್ನು ಇನ್ನೊಂದರಿಂದ ಭಿನ್ನವಾಗಿ ಗುರುತಿಸುವುದನ್ನು ನೀವು ಕಲಿತುಕೊಳ್ಳಬೇಕು, ಅದರಿಂದಾಗಿ ನಿಮ್ಮಲ್ಲಾಗುವ ಚಲನೆಗಳ ಬಗ್ಗೆ ಸ್ಪಷ್ಟವಾಗಿ ಅರಿವುಳ್ಳವರಾಗುವಿರಿ. ಈ ಚಲನೆಗಳೆಂದರೆ ನೀವು ಕ್ರಿಯೆಯಲ್ಲಿ ತೊಡಗಿಕೊಳ್ಳುವಂತೆ ಮಾಡುವ ಅನೇಕ ಪ್ರಚೋದನೆಗಳು, ಪ್ರತಿಕ್ರಿಯೆಗಳು, ಮತ್ತು ಸಂಘರ್ಷ ಉಂಟುಮಾಡುವ ಸಂಕಲ್ಪಗಳು, ಅದು ತತ್ಪರವಾಗಿ ಕೈಕೊಳ್ಳಬೇಕಾದ ಅಭ್ಯಾಸ, ಅದಕ್ಕೆ ಹೆಚ್ಚಿನ ರೀತಿಯಲ್ಲಿ ಪಟ್ಟುಹಿಡಿಯುವಿಕೆ ಹಾಗೂ ನಿಷ್ಕಾಪಟ್ಯ ಬೇಕಾಗುತ್ತವೆ. ಏಕೆಂದರೆ ಮನುಷ್ಯನ ಸ್ವಭಾವ, ಅದರಲ್ಲೂ ವಿಶೇಷವಾಗಿ ಮಾನಸಿಕ ಸ್ವಭಾವಕ್ಕೆ ತಾನು ಯೋಚಿಸಿದ, ಭಾವನೆಗೆ ತಂದುಕೊಂಡ, ಕೈಕೊಂಡ, ಮಾತನಾಡಿದ ಎಲ್ಲದಕ್ಕೂ ಅನುಕೂಲಕರ ವಿವರಣೆಯನ್ನು ಕೊಟ್ಟುಕೊಳ್ಳುವ ಪ್ರವೃತ್ತಿಯಿರುತ್ತದೆ. ಈ ಚಲನೆಗಳನ್ನು ಲಕ್ಷ್ಯಗೊಟ್ಟು ಅವಲೋಕಿಸುವುದರ ಮೂಲಕ, ಅವುಗಳನ್ನು ನಮ್ಮ ಅತ್ಯುಚ್ಚ ಆದರ್ಶದ ನ್ಯಾಯಸ್ಥಾನದ ಮುಂದೆ ತರುವುದರ ಮೂಲಕ ಅದರ ತೀರ್ಮಾನಕ್ಕೆ ವಿಧೇಯವಾಗುವ ನಿಷ್ಕಪಟ ಸಂಕಲ್ಪವನ್ನು ಹೊಂದಿರುವುದರ ಮೂಲಕ ನಾವು ನಮ್ಮಲ್ಲಿ ತಪ್ಪು ಮಾಡದ ವಿವೇಚನಾ ಶಕ್ತಿಯನ್ನು ರೂಪಿಸಿಕೊಳ್ಳುವ ಭರವಸೆ ತಾಳಬಹುದು. ಏಕೆಂದರೆ ನಾವು ನಿಜವಾಗಿ ಪ್ರಗತಿ ಸಾಧಿಸುವುದನ್ನು, ಸತ್ಯ ತಿಳಿದುಕೊಳ್ಳುವ ಕ್ಷಮತೆಯನ್ನು ದೊರಕಿಸಲು ಬಯಸಿದರೆ, ಎಂದರೆ ನಮ್ಮನ್ನು ಏತಕ್ಕಾಗಿ ಸೃಷ್ಟಿಸಲಾಗಿದೆ, ಪೃಥ್ವಿಯ ಮೇಲೆ ನಮ್ಮ ಮಣಿಹ ಏನಿದೆ ಎಂಬುದನ್ನು

ತಿಳಿದುಕೊಳ್ಳಲು ಬಯಸಿದರೆ, ಆಗ ನಾವು ಕ್ರಮಬದ್ಧ ಹಾಗೂ ಸತತ ಕೈಕೊಳ್ಳುವ ರೀತಿಯಲ್ಲಿ ನಮ್ಮ ಅಸ್ತಿತ್ವದ ಸತ್ಯವನ್ನು ವಿರೋಧಿಸುವುದೆಲ್ಲವನ್ನು ನಿರಾಕರಿಸಬೇಕು ಇಲ್ಲವೆ ಅದರ ನಿರ್ಮೂಲನ ಮಾಡಬೇಕು. ಈ ರೀತಿಯಲ್ಲಿ, ಸ್ವಲ್ಪ ಸ್ವಲ್ಪವಾಗಿ ನಮ್ಮ ಸತ್ತೆಯ ಎಲ್ಲ ಭಾಗಗಳು, ಎಲ್ಲ ಅಂಶಗಳು ಸಾಮರಸ್ಯದಿಂದ ಕೂಡಿಕೊಂಡು ಏಕವಾಗಿ ಚೈತ್ಯ ಸತ್ತೆಯ ಸುತ್ತ ಸಂಘಟಿತವಾಗಬಹುದು. ಏಕತ್ರಗೊಳಿಸುವ ಈ ಕಾರ್ಯ ಪರಿಪೂರ್ಣತೆಯ ಒಂದು ಮಟ್ಟ ತಲುಪಲು ಬಹಳ ಸಮಯ ಬೇಕಾಗುತ್ತದೆ. ಆದ್ದರಿಂದ ಅದನ್ನು ಸಿದ್ಧಿಸಿಕೊಳ್ಳಲು ಸ್ಥೈರ್ಯ ಮತ್ತು ತಾಳ್ಮೆ, ನಮ್ಮ ಪ್ರಯತ್ನದ ಯಶಸ್ಸಿಗೆ ಅವಶ್ಯವಿದ್ದಷ್ಟು ಕಾಲ ನಮ್ಮ ಜೀವಿತ ಕಾಲವನ್ನು ಮುಂದುವರಿಸಿಕೊಂಡು ಹೋಗುವ ನಿರ್ಧಾರ ಇವುಗಳೊಂದಿಗೆ ನಾವು ಸುಸಜ್ಜಿತರಾಗಿರಬೇಕು. ಬಾಹ್ಯ ಸತ್ತೆಯ ಪರಿಪೂರ್ಣತೆ ಶುದ್ಧೀಕರಣದ ಹಾಗೂ ಏಕೀಕರಣದ ಈ ಶ್ರಮವನ್ನು ಬೆಂಬತ್ತಿರುವಾಗ ಅದೇ ವೇಳೆಗೆ ನಿಮ್ಮ ಸತ್ತೆಯ ಬಾಹ್ಯ ಮತ್ತು ಉಪಕರಣ ರೂಪದ ಭಾಗವನ್ನು ಪರಿಪೂರ್ಣಗೊಳಿಸುವುದಕ್ಕಾಗಿ ಕೂಡ ಬಹಳ ಕಾಳಜಿ ವಹಿಸಬೇಕು. ಉಚ್ಚತರ ಸತ್ಯ ಪ್ರಕಟವಾದಾಗ ಅದು ನಿಮ್ಮಲ್ಲಿ ಸಾಕಷ್ಟು ನಯೋಪಾಯದ, ಶ್ರೀಮಂತ ಮನಸ್ಸನ್ನು ಕಂಡುಕೊಳ್ಳಬೇಕು, ಅದರಿಂದಾಗಿ ತನ್ನನ್ನು ಅಭಿವ್ಯಕ್ತಗೊಳಿಸಲು ಅರಸುತ್ತಿರುವ ವಿಚಾರಕ್ಕೆ ತನ್ನ ಶಕ್ತಿಯನ್ನು ಮತ್ತು ಸ್ಪಷ್ಟತೆಯನ್ನು ಉಳಿಸಿಕೊಳ್ಳುವ ರೂಪವನ್ನು ಕೊಡಲು ಸಾಧ್ಯವಾಗುತ್ತದೆ. ಮತ್ತೆ ಈ ಯೋಚನೆ ಶಬ್ದಗಳ ಉಡುಗೆ ತೊಟ್ಟುಕೊಳ್ಳಬೇಕು, ಬಯಸಿದಾಗ ಅದು ನಿಮ್ಮಲ್ಲಿ ಅಭಿವ್ಯಕ್ತಿಯ ಸಾಕಷ್ಟು ಸಾಮರ್ಥ್ಯ ಕಂಡುಕೊಳ್ಳಬೇಕು, ಅದರಿಂದಾಗಿ ಶಬ್ದಗಳು ಯೋಚನೆಯನ್ನು ತೆರೆದು ತೋರಿಸುತ್ತವೆ, ವಿರೂಪಗೊಳಿಸುವುದಿಲ್ಲ. ನೀವು ಸತ್ಯಕ್ಕೆ ಮೂರ್ತರೂಪ ಕೊಡುವ ಸೂತ್ರ ನಿಮ್ಮ ಎಲ್ಲ ಭಾವನೆಗಳಲ್ಲಿ, ಸಂಕಲ್ಪದ ಎಲ್ಲ ಕ್ರಿಯೆಯಲ್ಲಿ, ನಿಮ್ಮ ಎಲ್ಲ ಕರ್ಮಗಳಲ್ಲಿ ನಿಮ್ಮ ಸತ್ತೆಯ ಎಲ್ಲ ಚಲನೆಗಳಲ್ಲಿ ಪ್ರಕಟವಾಗಬೇಕು. ಕೊನೆಯದಾಗಿ ಈ ಚಲನೆಗಳೇ ಸ್ವತಃ ಸತತ ಪ್ರಯತ್ನ ಕೈಕೊಳ್ಳುವುದರ ಮೂಲಕ ತಮ್ಮ ಅತ್ಯುಚ್ಚ ಪರಿಪೂರ್ಣತೆಯನ್ನು ಸಿದ್ಧಿಸಿಕೊಳ್ಳಬೇಕು.

ನಾಲ್ಕು ಬಗೆಯ ಶಿಸ್ತುಪಾಲನೆಯನ್ನು ಅನುಸರಿಸುವುದರ ಮೂಲಕ ಇದೆಲ್ಲವನ್ನು ಸಿದ್ಧಿಸಿಕೊಳ್ಳಬಹುದು. ಆ ಶಿಸ್ತುಪಾಲನೆಯ ಸಾಧಾರಣ ರೂಪು ರೇಷೆಗಳನ್ನು ಇಲ್ಲಿ ಕೊಡಲಾಗಿದೆ. ಶಿಸ್ತುಪಾಲನೆಯ ನಾಲ್ಕು ಮುಖಗಳಲ್ಲಿ ಒಂದು ಇನ್ನೊಂದರಿಂದ ಪ್ರತ್ಯೇಕವಾಗಿಲ್ಲ, ಅವುಗಳನ್ನು ಏಕಕಾಲಕ್ಕೆ ಅನುಸರಿಸಬಹುದು,

ಇದು ನಿಜವಾಗಿ ಹೆಚ್ಚು ಒಳ್ಳೆಯದು. ಚೈತ್ಯದ ಶೋಧ ಚೈತ್ಯ ಶಿಸ್ತುಪಾಲನೆ ಎಂದು ಕರೆಯಬಹುದಾದುದು ಪ್ರಾರಂಭ ಬಿಂದು. ನಮ್ಮ ಸತ್ತೆಯ ಮನಶ್ಶಾಸ್ತ್ರೀಯ ಕೇಂದ್ರಕ್ಕೆ ನಾವು ಚೈತ್ಯ ಎಂಬ ಹೆಸರನ್ನು ಕೊಡುತ್ತೇವೆ. ಆ ಕೇಂದ್ರದಲ್ಲಿ ನಮ್ಮ ಅಸ್ತಿತ್ವದ ಅತ್ಯುಚ್ಚ ಸತ್ಯ ಆಸೀನವಾಗಿದೆ, ಅದನ್ನು ನಾವು ಅರಿತುಕೊಳ್ಳಬಹುದು, ಅದು ಚಲಿಸುವಂತೆ ಮಾಡಬಹುದು. ಆದ್ದರಿಂದ ಅದರ ಸಾನ್ನಿಧ್ಯದ ಬಗ್ಗೆ ಪ್ರಜ್ಞಾವಂತರಾಗುವುದು, ಅದು ನಮಗೆ ಜೀವಂತ ವಾಸ್ತವತೆಯಾಗುವವರೆಗೆ ಮತ್ತು ನಾವು ಅದರೊಡನೆ ಗುರುತಿಸಿಕೊಳ್ಳುವವರೆಗೆ ಅದರ ಮೇಲೆ ಏಕಾಗ್ರತೆ ವಹಿಸುವುದು ಅತ್ಯಂತ ಮಹತ್ವದ ವಿಷಯವಾಗಿರುತ್ತದೆ. ಈ ಗ್ರಹಿಕೆಯನ್ನು ಹಾಗೂ ಕೊನೆಯ ಪರಿಣಾಮವೆಂದು ಈ ಗುರುತಿಸಿಕೊಳ್ಳುವಿಕೆಯನ್ನು ಸಿದ್ಧಿಸಿಕೊಳ್ಳಲು ಅನೇಕ ಕಾಲಗಳಲ್ಲಿ ಹಾಗೂ ಅನೇಕ ಸ್ಥಳಗಳಲ್ಲಿ ಹಲವಾರು ವಿಧಾನಗಳನ್ನು ವಿಧಿಸಲಾಗಿದೆ. ಆ ವಿಧಾನಗಳಲ್ಲಿ ಕೆಲವು ಮನಶ್ಶಾಸ್ತ್ರೀಯ ವಾದವುಗಳು, ಕೆಲವು ಧಾರ್ಮಿಕ ವಾದವುಗಳು, ಕೆಲವು ಯಾಂತ್ರಿಕವಾಗಿಯೂ ಕೂಡ ಇರುವುದು ಕಂಡುಬರುತ್ತದೆ. ನೈಜತೆಯಲ್ಲಿ ಪ್ರತಿಯೊಬ್ಬನು, ತನಗೆ ಸರಿಹೋಗುವ, ಅತ್ಯಂತ ಒಳ್ಳೆಯ ವಿಧಾನವನ್ನು ಕಂಡುಕೊಳ್ಳಬೇಕು. ಮತ್ತು ಮನುಷ್ಯನಲ್ಲಿ ಉತ್ಸಾಹಭರಿತ ಮತ್ತು ಏಕಪ್ರಕಾರದ ಅಭೀಪ್ಸೆ ಇದ್ದರೆ, ಪಟ್ಟು–ಹಿಡಿಯುವ ಕ್ರಿಯಾಶೀಲ ಸಂಕಲ್ಪವಿದ್ದರೆ ಅವನು ಒಂದಿಲ್ಲೊಂದು ರೀತಿಯಲ್ಲಿ – ಬಾಹ್ಯದಲ್ಲಿ ಓದುವುದರ, ಅಭ್ಯಾಸ ಮಾಡುವುದರ ಮೂಲಕ, ಆಂತರಿಕವಾಗಿ ಏಕಾಗ್ರತೆ, ಧ್ಯಾನ, ಸಿದ್ಧಿ ಹಾಗೂ ಅನುಭವಗಳ ಮೂಲಕ – ಅವನು ತಲುಪಬೇಕಾದ ಗುರಿಗೆ ಅವಶ್ಯವಾದ ಸಹಾಯವನ್ನು ದೊರಕಿಸುತ್ತಾನೆ. ಕೇವಲ ಒಂದೇ ಒಂದು ವಿಷಯ ಅತ್ಯಗತ್ಯದ್ದಾಗಿದೆ: ಅದೆಂದರೆ ಶೋಧ ಮಾಡಲು ಮತ್ತು ಸಿದ್ಧಿಸಿಕೊಳ್ಳಲು ಸಂಕಲ್ಪ ಹೊಂದಿರುವುದಾಗಿದೆ. ಈ ಶೋಧ ಹಾಗೂ ಸಿದ್ಧಿ ನಮ್ಮ ಸತ್ತೆಯ ಪ್ರಾಥಮಿಕ ಪೂರ್ವಮಗ್ನತೆಯ ವಿಷಯವಾಗಬೇಕು, ಅದು ಬಹು ಮೌಲ್ಯವುಳ್ಳ ಮುತ್ತಿನ ಹಾಗಿದ್ದು ಅದನ್ನು ನಾವು ಎಷ್ಟೇ ಬೆಲೆ ತೆತ್ತಾದರೂ ದೊರಕಿಸಬೇಕು. ನೀವೇನೇ ಮಾಡಲಿ, ನಿಮ್ಮ ಉದ್ಯೋಗ ಹಾಗೂ ಚಟುವಟಿಕೆ ಏನೇ ಆಗಿರಲಿ, ನಿಮ್ಮ ಸತ್ತೆಯ ಸತ್ಯವನ್ನು ಕಂಡುಕೊಳ್ಳುವ ಹಾಗೂ ಅದರೊಡನೆ ತಾದಾತ್ಮ್ಯ ಪಡೆಯುವ ಸಂಕಲ್ಪ ಯಾವಾಗಲೂ ಜೀವಂತವಾಗಿರಬೇಕು ಮತ್ತು ನೀವು ಕೈಕೊಳ್ಳುವುದೆಲ್ಲದರ, ಭಾವನೆಗೆ ತಂದುಕೊಳ್ಳುವುದರ, ಯೋಚಿಸುವುದೆಲ್ಲದರ ಹಿಂದೆ ಉಪಸ್ಥಿತವಿರಬೇಕು.

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ.ನಗರ 1ನೇ ಹಂತ, ಬೆಂಗಳೂರು

ದಿನಾಂಕ 01–02–2025 ಶನಿವಾರ ಮೀರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆ ವತಿಯಿಂದ ಜ್ಯೋತಿ ಪ್ರಸರಣ ಕಾರ್ಯಕ್ರಮ ನೆರವೇರಿಸಲಾಯಿತು. ಸಂಸ್ಥೆಯ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್ ಜ್ಯೋತಿ ಬೆಳಗುವುದರ ಮೂಲಕ ಚಾಲನೆ ನೀಡಿದರು. ಮುಖ್ಯ ಅತಿಥಿಗಳಾಗಿ ಡಾ॥ ಜಿ.ಎನ್. ಸಂಗೀತಾ, ಹಿರಿಯ ಅಧ್ಯಾಪಕರು, ಸೆನೆಟ್ ಸದಸ್ಯರು, NMKRV ಮಹಿಳಾ ಕಾಲೇಜು, ಬೆಂಗಳೂರು ಇವರು ಆಗಮಿಸಿದರು. ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಶಾರದಾಂಬಾ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ತೋರಿದ ವಿದ್ಯಾರ್ಥಿಗಳಿಗೆ ಸ್ಮರಣ ಸಂಚಿಕೆಗಳನ್ನು ನೀಡಲಾಯಿತು. ಸಂಸ್ಥೆಯ ಶಿಕ್ಷಕ ವೃಂದ, ಸಂಸ್ಥೆಯ ಮಹಾಪ್ರಬಂಧಕರು, ಪೋಷಕರು ಉಪಸ್ಥಿತರಿದ್ದರು. ಶಿಕ್ಷಕ ವೃಂದದವರು ಜ್ಯೋತಿಯನ್ನು ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಹಸ್ತಾಂತರಿಸಿದರು. ಆನಂತರ, ಹತ್ತನೇ ತರಗತಿ ವಿದ್ಯಾರ್ಥಿಗಳು ಒಂಭತ್ತನೇ ತರಗತಿ ವಿದ್ಯಾರ್ಥಿಗಳಿಗೆ ಮರು ಹಸ್ತಾಂತರ ಮಾಡಿದರು. ಶ್ರೀಮಾತಾರವಿಂದರ ಪಾದ ಚರಣಗಳಿಗೆ ಪುಷ್ಪವನ್ನು ಸಮರ್ಪಿಸಲಾಯಿತು. ನಾಡಗೀತೆಯೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಯಿತು.

ದಿನಾಂಕ 21ನೇ ಫೆಬ್ರವರಿ 2025ರ ಶುಕ್ರವಾರ ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್ ವತಿಯಿಂದ "ಶ್ರೀಮಾತೆಯವರ ಜನ್ಮದಿನ"ವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 7.30 ರಿಂದ 7.50 ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರ ವಿತರಿಸಲಾಯಿತು. ತತ್ಸಬಂಧ ಸಾಯಂಕಾಲ 5.00 ರಿಂದ 6.30 ಗಂಟೆಯವರಗೆ **"Dhyana redefined"** ಎಂಬ ವಿಷಯವಾಗಿ ಡಾ॥ ನಾಗೇಂದ್ರ (ಸಾಕ್ಷಿ) ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು, ಸಾಧಕರು ಮತ್ತು ಇತರರು ಹಾಜರಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಸಹ ಪ್ರಸ್ತುತ ಪಡಿಸಲಾಯಿತು.

"On Meditation and Spiritual Exercises" ವಿಷಯ ಕುರಿತು ದಿನಾಂಕ 10ನೇ ಫೆಬ್ರವರಿ 2025 ರಿಂದ 20ನೇ ಮಾರ್ಚ್ 2025 ವರೆಗೂ ಶ್ರೀ ಅರವಿಂದ ಸಂಕೀರ್ಣದ ಸಾಂಸ್ಕೃತಿಕ ಸಭಾ ಭವನದಲ್ಲಿ ಫೋಟೋ ಚಿತ್ರ ಪ್ರದರ್ಶನ ಆಯೋಜಿಸಲಾಗಿದೆ.

28–02–2025 ಶುಕ್ರವಾರದಂದು "ಅರೋವಿಲ್ಲೆ ದಿನ"ವನ್ನು ಆಚರಿಸಲಾಯಿತು. ತತ್ಸಬಂಧ ಸಾಯಂಕಾಲ 5.00 ರಿಂದ 6.00 ಗಂಟೆಯವರಗೆ "Building Matrimandir" ಎಂಬ ವಿಷಯದ ಬಗ್ಗೆ ವೀಡಿಯೋ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು, ಸಾಧಕರು ಮತ್ತು ಇತರರು ಹಾಜರಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಸಹ ಪ್ರಸ್ತುತ ಪಡಿಸಲಾಯಿತು.

## STATEMENT ABOUT OWNERSHIP AND OTHER PARTICULARS ABOUT NEWSPAPER AKHIL BHARAT PATRIKA

**FORM IV**

1. Place of Publication : Bangalore

2. Periodicity of its Publication : Monthly

3. Printer's Name : Dr. Ajit Sabnis
   Nationality : Indian
   Address : No. 39 & 38 (P) 30th Main, 9th Cross, Sri Aurobindo Marg, J P Nagar I Phase, Bangalore - 560 078.

4. Publisher's Name : Dr. Ajit Sabnis
   Nationality : Indian
   Address : No. 39 & 38 (P) 30th Main, 9th Cross, Sri Aurobindo Marg, J P Nagar I Phase, Bangalore - 560 078.

5. Editor's Name : Sri Puttu Parashuram Kulkarni
   Nationality : Indian
   Address : No. 39 & 38 (P) 30th Main, 9th Cross, Sri Aurobindo Marg, J P Nagar I Phase, Bangalore - 560 078.

6. Names and addresses of individuals who own the newspaper and partners or shareholders holding More than one percent of the total capital.
   Name : Sri Aurobindo Society
   Nationality :
   Address : No. 11, Saint Martin Street, Puducherry - 605 001.

I, Dr. Ajit Sabnis, hereby declare that the particulars given above are true to the best of my knowledge and belief.

Sd/-

Date : 28-02-2025

Dr. Ajit Sabnis



ಫೋಟೊ: ಇಮೇಜಿಂಗ್ ಸಾವಿತ್ರಿ

ಅವನ ಹೃತ್ಕಮಲವನ್ನೀಗ ಅಪರಿಮೇಯದಭೀಪ್ಸೆಯದುವು

**RNI No. 22511/1971**
No. of Pages **60 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

ಸಂವಹನ ವಿಮುಖ ಸಲ್ಲಾಪರಹಿತ ನೆಲೆಸಿರುವ ತಾಣದೆಡೆಗೆ
ಪಯಣಿಸುವನೀಗ ಅವನಲ್ಲಿ ಬೇಗ ಸಂಪರ್ಕ ಪಡೆವ ಬಗೆಗೆ
ತನ್ನದೇ ಒಂಟಿ ಹೆಜ್ಜೆಗಳ –ಸದ್ದು ಬೆಂಬತ್ತಿ ಬರುವದನ್ನು
ಆಲಿಸುವನಲ್ಲಿ ಪ್ರತಿಧ್ವನಿಯ ಅಲೆಯ ಆಳದಲಿ ಇರುವದನ್ನು
ವಿವಿಕ್ತತೆಯಲ್ಲಿ ನಿರ್ಮಾಯ ಮೌನದಿಂದಿರುವ ತಾಣಗಳಿಗೆ
ಶಾಶ್ವತದ ನೆಲೆಯ ಅವಕಾಶದಲ್ಲಿ ಸ್ಪಂದನವ ತರುವ ಘಳಿಗೆ.

**– ಪುಟ್ಟು ಕುಲಕರ್ಣಿ**
**(ಶ್ರೀ ಅರವಿಂದರ ‘ಸಾವಿತ್ರಿ’; ದಳ 1 ರೇಣು 5 ಪುಟ 30 ಮತ್ತು 31)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.